
ನಮ್ಮ ಮಾನಸ

ಸಂಪುಟ : 5 ಜನವರಿ 2012 ಸಂಚಿಕೆ: 9 ಬೆಲೆ : 10/-



ಆರೋಗ್ಯಕರ ಸಮಾಜದತ್ತ, ಯೋಜನೆಗಳ ಮಹಾಪೂರ, ಕರ್ನಾಟಕ ಮುನ್ನಡೆಯುತ್ತಿದೆ

ಸಮಗ್ರ ಕರ್ನಾಟಕದ ಸಮೃದ್ಧ ಅಭಿವೃದ್ಧಿಗಾಗಿ ಸಾಮಾಜಿಕ ಆರೋಗ್ಯ ಸೇವೆಯಲ್ಲಿ ಉತ್ತಮ ಗುಣಮಟ್ಟವು ಎಲ್ಲರಿಗೂ ದೊರೆಯುವಂತೆ ಮಾಡಲು ಸರಕಾರವು ಆದ್ಯತೆ ನೀಡಿ ಕಾರ್ಯಪ್ರವೃತ್ತವಾಗಿದೆ. ಸಾರ್ವತ್ರಿಕ ಆರೋಗ್ಯ ನಿಟ್ಟಿನಲ್ಲಿ ಜನಪ್ರಿಯವಾಗಿರುವ "ವಾಜಪೇಯಿ ಆರೋಗ್ಯಶ್ರೀ" ಮತ್ತು "ಆರೋಗ್ಯ ಕವಚ" ಯೋಜನೆಗಳ ಯಶಸ್ಸಿನ ಮಾಹಿತಿ ಹೀಗಿವೆ.

ವಾಜಪೇಯಿ ಆರೋಗ್ಯ ಶ್ರೀ

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರು ದುರಂತ ಮಾಡುವ ಆರೋಗ್ಯ ಅಪಘಾತಗಳಿಗೆ ಒಳಗಾದಾಗ ಉಂಟಾಗುವ ತೊಂದರೆಯನ್ನು ನಿವಾರಿಸಲು ಉಚಿತ ಆರೋಗ್ಯ ಚಿಕಿತ್ಸಾ ಯೋಜನೆ "ವಾಜಪೇಯಿ ಆರೋಗ್ಯಶ್ರೀ". ಇದನ್ನು ಪ್ರಾರಂಭ ಹಂತದಲ್ಲಿ ಬೀದರ್, ಗುಲ್ಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದು, ಯೋಜನೆಯ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಎಲ್ಲಡೆಗೂ ವಿಸ್ತರಿಸಲಾಗುತ್ತಿದೆ.

- ವಾಜಪೇಯಿ ಆರೋಗ್ಯಶ್ರೀ ಯೋಜನೆಯು ಫೆಬ್ರವರಿ 2010ರಿಂದ ಜಾರಿಯಲ್ಲಿದೆ.
- ಪ್ರಾರಂಭಿಕ ಹಂತದಲ್ಲಿ 5 ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಂಡಿದ್ದು, ಅನಂತರ 7 ಜಿಲ್ಲೆಗಳಿಗೆ ಮುಂದುವರಿಸಲಾಗಿದೆ ಹಾಗೂ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಗೂ ಯೋಜನೆಯು ಹಂತ ಹಂತವಾಗಿ ಅನುಷ್ಠಾನಗೊಳ್ಳಲಿದೆ.
- ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟಗಾಯಗಳು, ಪಾಲಿಟ್ರೋಮ ಹಾಗೂ ಇತರ ಚಿಕಿತ್ಸೆ/ಶಸ್ತ್ರಚಿಕಿತ್ಸೆಗಳಿಗೆ ರೂ. 2 ಲಕ್ಷದವರೆಗೆ "ಫ್ಯಾಮಿಲಿ ಫ್ಲೋಟರ್" ಆಧಾರದ ಮೇಲೆ, ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.
- ಉತ್ತರ ಕರ್ನಾಟಕದ ಗುಲ್ಬರ್ಗಾ ಮತ್ತು ಬೆಳಗಾವಿಯ 13 ಜಿಲ್ಲೆಗಳ 32.50 ಲಕ್ಷ ಬಿಪಿಎಲ್ ಕುಟುಂಬಗಳಿಗೆ 'ವಾಜಪೇಯಿ ಆರೋಗ್ಯಶ್ರೀ' ಯೋಜನೆಯ ಶ್ರೀರಕ್ಷೆ.
- 8740 ಫಲಾನುಭವಿಗಳು, ರೂ. 2 ಲಕ್ಷವರೆಗಿನ ಉಚಿತ ಚಿಕಿತ್ಸೆ/ಶಸ್ತ್ರಚಿಕಿತ್ಸೆ ಪಡೆದಿದ್ದಾರೆ.
- 2011-12ರ ಆಯವ್ಯಯದಲ್ಲಿ "ವಾಜಪೇಯಿ ಆರೋಗ್ಯಶ್ರೀ" ಯೋಜನೆಗಾಗಿ ರೂ. 40 ಕೋಟಿ ಹಂಚಿಕೆ.

ಆರೋಗ್ಯ ವಿಮೆ

ಉಚಿತವಾಗಿ ವೈದ್ಯಕೀಯ, ಪೊಲೀಸು ಮತ್ತು ಅಗ್ನಿಶಾಮಕ ಸಂಬಂಧಿಸಿದಂತೆ ಯಾವುದೇ ತುರ್ತು ಸ್ಥಿತಿಯಲ್ಲಿ ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ '108' ಸಂಖ್ಯೆಗೆ ಕರೆ ಮಾಡಿದಲ್ಲಿ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಆಧುನಿಕ ಉಪಕರಣಗಳನ್ನು ಒಳಗೊಂಡ ಆಂಬ್ಯುಲೆನ್ಸ್ ಘಟನೆಯ ಸ್ಥಳಕ್ಕೆ ತೆರಳಿ, ತುರ್ತು ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ, ತದನಂತರ ಆಸ್ಪತ್ರೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಈ ಸೇವೆ ಸಂಪೂರ್ಣ ಉಚಿತವಾಗಿದೆ. ಇದನ್ನು "ಆರೋಗ್ಯ ಕವಚ 108" ಯೋಜನೆ ಎಂದು ಕರೆಯಲಾಗುತ್ತಿದೆ.

- ಆರೋಗ್ಯ ಕವಚ 18 ಯೋಜನೆಯಡಿ 2.18 ಕೋಟಿ ಕರೆಗಳನ್ನು ಸ್ವೀಕರಿಸಿದೆ.
- 10.77 ಲಕ್ಷ ಅಮೂಲ್ಯ ಜೀವಗಳ ರಕ್ಷಣೆಯಾಗಿದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಒಟ್ಟು 517 ಆಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ.
- ಆರೋಗ್ಯ ಕವಚ 108 ಯೋಜನೆಯಡಿ ಕಾರ್ಯ ಕೈಗೊಂಡ ಪ್ರಕರಣಗಳಲ್ಲಿ ಶೇಕಡ 42 ರಷ್ಟು ಹೆರಿಗೆಗೆ ಸಂಬಂಧಿಸಿದವುಗಳು.

ಕಳೆದ 3 ವರ್ಷಗಳ ಹಿನ್ನೋಟ ಇಲ್ಲಿದೆ

ಆರೋಗ್ಯ ಕವಚ ವೈಶಿಷ್ಟ್ಯಗಳು

● 24 x 7 ತುರ್ತು ಸೇವೆಗಳು ಲಭ್ಯ. ● ಉಚಿತ ಕರೆಗಳು, ನೇರವಾಗಿ ಯಾವುದೇ ದೂರವಾಣಿ ಇಲ್ಲವೆ ಮೊಬೈಲ್‌ನಿಂದ ಸಾಧ್ಯ. ● ಸರಾಸರಿ 18 ನಿಮಿಷಗಳಲ್ಲಿ ತುರ್ತು ಸೇವಾ ಸಹಾಯ ನಿಮಗೆ ಲಭ್ಯ. "108" ಕರೆಗಳನ್ನು ಇವುಗಳಿಗಾಗಿ ಮಾಡಿರಿ: "ಜೀವರಕ್ಷಣೆಗಾಗಿ" ಅಪರಾಧಗಳು ನಡೆಯುತ್ತಿರುವಾಗ. ● ಬೆಂಕಿ ಅವಘಡಗಳಿಗಾಗಿ.

ಸಂಪೂರ್ಣ ಆರೋಗ್ಯ - ಸದೃಢ ಕರ್ನಾಟಕ ಅಭಿವೃದ್ಧಿಯೇ ಆಡಳಿತ ಮಂತ್ರ

ನಮ್ಮ ಮಾನಸ

ಜನವರಿ 2012

ಸಂಪುಟ : 5 ಸಂಚಿಕೆ : 9

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಚಂಪಾವತಿ ಹೆಚ್.ಎಸ್., ಸವಿತಾ ಎ.
ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ.

ಸಲಹೆ – ಸಹಕಾರ
ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎನ್.

ಮಾನಸ ಬಳಗ
ತಸ್ನೀಂ ತಾಜ್, ವೇದವಲ್ಲಿ ಜಿ.ವಿ.
ವತ್ಸಲ ವೈ.ಎನ್., ಶ್ಯಾಮಲ, ತಾಜುಮಾ

ಚಂದಾ ವಿವರ

ಬಿಡಿಪ್ರತಿ	10–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಸಂಪಾದಕೀಯ

ವಿದಾಯದ ಹಾದಿಯಲ್ಲಿ 'ನಮ್ಮ ಮಾನಸ'

ಮಾನಸ ಸಹೃದಯರಲ್ಲಿ,

ಮಹಿಳಾ ಚಳವಳಿಯ ಧ್ವನಿ ಹಾಗೂ ಮುಖವಾಣಿ ಯಾಗಬೇಕೆಂಬ ಉದ್ದೇಶದಿಂದ 1986 ರಿಂದ 'ಮಾನಸ' ತಿಂಗಳ ಪತ್ರಿಕೆಯನ್ನು ಇಲ್ಲಿಯವರೆಗೆ ಎಲ್ಲಾ ಏಳು–ಬೀಳುಗಳ ನಡುವೆ ಒಂದು ಸ್ವಾಯತ್ತ ಪತ್ರಿಕೆಯಾಗಿ ಪ್ರಕಟಿಸಿಕೊಂಡು ಬಂದಿದ್ದೇವೆ. ತಾತ್ತ್ವಿಕ ಸಂಘರ್ಷದಿಂದಾಗಿ ಮಹಿಳಾ ಸಂಘಟನೆಯೊಂದರಿಂದ ಬೇರೆಯಾಗಿ ಹೆಜ್ಜೆಇಟ್ಟ 'ಮಾನಸ' ತಿಂಗಳಪತ್ರಿಕೆ ಇಲ್ಲಿಯವರೆಗೆ ಸ್ವಾಯತ್ತತೆಯ ಕಲ್ಪನೆಯನ್ನು ಹಲವಾರು ಬಗೆಗಳಲ್ಲಿ ವಿಸ್ತರಿಸಿಕೊಳ್ಳುತ್ತಾ ಬಂದಿದೆ. ವಿದೇಶಿ ಅಥವಾ ಪ್ರಭುತ್ವ ಮೊದಲ್ಗೊಂಡು ಯಾವುದೇ ವ್ಯವಸ್ಥೆಯಿಂದಲೂ ಅಡ್ಡದಾರಿಯ ನೆರವು ಪಡೆಯದೇ ಪತ್ರಿಕೆ ನಡೆಸುವುದು ಉದ್ದೇಶವಾಗಿತ್ತು. ಚಳವಳಿಯ ಬೆನ್ನೆಲುಬಾದ ಪತ್ರಿಕೆ ಜನರಿಂದ ಸಂಗ್ರಹಿಸುವ ಧನ ಸಹಾಯದಿಂದ ಮಾತ್ರ ನಡೆಯಬೇಕು ಎಂಬ ನಿರ್ಧಾರದ ಹಿಂದೆ ಅನೇಕ ರಾಜಕೀಯ ತಾತ್ತ್ವಿಕತೆಗಳು ಕೂಡಾ ಇದ್ದವು. ಹಣಕಾಸು ವಿಚಾರದಲ್ಲಿ ಪಾರದರ್ಶಕತೆ, ಸ್ವಹಿತಾಸಕ್ತಿಗಳಿರದ ನಿಷ್ಠೆ, ಹೆಸರು, ಪ್ರತಿಷ್ಠೆ, ಪ್ರಶಸ್ತಿಗಳಿಗಾಗಿ ಅಥವಾ ವೈಯಕ್ತಿಕ ಮಟ್ಟದ ಸಾಧನೆಯ ಗುರಿ ಇರದ ಒಂದು ಸಾಮೂಹಿಕ ನಾಯಕತ್ವದ ಬದ್ಧತೆ, ಸಂಘಟನೆಯಲ್ಲಿ ಹಾಗೂ ಶ್ರಮ ವಿಭಜನೆಯಲ್ಲಿ ಶ್ರೇಣೀಕರಣ ಹೊಂದದಿರುವುದು, ಸಾಂಸ್ಥಿಕ ಸ್ವರೂಪವಿರದ ಸಂಘಟನೆಯ ಕಲ್ಪನೆ – ಹೀಗೆ ಸ್ವಾಯತ್ತತೆಯ ಕಲ್ಪನೆಯನ್ನು ವಿಸ್ತರಿಸುವ ಪ್ರಯತ್ನವನ್ನು 'ಮಾನಸ ತಿಂಗಳ ಪತ್ರಿಕೆ' ಮಾಡಿದೆ. ಒಂದು ಕೊಠಡಿಯನ್ನು (ಬಾಡಿಗೆಗಾಗಿ) ಹೊಂದಲೇಬೇಕೆನ್ನುವ ಪ್ರಯತ್ನವನ್ನು ಕೂಡಾ ಗಂಭೀರವಾಗಿ ಮಾಡಿದವರೇ ಅಲ್ಲ. 1986 ರಿಂದ 2007ರವರೆಗೆ ಮಾನಸದ ಸಭೆಗಳು ಸವಿತ, ನೀಲಾಂಜನ, ಸರಸ್ವತಿ, ಮಂಜುಳ, ಶಾರದ, ಚಂಪಾ, ರಾಜೇಶ್ವರಿ, ಗಾಯತ್ರಿ, ವೇದ, ಗೀತ, ವನಜ, ಸಾವಿತ್ರಿ, ಪುಷ್ಪ, ವತ್ಸಲ – ಹೀಗೆ ಆಯಾಯ ಕಾಲಕ್ಕೆ ಕ್ರಿಯಾಶೀಲರಾಗಿ ಪತ್ರಿಕೆಗಾಗಿ ಬದ್ಧತೆಯಿಂದ ದುಡಿದವರ ಮನೆಗಳಲ್ಲಿಯೇ ನಡೆದಿವೆ. ಸಾರ್ವಜನಿಕ ಸ್ಪೇಸ್‌ಅನ್ನು ಸಾಮಾಜಿಕ ಕಾರ್ಯಗಳಿಗಾಗಿ ಬಳಸಬೇಕು ಎನ್ನುವ ಕಾರಣಕ್ಕಾಗಿ ರವೀಂದ್ರ ಕಲಾಕ್ಷೇತ್ರದ ಕಟ್ಟೆಯಮೇಲೆ, ಹುಲ್ಲಿನಮೇಲೆ ಹಲವಾರು ವರ್ಷ ಮಾನಸಪತ್ರಿಕೆಯ ಸಭೆಗಳನ್ನು ಮಾಡಿದ್ದೇವೆ. ಆಯಾಯ ಕಾಲಕ್ಕೆ ಜನರಿಂದ ಸಂಗ್ರಹಿಸಿದ ಹಣ ಪತ್ರಿಕೆಯ ಪ್ರಕಟಣೆಗಾಗಿ ಖರ್ಚಾಗಿದೆಯೇ ಹೊರತು ಮಾನಸದ ಖಾತೆಯಲ್ಲಿ ನಾವು ಹಣ ಸಂಗ್ರಹಿಸಿ ಇಟ್ಟವರೇ ಅಲ್ಲ. ಯಾರು ಯಾರು, ಯಾವ ಯಾವ ಕಾಲಕ್ಕೆ ಕ್ರಿಯಾಶೀಲರಾಗಿ ದುಡಿದರೋ ಅಂತಹ ಸದಸ್ಯರ ಸಾಮೂಹಿಕ ನಾಯಕತ್ವದಲ್ಲಿ ಕಳೆದ 26 ವರ್ಷದಲ್ಲಿ ಮಾನಸ ಪ್ರಕಟಗೊಳ್ಳುತ್ತಾ ಬಂದಿದೆ. ತಾತ್ತ್ವಿಕಬದ್ಧತೆ, ಲಾಭದಆಕಾಂಕ್ಷೆ ಇಟ್ಟುಕೊಳ್ಳದೆ ತಮ್ಮನ್ನು ತೊಡಗಿಸಿಕೊಂಡು ದುಡಿದವರಿಂದಾಗಿ, ಅವರ ಧ್ವನಿಯಿಂದಾಗಿ ಮಾನಸ ತಿಂಗಳಪತ್ರಿಕೆ ಚಳವಳಿಯ ಲಯಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಹೀಗೆ ಸ್ವಾಯತ್ತತೆಯ ಕಲ್ಪನೆಯನ್ನು ವಿಸ್ತರಿಸುತ್ತಲೇ ಸ್ವಾಯತ್ತ ಮಹಿಳಾ ಚಳವಳಿಯ ಪರಿಕಲ್ಪನೆಗಳನ್ನು ಒಡಲೊಳಗೆ ಇಟ್ಟುಕೊಂಡು ಮೂರ್ತರೂಪಕ್ಕೆ ತರಲು 2007ರವರೆಗೆ ಮಾನಸಪತ್ರಿಕೆಯ ಪ್ರಕಟಣೆಯ ಜೊತೆ ಹೆಜ್ಜೆಹಾಕಿ ಶ್ರಮದಿಂದ ಅನೇಕರು ದುಡಿದದ್ದು ಮಾನಸಪತ್ರಿಕೆಯ ಒಂದುಭಾಗದ ಇತಿಹಾಸ. 1975 ರಿಂದ 2005ರವರೆಗೆ ಅತ್ಯಂತ ಶಕ್ತಿಶಾಲಿಯಾಗಿ, ಭಾರತದುದ್ದಕ್ಕೂ ಪ್ರಬಲವಾಗಿ ಛಾಪು ಮೂಡಿಸಿದ ಮಹಿಳಾ ಚಳವಳಿಯ ಕಾವನ್ನು ಕಾಯ್ದಿರಿಸಿಕೊಂಡಿತು ಪತ್ರಿಕೆ. ಮಹಿಳಾ ಚಳವಳಿ ಎತ್ತಿದ ತಾತ್ತ್ವಿಕತೆ, ಸಮಸ್ಯೆಗಳು, ಸವಾಲುಗಳನ್ನು ಮಾನಸ ಪತ್ರಿಕೆಯ ಮುಖಾಂತರ ಪ್ರಕಟಿಸುವಲ್ಲಿ ಯಶಸ್ವಿಯಾಗಿದ್ದೇವೆ.

ಆದರೆ ದಾರಿ ಸುಲಭವಾದದ್ದೇನೂ ಆಗಿರಲಿಲ್ಲ. 2007ರ ಜೂನ್‌ವರೆಗೆ ಪತ್ರಿಕೆಯ ಪ್ರಕಟಣೆ ಹಾಗೂ ಹೀಗೂ ಸಾಗಿ ಬಂದಿತ್ತು. ಹಲವರು ಹಲವಾರು ವೈಯಕ್ತಿಕ ಹಾಗೂ ತಾತ್ತ್ವಿಕ ಕಾರಣಗಳಿಂದ ಪತ್ರಿಕೆಯಿಂದ ದೂರ ಸರಿದಾಗ ಸದಸ್ಯರ ಶ್ರಮದಿಂದಲೇ ನಡೆಯುತ್ತಿದ್ದ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕೆಂಬ ನಿರ್ಧಾರಕ್ಕೆ ಬರುವುದು ಅನಿವಾರ್ಯವಾಗಿತ್ತು. ಆದರೆ ಮೊದಲಿನಿಂದಲೂ ಮಾನಸದ ಸಲಹೆ–ಸಹಕಾರದಲ್ಲಿದ್ದ ಡಾ. ವಿಜಯಾ ಅವರು ಸಾಂಸ್ಕೃತಿಕ ವಲಯದಲ್ಲಿ ಮಾನಸದಂತಹ ಮಹಿಳಾ ಪತ್ರಿಕೆಯ ಅಗತ್ಯವಿದೆ ಎಂದರು ಮತ್ತು ಇವರು 2007ರಿಂದ ಮಾನಸ ಪತ್ರಿಕೆಯ ವಿನ್ಯಾಸ, ಲೇಖನ, ಕರಡುಪ್ರತಿ ನೋಡುವ ಹಾಗೂ ತಿದ್ದುವ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುತ್ತಾ ಪತ್ರಿಕೆಯ ಗುಣಮಟ್ಟವನ್ನು ಎತ್ತರಿಸುವುದರಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ. ತಾಂತ್ರಿಕ ಕಾರಣಗಳಿಂದಾಗಿ 2007ರಲ್ಲಿ ಮಾನಸ ತಿಂಗಳ ಪತ್ರಿಕೆ 'ನಮ್ಮ ಮಾನಸ' ಎಂಬ ಹೆಸರಿನಲ್ಲಿ ಪ್ರಕಟಗೊಳ್ಳ ತೊಡಗಿತು.

ಒಳಗಿನ ಪುಟಗಳಲ್ಲಿ....

ಈ ಸಂಚಿಕೆಯ ಇಂದಿರಾ ಗೋಸ್ವಾಮಿ ಕುರಿತ ಲೇಖನದ ಪ್ರಾಯೋಜಕರು:
ಸವಿತಾ ನಾಗಭೂಷಣ

ಎಲ್ಲಾ ಚಳವಳಿಯ ಹಾಗೆ ಮಹಿಳಾ ಚಳವಳಿಯ ಕಾವು ಕಡಿಮೆಯಾದ ಇಂದಿನ ಸಂದರ್ಭದಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಚಳವಳಿಯ ಲಯಗಳನ್ನು ಹಿಡಿದಿಡುವಲ್ಲಿ, ಪತ್ರಿಕೆಯ ಲೇಖನಗಳ ಮೌಲ್ಯಾಧಾರಗಳನ್ನು ಕಾಪಾಡಿಕೊಂಡು ಹೋಗುವಲ್ಲಿ, ತಾಂತ್ರಿಕ ವಿಚಾರಗಳನ್ನು ನಿಭಾಯಿಸುವಲ್ಲಿ ವಿಜಯಾ ಅವರ ಜೊತೆಗೆ ಸುಮಿತ್ರಾಬಾಯಿ, ಪುಷ್ಪ, ರಾಜೇಶ್ವರಿ ಹಾಗೂ ಚಂಪಾರವರ ಶ್ರಮ ನಿರಂತರವಾಗಿದೆ. ಈಗ 'ನಮ್ಮ ಮಾನಸ' ಸಾಂಸ್ಕೃತಿಕ ವಲಯದಲ್ಲಿ ಒಂದು ಛಾಪನ್ನು ಮೂಡಿಸಿದೆ ನಿಜ, ನಿರಂತರವಾಗಿ ಪ್ರಕಟಗೊಳ್ಳುತ್ತಿರುವುದೂ ನಿಜ. ಆದರೆ ನಡೆಯುತ್ತಿರುವ ಹೋರಾಟಗಳಿಗೆ ಸ್ಪಂದಿಸಲು, ಆ ಛಾಯೆ, ಸವಾಲುಗಳನ್ನು ನಮ್ಮ ಒಡಲೊಳಗೆ ಹುದುಗಿಸಿಕೊಳ್ಳಲು, ಇಂದಿನ ಹೋರಾಟ, ಚಳವಳಿಗೆ ಧ್ವನಿಯಾಗಲು ಸಾಧ್ಯವಾಗುತ್ತಿದೆಯೇ? ಇಂದಿನ ರಾಜಕೀಯ, ಜಾಗತೀಕರಣದ ವಾತಾವರಣದಲ್ಲಿ ಅಗತ್ಯವಾದ ಮಹಿಳಾ ತಾತ್ತ್ವಿಕತೆಯನ್ನು ಕಟ್ಟಿಕೊಡಲು ನಮಗೆ ಸಾಧ್ಯವಾಗುತ್ತಿದೆಯೇ? ಹೊಸ ಪೀಳಿಗೆಯ ಜೊತೆ ಸಂವಾದ ನಡೆಸಲು ನಮಗೇಕೆ ಸಾಧ್ಯವಾಗುತ್ತಿಲ್ಲ? ಇಂತಹ ಹಲವಾರು ಪ್ರಶ್ನೆಗಳು ನಮ್ಮನ್ನು ಕಾಡುತ್ತಲೇ ಇವೆ. ಶೈಕ್ಷಣಿಕ ವಲಯದವರಿಗೆ, ಸಂಶೋಧನೆ ನಡೆಸುವ ವಿದ್ಯಾರ್ಥಿನಿಯರಿಗೆ ಮಾತ್ರ ನಾವು ತಲುಪುವಂತಾಗಿದೆಯೇ ಎಂಬ ಅನುಮಾನಗಳೂ ಕಾಡತೊಡಗಿವೆ. ಈ ಹಿನ್ನೆಲೆಯಲ್ಲಿ ಸಾಮೂಹಿಕವಾಗಿ ಆತ್ಮಾವಲೋಕನಕ್ಕೆ ತೊಡಗಿದಾಗ ನಮಗೆ ಎದುರಾದಂತಹ ಸವಾಲುಗಳು ಹಲವಾರು.

ಮಾನಸದಂತಹ ಪತ್ರಿಕೆಗೆ ಚಳವಳಿಯ ಇತಿಹಾಸವಿದೆ. ಸಾಮಾಜಿಕ ಸಂಘರ್ಷಗಳನ್ನು ಹೋರಾಟಗಳ ರೀತಿ ಪತ್ರಿಕೆ ತನ್ನ ಒಡಲೊಳಗೆ ಹುದುಗಿಸುವ ಪ್ರಯತ್ನ ಮಾಡುತ್ತಲೇ ಬಂದಿದೆ. ಪತ್ರಿಕೆಯನ್ನು ಉಳಿಸುವ ಹಾಗೂ ಬೆಳೆಸುವ ಪ್ರಯತ್ನದಲ್ಲಿ ಆಯಾ ಕಾಲದ ಲೇಖಕಿ/ಲೇಖಕರ ಜವಾಬ್ದಾರಿಗಳೂ ಇರುತ್ತವೆಯೆಂದು ನಾವು ಭಾವಿಸುತ್ತೇವೆ. ಮಹಿಳಾ ತಾತ್ತ್ವಿಕತೆ ಬೆಳೆಸುವ, ಕಟ್ಟುವ ಲೇಖನಗಳು ಬರಲಿ ಎಂದು ನಾವು ಯಾವಾಗಲೂ ಅಪೇಕ್ಷಿಸುತ್ತೇವೆ. ಹಲವಾರು ಲೇಖಕಿಯರು ನಮ್ಮ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸಿದ್ದಾರೆ. ಅಂಥವರಿಂದಾಗಿಯೇ ಪತ್ರಿಕೆಯ ಗುಣಮಟ್ಟವನ್ನು ಇಲ್ಲಿಯವರೆಗೆ ಕಾಪಾಡಿಕೊಂಡು ಬರುವುದಕ್ಕೆ ನಮಗೆ ಸಾಧ್ಯವಾಗಿದೆ. ಆದರೆ ಬಹುಪಾಲು ಬರಹಗಾರರಿಂದ ನಮಗೆ ದೊರೆಯುತ್ತಿರುವ ಉತ್ತರಗಳು ನಮಗೆ ಆಶ್ಚರ್ಯವನ್ನು ಉಂಟುಮಾಡುತ್ತಿವೆ. 'ಬಹಳ ಜನರಿಗೆ ನಾವು ತಲುಪಬೇಕು. ಹಾಗಾಗಿ ಜನಪ್ರಿಯ ಪತ್ರಿಕೆಗಳಿಗೆ ನಾವು ಮಹಿಳೆಯರ ಬಗ್ಗೆ ಲೇಖನ ಬರೆಯುತ್ತೇವೆ', 'ಸಣ್ಣ-ಪುಟ್ಟದಾಗಿ ಬರೆಯುವುದನ್ನು ನಿಲ್ಲಿಸಿದ್ದೇನೆ, ಬೃಹತ್ ಆಶಯಗಳನ್ನು ಹೊಂದಿರುವುದನ್ನು ಮಾತ್ರ ನನಗೆ ಬರೆಯಲು ಸಾಧ್ಯ', - ಇಂತಹ ಪ್ರತಿಕ್ರಿಯೆಗಳನ್ನು ನಾವು ಹಲವಾರು ಬಾರಿ ಕೇಳಿದ್ದೇವೆ. ಹಲವಾರು ಲೇಖಕಿಯರು ಕೊಡುತ್ತೇನೆ ಎನ್ನುತ್ತಲೇ ಕಾಲ ತಳ್ಳಿ ಬಿಡುತ್ತಾರೆ. ಕೆಲವರು ತಪ್ಪಿಸಿಕೊಂಡು ಬಿಡುತ್ತಾರೆ. ದುಡ್ಡು, ಹೆಸರು, ಪ್ರಚಾರದಂತಹ ವಿಚಾರಗಳು ಮೌಲ್ಯಗಳ ಹೆಗಲೇರಿ ಮುಂದೆ ದಾಟಿ ಹೋಗುತ್ತಿರುವುದರಿಂದ 'ಮಾನಸ ದಂತಹ ಪತ್ರಿಕೆ ಮುಖ್ಯ, ಲಾಭದ ಪ್ರಶ್ನೆಯಿಲ್ಲದೇ ಇಂತಹ ಪತ್ರಿಕೆಗೆ ಇದು ನನ್ನ ಕೊಡುಗೆ' ಎನ್ನುವಂತಹ ಧೋರಣೆಗಳು ಇಲ್ಲವೆನ್ನುವಂತಾಗುತ್ತಿವೆ. ಹಾಗಾಗಿ ಲೇಖನಗಳ ಕೊರತೆ ನಮ್ಮನ್ನು ಕಾಡುತ್ತಲೇ ಇದೆ. ಬರೆದವರನ್ನೇ ಮತ್ತೆ ಬರೆಯಿರಿ ಎಂದು ಒತ್ತಾಯಿಸುವ ನಮ್ಮ ಕ್ರಮ ನಮಗೇ ಬೇಸರ ತರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಪತ್ರಿಕೆಯ ಗುಣಮಟ್ಟ ಕಾಯ್ದುಕೊಂಡು ಹೋಗುವುದೂ ಕಷ್ಟಸಾಧ್ಯವಾಗುತ್ತದೆ.

ಹೋರಾಟ, ಚಳವಳಿ 'ನಮ್ಮ ಮಾನಸ' ಪತ್ರಿಕೆಯ ಉಸಿರು. ಕಾರ್ಯಕರ್ತೆಯ ಮನೋಭಾವವುಳ್ಳ, ಈಗ ನಡೆಯುತ್ತಿರುವ ಹೋರಾಟದ ಲಯಗಳನ್ನು ಮಾನಸ ಪತ್ರಿಕೆಯೊಂದಿಗೆ ಬೆರೆಸಬಲ್ಲ, ಅಲ್ಲಿಯ ಸವಾಲುಗಳನ್ನು ಪತ್ರಿಕೆಯ ಮೂಲಕ ಪ್ರಚುರ ಪಡಿಸುವ ಮನೋಭಾವದ ಎಳೆಯ ಜನಾಂಗದ ಬರಹಗಾರರು ನಮ್ಮೊಂದಿಗಿಲ್ಲ. ನಮ್ಮೊಂದಿಗೆ ಬಂದ ಹಲವರು ಅವರವರ ವೈಯಕ್ತಿಕ ಬದುಕುಗಳಲ್ಲಿ ಕಳೆದೇ ಹೋಗಿದ್ದಾರೆ. ಇನ್ನು ಹಲವರು ವಿದೇಶಿ ನೆರವಿನ ಸಂಸ್ಥೆಗಳಲ್ಲಿ ತುಂಬ ಸಮರ್ಥ ಕಾರ್ಯಕರ್ತೆಯರಾಗಿಯೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಲಸದ ಅವಶ್ಯಕತೆಯಲ್ಲಿ ಅವರು ಇಂತಹ ಸಂಸ್ಥೆಗಳಲ್ಲಿ ಕೆಲಸ ಮಾಡುವುದು ಅನಿವಾರ್ಯ ಆಯ್ಕೆಯೂ ಆಗಿರಬಹುದು! ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳನ್ನು ತಮ್ಮ ಭವಿಷ್ಯದ ಔದ್ಯೋಗಿಕ ಭದ್ರತೆಗಾಗಿ ಬಳಸಿಕೊಳ್ಳುವವರೂ ಇದ್ದಾರೆ. ತಾಂತ್ರಿಕ ಕೆಲಸಗಳ ನಿರ್ವಹಣೆಗೆ, ಚಳವಳಿಯ ಜೊತೆಗಿನ ನಿರಂತರ ಸಂಪರ್ಕಗಳಿಗೆ, ಪತ್ರಿಕೆಯ ನೆಟ್‌ವರ್ಕ್‌ನ ಕೆಲಸಗಳಿಗೆ ಇತರ ಸದಸ್ಯರೊಂದಿಗೆ ಹೆಜ್ಜೆ ಹಾಕಿ ಸ್ಫೂರ್ತಿ ತುಂಬಬಲ್ಲ ಬದ್ಧತೆಯುಳ್ಳ ಯುವ ಜನಾಂಗದ ಕೊರತೆ ದೊಡ್ಡ ಸವಾಲೇ ಆಗಿದೆ.

ಕೊನೆಯದಾಗಿ ಆರ್ಥಿಕ ಸಂಪನ್ಮೂಲದ ಕೊರತೆ. ಕಳೆದ 26 ವರ್ಷಗಳಿಂದ ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೇ ಮಾನಸ ಪತ್ರಿಕೆಯ ಸ್ವಾಯತ್ತತೆ ಉಳಿಸಿಕೊಂಡು ಬಂದಿರುವ ನಾವು ಹಲವಾರು ಬಾರಿ ನಿಮ್ಮ ನೆರವನ್ನು ಕೇಳಿದ್ದೇವೆ. ನೀವೂ ಬೆಂಬಲ ಸೂಚಿಸಿ, ನೆರವು ನೀಡಿದ್ದೀರಿ. ಪ್ರತಿಸಲ ಕೇಳಿದವರಿಗೇ ಹಣ ಕೇಳುವುದು ಕಷ್ಟವಾಗುತ್ತಿದೆ. ಆಗ ಈಗ ಬರುವ ಚಂದಾಹಣದಿಂದ ಪತ್ರಿಕೆ ನಡೆಸುವುದು, ಮುದ್ರಣದ ವೆಚ್ಚವನ್ನು ಭರಿಸುವುದು ಸಾಧ್ಯವಿರದ ಮಾತಾಗಿದೆ.

ಈ ರೀತಿಯ ಆತ್ಮಾವಲೋಕನದ ನಂತರ **2012ರಲ್ಲಿ ಮಾನಸ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಬೇಕೆಂದು ಆಲೋಚಿಸುತ್ತಿದ್ದೇವೆ.** ನಿರಂತರವಾಗಿ ಬೆಂಬಲ, ಸಹಕಾರ ನೀಡಿದ ನಿಮ್ಮ ಗಮನಕ್ಕೆ ಈ ವಿಚಾರ ತರಬಯಸುತ್ತೇವೆ.

ನಿಮಗೆಲ್ಲರಿಗೂ 2012 ರ ಹೊಸವರ್ಷದ ಶುಭಾಶಯಗಳು.



ಎಲೆನ್ ಜಾನ್ಸನ್ ಲೀಫ್ ಲೇಮಾ ಬೊವಿ ತವಕ್ಕೊಲ್ ಕರ್ಮಾನ್

ಶಾಂತಿಸಂಧಾನದೆಡೆಗೆ ಮೂವರು ಮಹಾನ್ ಮಹಿಳೆಯರು

■ ಗಿರಿಜಾಶಾಸ್ತ್ರಿ

ಸಾಕ್ಷ್ಯಚಿತ್ರವೊಂದನ್ನು ಯುಟ್ಯೂಬಿನಲ್ಲಿ ವೀಕ್ಷಿಸುತ್ತಿದ್ದೆ. ಮಧ್ಯ ವಯಸ್ಸಿನ ಧಡೂತಿ ದೇಹದ ಆಫ್ರಿಕನ್ ಮಹಿಳೆಯೊಬ್ಬಳು ಖ್ಯಾತ ಲೂಥರ್ ಚರ್ಚ್‌ವೊಂದರಲ್ಲಿ ಸೇರಿದ ಮಹಿಳೆಯರನ್ನು ಉದ್ದೇಶಿಸಿ ಮಾತನಾಡುತ್ತಿದ್ದಳು. "enough is enough. we are tired. We are tired. This is completely terrible life to live. We are tired of war, we tired of running. We are tired of our children being raped" ಹೀಗೆ ಉದ್ವೇಗದಿಂದ, ವೇದನೆಯಿಂದ ಕೂಗುತ್ತಿದ್ದವಳು ಬೇರೆ ಯಾರೂ ಅಲ್ಲ. ಇತ್ತೀಚೆಗೆ 2011ರ ನೊಬೆಲ್ ಶಾಂತಿ ಪುರಸ್ಕಾರವನ್ನು ಪಡೆದ ಮೂವರು ಮಹಿಳೆಯರಲ್ಲಿ ಒಬ್ಬಳಾದ ಲೇಮಾ ಬೊವಿ. (Leymah Gbowee)

ಡಿಸೆಂಬರ್ 14, 2011, ಜಗತ್ತಿನ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ದಿನ. ಶಾಂತಿಯನ್ನು ಕಾಪಾಡುವ ವ್ಯಕ್ತಿಗಳಿಗೆ ಕೊಡುವ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಮೂವರು ಮಹಿಳೆಯರಲ್ಲಿ ಹಂಚಲಾಗಿತ್ತು. ಅದನ್ನು ಅವರು ಒಟ್ಟಾಗಿ ಪಡೆದ ದಿನ ಅದು. ಆಫ್ರಿಕಾದ ಲೈಬೀರಿಯಾದಿಂದ ಲೇಮಾ ಬೊವಿ ಮತ್ತು ಎಲೆನ್ ಜಾನ್ಸನ್ ಸರ್‌ಲೀಫ್ (Ellen Johnson Sirleaf), ಯೆಮನ್ ನಿಂದ ತವಕ್ಕೊಲ್ ಕರ್ಮಾನ್ (Tawakkol Karman) ಈ ಪ್ರಶಸ್ತಿಗೆ ಪಾತ್ರವಾಗಿದ್ದವರು. ವಿಭಿನ್ನ ನೆಲೆಗಳಲ್ಲಿ, ಸ್ಥಳೀಯರಿಂದಲೇ ಕೈಕೊಂಡ ಶಾಂತಿ ಹೋರಾಟವನ್ನು ಗುರುತಿಸಿ ಪ್ರೋತ್ಸಾಹಿಸುವುದು ಈ ಪ್ರಶಸ್ತಿಯ ಉದ್ದೇಶವಾಗಿದ್ದಿತು. ಈ ಸುದ್ದಿಯನ್ನು ನಮ್ಮ ಪತ್ರಿಕೆಗಳು ಬಹಳ ಸಣ್ಣದಾಗಿ ಪ್ರಕಟಿಸಿದ್ದವು. ಈ ಪ್ರಶಸ್ತಿ, ಸರ್ವಾಧಿಕಾರದ ವಿರುದ್ಧ, ಯುದ್ಧದ ವಿರುದ್ಧ ಮಹಿಳೆಯರ ಅಹಿಂಸಾತ್ಮಕ ಹೋರಾಟಕ್ಕೆ ಸಂದ ಜಯ. ಯುದ್ಧ ಮತ್ತು ಕ್ರೌರ್ಯದ ವಿರುದ್ಧ ಶಾಂತಿ ಮತ್ತು ಪ್ರೇಮವನ್ನು ಎತ್ತಿಹಿಡಿದ ತಾಯಂದಿರು ಇವರು. ಸ್ಥಳೀಯ ಹಾಗೂ ತೃಣಮೂಲ ನೆಲೆಯಲ್ಲಿ (local & grass root level) ರೂಪುಗೊಂಡ ಮಧ್ಯಮ ವರ್ಗದ ಸಾಮಾನ್ಯ ಮಹಿಳೆಯರ ಈ ಹೋರಾಟದ ಸ್ವರೂಪಗಳು ಮಾತ್ರ ಸಾಮಾನ್ಯವಾಗಿರಲಿಲ್ಲ. ನೊಬೆಲ್ ಪ್ರಶಸ್ತಿಯ ನಿರ್ದೇಶಕರು ಈ ಮಹಿಳೆಯರನ್ನು 'peace builders' ಎಂದೇ ಕರೆದಿದ್ದಾರೆ. ಇಂದಿನ ಸಂಘರ್ಷಗಳನ್ನು ಅತ್ಯಂತ ನೇರವಾದ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಪರಿಹರಿಸುವಲ್ಲಿ ಈ ಮಹಿಳೆಯರ ಕೊಡುಗೆ ಅನನ್ಯವಾದುದು. ಅದನ್ನು ಗುರುತಿಸಿ ಈ ಬಹುಮಾನವನ್ನು ಅವರಿಗೆ ಕೊಡಲಾಗಿದೆ. ಈ ಎಲ್ಲ ತಾಯಂದಿರ ಹೋರಾಟದ ಸ್ವರೂಪಗಳು ಮಹಿಳೆಯರ ಹಕ್ಕುಗಳಿಗಾಗಿ ಅಹಿಂಸಾತ್ಮಕ ಹೋರಾಟ ನಡೆಸಿದ ಅವರ ಯಶೋಗಾಥೆಯನ್ನು ಹೇಳುತ್ತವೆ.

ಲೇಮಾ ಮತ್ತು ಎಲೆನ್ ಲೈಬೀರಿಯಾದ ಸರ್ವಾಧಿಕಾರಿ ರಾಜನೀತಿಗಳ ವಿರುದ್ಧ ಹೋರಾಡಿದರೆ, ಕರ್ಮಾನ್ ಯಮನ್ ಸರ್ವಾಧಿಕಾರಿ ವ್ಯವಸ್ಥೆಯ ವಿರುದ್ಧ ಹೋರಾಡಿದವಳು. ಈ ಮೂವರು ಮಹಿಳೆಯರಿಗೂ ತಮ್ಮ ಹೋರಾಟದ ಪ್ರಾರಂಭದ ದಿನಗಳಲ್ಲಿ ದೊರೆತ ಪುರಸ್ಕಾರವೆಂದರೆ, ಹೀನಾಯ, ಬೈಗುಳ, ಅವಹೇಳನ ಮತ್ತು ಬೆದರಿಕೆ.

ಲೈಬೀರಿಯಾವನ್ನು ಅದರ ಅಂತರ್‌ಯುದ್ಧದ (civil war) ಭಯಾನಕತೆಯಿಂದ ಮುಕ್ತಗೊಳಿಸುವಲ್ಲಿ, ಧೃಡ ಸಂಕಲ್ಪದ ರಾಜಕೀಯ ಮುಂದಾಳತ್ವ ಮಹತ್ವದ ಪಾತ್ರ ವಹಿಸಬಲ್ಲುದು ಎಂಬುದನ್ನು ಎಲೆನ್ ತೋರಿಸಿಕೊಟ್ಟಳು. ಅದು ಶಾಂತಿ ಪ್ರಸ್ತಾಪಕ್ಕೆ ದಾರಿಯಾಗುತ್ತದೆ ಎಂಬುದಕ್ಕೆ ಅವಳ ಹೋರಾಟವೇ ಸಾಕ್ಷಿ. ಇಂತಹ ಮುನ್ನಡೆಗೆ ಅಸಾಧಾರಣ ಧೈರ್ಯ ಹಾಗು ತೃಣಮೂಲ ನೆಲೆಯಲ್ಲಿನ (Grass root level) ಸ್ಪಷ್ಟ ತಿಳಿವಳಿಕೆಯೂ ಅವಶ್ಯಕವಾದುದು. ಇದನ್ನು ಸಾಧಿಸಿ ತೋರಿಸಿದವಳು ಲೇಮಾ ಬೊವಿ. ಇಂತಹ ಹೋರಾಟಗಳಿಗೆ ಇರಲೇಬೇಕಾದ ಅದಮ್ಯವಾದ ಆತ್ಮವಿಶ್ವಾಸ ಮತ್ತು ಜನರನ್ನು ಪ್ರಭಾವಿಸಬಲ್ಲ ಸಂಮೋಹಕ ಶಕ್ತಿಗೆ ತವಕ್ಕೊಲ್ ಕರ್ಮಾನ್ ವ್ಯಕ್ತಿತ್ವವೇ ಒಂದು ದೊಡ್ಡ ನಿದರ್ಶನ.

ಲೇಮಾ ಬೊವಿ

ಲೈಬೀರಿಯಾದಲ್ಲಿ ಐದು ಜನ ಸಹೋದರಿಯರ ನಡುವೆ ಹುಟ್ಟಿದ ಲೇಮಾ ಹೇಳುತ್ತಾಳೆ, 'ನನ್ನ ಹದಿಹರೆಯದವರೆಗೆ ಯಾವ ಹೆಣವನ್ನೂ ನಾನು ನೋಡಿರಲಿಲ್ಲ', ತನ್ನ ಹುಟ್ಟೂರಿನಿಂದ 1989 ರಲ್ಲಿ ಕೆಲವು ಒತ್ತಡಗಳಿಗೆ ಸಿಲುಕಿ ಘಾನಾಕ್ಕೆ ಪರಾರಿಯಾದಾಗ ಅವಳು ನೋಡಿದ್ದೆಲ್ಲಾ ಅಂತರ್ ಯುದ್ಧದಿಂದ (civil war) ಮುರಿದುಬಿದ್ದ ಮನೆಗಳು, ಬೀದಿ ಬೀದಿಯಲ್ಲಿ ಊನಗೊಂಡ ಶವಗಳು, ಆಘಾತಗೊಂಡ ಜನರು. ಒಂದು ವರುಷದ ನಂತರ ಅವಳು ಮತ್ತೆ ಲೈಬೀರಿಯಕ್ಕೆ ಬಂದು ಸಮಾಜ ಸೇವೆಯಲ್ಲಿ ನಿರತಳಾಗುತ್ತಾಳೆ. ಲೈಬೀರಿಯಾದ ಅಧ್ಯಕ್ಷ ಚಾರ್ಲ್ಸ್ ಟೇಲರ್‌ನ ಸರ್ವಾಧಿಕಾರದ ವಿರುದ್ಧ ಅಂತರ್ ಯುದ್ಧ ನಡೆಯುತ್ತಿದ್ದ ಕಾಲವದು. ಸಣ್ಣ ಮಕ್ಕಳೂ ದೊಡ್ಡ ಸೈನಿಕರ ಹಾಗೆ ಬಂದೂಕಗಳನ್ನು ಹಿಡಿದುಕೊಂಡು ಜೀಪುಗಳಲ್ಲಿ ಕಂಡ ಕಂಡ ಕಡೆ ಗುಂಡುಗಳನ್ನು ಹಾರಿಸುತ್ತಾ ಲೈಬೀರಿಯಾ ಬೀದಿಗಳಲ್ಲಿ ತಿರುಗುತ್ತಿದ್ದ ಎದೆಒಡೆಯುವ ದೃಶ್ಯದಿಂದ ಆಘಾತಕ್ಕೆ ಒಳಗಾಗುತ್ತಾಳೆ. ಬಂಡಾಯಗಾರರು, ಆಗಷ್ಟೇ ಕಣ್ಣು ಬಿಡುತ್ತಿದ್ದ ಮಕ್ಕಳನ್ನು ಪುಸಲಾಯಿಸಿ, ಇಲ್ಲವೇ ಅಪಹರಿಸಿ ಅವರ ಮನಸ್ಸನ್ನು ತಿರುಚಿ (brain wash) ಅವರ ಕುಟುಂಬಗಳ ಮೇಲೆ ಅವರ ಹೆಣ್ಣುಮಕ್ಕಳ ಮೇಲೆ ಆದ ಅನ್ಯಾಯಕ್ಕೆ ಸೇಡುತೀರಿಸಿ ಕೊಳ್ಳಲು ಅವರಿಗೆ ಬಂದೂಕುಗಳನ್ನು ಕೊಟ್ಟು ತರಬೇತಿ ನೀಡಿ ಅವರನ್ನು ಬಾಲಸೈನಿಕ ರನ್ನಾಗಿ ಮಾಡುತ್ತಿದ್ದರು. ಅಲ್ಲದೆ ಅವರೊಳಗೆ ಕ್ರೌರ್ಯವನ್ನು ತುಂಬುತ್ತಿದ್ದರು. ಇದರಿಂದ ಘಾಸಿಗೊಂಡ ಲೇಮಾ, ಘಾನಾದಲ್ಲಿದ್ದಾಗ, 'Trauma health work Shop'ನಲ್ಲಿ ಕೆಲಸಮಾಡಿದ ಅನುಭವವವನ್ನು ಬಳಸಿಕೊಂಡು ಇಂತಹ ದಾಳಿಗೆ ತುತ್ತಾದ ಮಕ್ಕಳ ಸಹಾಯಕ್ಕೆ ಧಾವಿಸುತ್ತಾಳೆ. ಲೇಮಾಳ ಜೊತೆಗೆ ಕೆಲಸ ಮಾಡಿದ ರಾಬರ್ಟ್ ಪೋಮೋಳ ಪ್ರಕಾರ ಲೇಮಾಳ ಹೋರಾಟದ ಬದುಕಿಗೆ ಒಂದು ತಿರುವನ್ನು ಇತ್ತಿದ್ದು ಒಬ್ಬ ಚಿಕ್ಕ ಹುಡುಗಿಯ ಕಣ್ಣೆದುರಿಗೆ ನಡೆದ ಘಟನೆ. ಪಾಮಾ ಎಣ್ಣೆಯನ್ನು ತೆಗೆಯಲೆಂದು ಅದರ ಎಲೆಗಳನ್ನು ಬೇಯಿಸುತ್ತಿದ್ದ ದೊಡ್ಡ ಹಂಡೆಯೊಳಗೆ ಆ ಚಿಕ್ಕ ಹುಡುಗಿಯ ಕಣ್ಣೆದುರಿಗೇ ಅವಳ ವೃದ್ಧ ಅಜ್ಜ ಅಜ್ಜಿಯರನ್ನು ಎಸೆದ ದೃಶ್ಯದಿಂದ ಕಂಗಾಲದ ಲೀಮಾ, 'it urges to say enough is enough, we feel it is now time to rise up and speak' ಎಂದು ತನ್ನ ಹೋರಾಟವನ್ನು ತೀವ್ರಗೊಳಿಸುತ್ತಾಳೆ. ಲೈಬೀರಿಯಾದ ಕ್ರೌರ್ಯದಿಂದ ದಣಿದು ಹೋದ ಕೆಲ ಮಹಿಳೆಯರು ಲೇಮಾಳ ನೇತೃತ್ವದಲ್ಲಿ ಒಂದಾಗುತ್ತಾರೆ. ಹಾಗೆ ಒಂದಾದ ಮಹಿಳೆಯರು ಹೋರಾಟಗಳಲ್ಲಿ ಪಳಗಿದ ಕಾರ್ಯಕರ್ತೆ ಯರಲ್ಲ, ಬದಲಾಗಿ ಅವರೆಲ್ಲಾ ಸಾಮಾನ್ಯ ತಾಯಂದಿರು, ಸಹೋದರಿಯರು, ನೊಂದ ವೃದ್ಧೆಯರು. ಯಾವುದೇ ಹಿನ್ನೆಲೆಯಿಲ್ಲದ, ಆಧಾರವಿಲ್ಲದ, ಆರ್ಥಿಕ ಬೆಂಬಲವಿಲ್ಲದ, ಹೆಸರು ವರ್ಚಸ್ಸುಗಳಿಲ್ಲದ ಈ ಮಹಿಳೆಯರನ್ನೆಲ್ಲಾ ಸಂಘಟಿಸಿ ತನ್ನ ಹೋರಾಟದ ಸ್ವರೂಪವನ್ನು ಲೇಮಾ ಸ್ಪಷ್ಟಪಡಿಸಿಕೊಳ್ಳುತ್ತಾಳೆ. ಅದೇ ಖ್ಯಾತ ಲ್ಯೂಥರ್‌ನ ಚರ್ಚಿನೊಳಗೆ ಮಹಿಳೆಯರಿಗೆ ಒಟ್ಟಾಗಲು ಒಂದು ಕರೆಯನ್ನು ಕೊಡುತ್ತಾಳೆ. ಟೇಲರ್‌ನ ದಮನಶೀಲ ನಡವಳಿಕೆಯ ವಿರುದ್ಧ ಚರ್ಚುಗಳೂ ದನಿಗೂಡಿಸಬೇಕೆಂದು ಠರಾವನ್ನು ಹೊರಡಿಸುತ್ತಾಳೆ. ಈ ಮೂಲಕ ಚಾರ್ಲ್ಸ್ ಟೇಲರನ ಗಮನ ಸೆಳೆಯುವುದು ಲೇಮಾಳ ಉದ್ದೇಶವಾಗಿರುತ್ತದೆ. ಈ ಪ್ರಯತ್ನದಲ್ಲಿ ವಿಫಲಳಾದ ಹತ್ತು ತಿಂಗಳನಂತರ ಚಾರ್ಲ್ಸನಿಂದ ಲೇಮಾಳಿಗೆ ಕರೆ ಬರುತ್ತದೆ. 2003ರ ಜೂನ್ ತಿಂಗಳಲ್ಲಿ ಶಾಂತಿ ಪ್ರಸ್ತಾಪವನ್ನು ಇಡಲಾಗುತ್ತದೆ. ಸಾವಿರಾರು ಸಂಖ್ಯೆಯಲ್ಲಿ ಸೇರಿದ ಇವರ ಸಂಘಟನೆಯನ್ನು ಮುರಿಯಲೆಂದೇ ವೈರಿ ಗುಂಪುಗಳು ಬಂದು ಐಷಾರಾಮದ ಹೋಟೆಲೊಂದರಲ್ಲಿ ತಂಗಿರುತ್ತವೆ. ಈ ಸಂದರ್ಭದಲ್ಲಿ ಹೊಸ ಉಪಾಯಗಳನ್ನು ಕಂಡುಕೊಳ್ಳುವ ಅನಿವಾರ್ಯತೆ ಲೇಮಾ ಹಾಗೂ ಅವಳ ಸಂಗಡಿಗರಿಗೆ ಇರುತ್ತದೆ. ಕೊನೆಗೆ ಶಾಂತಿ ಒಪ್ಪಂದ ಸಹಿಯಾಗುವವರೆಗೆ ಅವರುಗಳು ಹೋಟೆಲಿನಿಂದ ಹೊರಗೆ ಬಾರದಂತೆ ತಡೆಯುವಲ್ಲಿ ಈ ಮಹಿಳೆಯರು ಯಶಸ್ವಿಯಾಗುತ್ತಾರೆ. "we are their conscience, sitting out here. We are calling to their conscience to do the right thing, and the right thing now is to give Liberian women and their children the peace, they so desparately need now" ಎಂದು ಆತ್ಮವಿಶ್ವಾಸ ಕುಂದದ ಲೇಮಾ, 'ಸುಖದ ಸುಪ್ಪತ್ತಿಗೆಗಳಲ್ಲಿ ನಿದ್ರಿಸುವ, ಐಷಾರಾಮಗಳಲ್ಲಿ ಸುಖಿಸುವ ಜನರಿಗೆ ಬೀದಿಗಳಲ್ಲಿ ಜನ ಏಕೆ ಸಾಯುತ್ತಿದ್ದಾರೆ ಎಂದು ಅರ್ಥವಾಗುವುದೇ ಇಲ್ಲ' ಎಂದು ವಿಷಾದಿಸುತ್ತಾಳೆ.

ನೊಬೆಲ್ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಮಾಡಿದ ಭಾಷಣದ ತುಣುಕುಗಳು



- ಮಹಿಳೆಯರು ಸೈನಿಕರ ಆಟಿಕೆ ಗಳಾಗಿದ್ದಾರೆ. ಲೈಂಗಿಕ ಅತ್ಯಾಚಾರ ಹಾಗೂ ಶೋಷಣೆಯಿಂದ ಯಾವ ಮಹಿಳೆಯೂ ಮುಕ್ತವಾಗಿಲ್ಲ. ಅವಳ ಅಂತಸ್ತು ವಯಸ್ಸು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೇ ಅವಳ ಮೇಲೆ ಅತ್ಯಾಚಾರ ವೆಸಗಲಾಗುತ್ತದೆ.
- ಅನ್ಯಾಯದ ವಿರುದ್ಧ ಹೋರಾಡಲು ನಮ್ಮ ನೋವು, ಛಿದ್ರವಾದ ದೇಹ ಹಾಗೂ ನಮ್ಮ ಘಾಸಿಯಾದ ಭಾವನೆಗಳನ್ನು ಮುಡಿ ಪಾಗಿಟ್ಟೆವು. ಯುದ್ಧ ಕೊನೆ ಗೊಳ್ಳುವುದು ಅಹಿಂಸಾ ತಂತ್ರಗಳಿಂದ ಮಾತ್ರ ಎಂದು ನಾವು ಅರಿತಿದ್ದೆವು.
- ಹಿಂಸೆಯೆಂಬುದು ನಮ್ಮ ಪ್ರೀತಿಯ ದೇಶವನ್ನು ನೋವಿನ ಸಾವಿನ ಕೂಪಕ್ಕೆ ತಳ್ಳಿಬಿಡುತ್ತದೆ ಎಂಬ ಸತ್ಯವನ್ನು ಅರಿತಿದ್ದೆವು. ಹಿಂಸೆಯಿಂದ ಎಂದಿಗೂ ಶಾಂತಿಯನ್ನು ಪಡೆಯಲಾರೆವು ಅದರಿಂದ ನಮ್ಮ ಸಾಮಾಜಿಕ ಸಮಸ್ಯೆಗಳು ಪರಿಹಾರವಾಗಲಾರವು ಎಂಬುದನ್ನು ಮಾರ್ಟಿನ್ ಲೂಥರ್ ಈ ಹಿಂದೆಯೇ ಹೇಳಿ ಹೋಗಿದ್ದ.
- ಪ್ರಾರಂಭದಲ್ಲಿ ಒಂದು ಸಮುದಾಯದಲ್ಲಿ ಕಾಣಿಸಿಕೊಂಡ 'ಸಾಮುದಾಯಕ ಮಹಿಳಾ ಚಳವಳಿಯ ಪ್ರಚಾರವು' (Women's Mass Action Campaign) ನಿಧಾನವಾಗಿ ಲೈಬೀರಿಯಾದ ಐವತ್ತು ಸಮುದಾಯಗಳಿಗೆ ಹಬ್ಬುತ್ತಾ ಹೋಯಿತು.
- AK 47 ಮತ್ತು RPGಗಳನ್ನು ಎದುರಿಸಿದೆವು. ಯಾವ ಬೆದರಿಕೆಗಳಿಗೂ ಬಗ್ಗದೆ ಯುದ್ಧ ನಿರ್ದೇಶಕರನ್ನು ಭೇಟಿಮಾಡಿದೆವು. ಯುದ್ಧ ಮತ್ತು ಅಧಿಕಾರದ ದಾಹದಲ್ಲಿ ಆತ್ಮಸಾಕ್ಷಿಯನ್ನು ಕಳೆದು ಕೊಂಡವರ ಆತ್ಮ ಸಾಕ್ಷಿ ನಾವಾದೆವು.
- ಸಂಘರ್ಷದ ಇನ್ನೊಂದು ಮುಖದ ಕಥೆಯನ್ನು ಜಗತ್ತಿಗೆ ತಿಳಿಸಲು ನಮ್ಮ ಮಕ್ಕಳೊಂದಿಗೆ ಬಿಸಿಲು ಮಳೆ ಬಿರುಗಾಳಿಯನ್ನು ಲೆಕ್ಕಿಸದೇ ಕಾದೆವು.
- ಇಂದು ಈ ನೊಬೆಲ್ ಶಾಂತಿ ಪ್ರಶಸ್ತಿ ಲೈಬೀರಿಯಾದ ಮಹಿಳೆಯರಿಗೆ ಮಾತ್ರ ಸಂದ ಪ್ರಶಸ್ತಿಯಲ್ಲ. ಈ ಪ್ರಶಸ್ತಿ ತೃಣಮೂಲ ನೆಲೆಯಲ್ಲಿ ಹೋರಾಡಿದ ಈಜಿಪ್ಟ್‌ನ, ತುನಸಿಯ, ಇಸ್ರೇಲ್, ಪ್ಯಾಲಸ್ತೇನ್ ಮುಂತಾದ ದೇಶಗಳಲ್ಲಿ ಶಾಂತಿಯನ್ನು ಎತ್ತಿಹಿಡಿಯಲು ತಮ್ಮ ಆತ್ಮಾರ್ಪಣೆ ಮಾಡಿದ ಎಲ್ಲ ಮಹಿಳೆಯರಿಗೆ ಸಲ್ಲುತ್ತದೆ.

ಲೇಮಾ ಬೊವಿ

ಅನೇಕ ಅಡೆತಡೆಗಳನ್ನು ಮೀರಿ ಲೇಮಾ ಮನವಿಯನ್ನು ಚಾರ್ಲ್ಸ್‌ಗೆ ನೀಡುವಲ್ಲಿ ಯಶಸ್ವಿಯಾಗುತ್ತಾಳೆ. "we are fed up with war, we are tired of fighting and killing of our people" ಎಂಬ ಮನವಿಯನ್ನು ಚಾರ್ಲ್ಸ್‌ಗೆ ಮುಟ್ಟಿಸುವುದರ ಮೂಲಕ, ಇಡೀ ಜಗತ್ತಿಗೆ ತನ್ನ ಹೋರಾಟದ ಸಂದೇಶವನ್ನು ತಲುಪಿಸಬೇಕೆನ್ನುವ ಅವಳ ಆಕಾಂಕ್ಷೆ ಈಡೇರುತ್ತದೆ. 2003ರ ಆಗಸ್ಟ್ ತಿಂಗಳಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಬೀಳುತ್ತದೆ. ಯುದ್ಧ ಕೊನೆಗೊಳ್ಳುತ್ತದೆ. ಜನಪರ ಹೋರಾಟದ ಒತ್ತಡಗಳಿಗೆ ಮಣಿದು ಚಾರ್ಲ್ಸ್ ಟೇಲರ್ ರಾಜೀನಾಮೆ ನೀಡಿ ತನ್ನ ಸರ್ವಾಧಿಕಾರಕ್ಕೆ ತೆರೆಯನ್ನು ಎಳೆಯುತ್ತಾನೆ. ಅವನನ್ನು ನೈಜೀರಿಯಾಕ್ಕೆ ಗಡೀಪಾರು ಮಾಡಲಾಗುತ್ತದೆ. ಆನಂತರ ಆ ಅಧ್ಯಕ್ಷ ಸ್ಥಾನಕ್ಕೆ ಮತ್ತೊಬ್ಬ ಹೋರಾಟಗಾರ್ತಿ, ಪ್ರತಿಭಾವಂತ ರಾಜನೀತಿ ತಜ್ಞೆ, ಜನಪರ ನಾಯಕಿ ಎಲೆನ್ ಜಾನ್ಸನ್ ಸರ್‌ಲೀಫ್‌ಳ ಆಗಮನದಿಂದ ಲೈಬೀರಿಯಾದಲ್ಲಿ ಹೊಸ ಶಕೆ ಪ್ರಾರಂಭವಾಗುತ್ತದೆ.

ನೊಬೆಲ್ ಪ್ರಶಸ್ತಿ ಪ್ರಕಟವಾದ ಸಂದರ್ಭದಲ್ಲಿ ತನ್ನ ಹುಟ್ಟೂರಿಗೆ ಆಗಮಿಸುವ ಲೇಮಾಳಿಗೆ ಭವ್ಯವಾದ ಸ್ವಾಗತ ಕಾದಿರುತ್ತದೆ. ಅವಳನ್ನು ಲೈಬೀರಿಯಾದ ರತ್ನ, (jewel of Lyberia, princess of Africa) 'ಆಫ್ರಿಕಾದ ರಾಜಕುಮಾರಿ' ಎಂದೆಲ್ಲಾ ಕೊಂಡಾಡಲಾಗುತ್ತದೆ. ಹೀಗೆ ರತ್ನವಾಗುವುದರ ಹಿಂದೆ, ರಾಜಕುಮಾರಿ ಯಾಗುವುದರ ಹಿಂದೆ ಕ್ರೌರ್ಯವಿದೆ, ದಾರುಣವಾದ ಕಥೆಯಿದೆ. ಅವಳು ಬಂದ ದಾರಿಯ ಕಡೆಗೆ ಹಿಂತಿರುಗಿ ನೋಡಿ, "It was a tough journey" ಎನ್ನುವಾಗ ದಣಿದಂತೆ ಕಾಣುತ್ತಾಳೆ. ಆ ದಣಿದ ಜೀವಕ್ಕೀಗ ನೊಬೆಲ್ ಪ್ರಶಸ್ತಿಯ ಸಾಂತ್ವನ ದೊರೆತಿದೆ. ಹೋರಾಟದನಂತರ ಸರಿಯಾದ ಹಾದಿಯನ್ನು (Right Road) ಕಂಡುಕೊಳ್ಳಲು ಇನ್ನು ಐದಾರು ವರುಷಗಳಾದರೂ ಬೇಕಾಗುತ್ತದೆ ಎನ್ನುವ ಅವಳು "we never go to war again" ಎಂದು ಶಪಥ ಮಾಡುವಂತೆ ನುಡಿಯುತ್ತಾಳೆ. ಅವಳಿಗೆ ನೊಬೆಲ್ ಪ್ರಶಸ್ತಿ ಬಂದ ಈ ಸಂದರ್ಭದಲ್ಲಿ ದೂರವಾಣಿಯ ಒಂದು ಸಂದರ್ಶನದಲ್ಲಿ "ಪ್ರಪಂಚದಲ್ಲಿರುವ ಶೇಕಡಾ ಐವತ್ತರಷ್ಟು ಜನಸಂಖ್ಯೆಯ-ಅಂದರೆ ಮಹಿಳೆಯರ, ಕೌಶಲ, ಜಾಣ್ಮೆ ಇವುಗಳನ್ನು ಅಲಕ್ಷಿಸ ಲಾಗಿದೆ. ಅವುಗಳನ್ನು ನಮ್ಮ ಸಮಾಜವು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ನಮ್ಮ ಸಮಾಜವು ಪರಿಪೂರ್ಣವಾಗಿ ಕೆಲಸಮಾಡಲು ಅದು ಅನಿವಾರ್ಯವಾಗಿದೆ. ನಿರ್ಭಾಗ್ಯ ವನಿತೆಯರ, ಬಡ ಶೋಷಿತ ಮಹಿಳೆಯರ ಬದುಕಿನ ಬದ್ಧತೆ, ಶಾಂತಿಗಾಗಿ ಹೋರಾಡುವ ಛಲ ಇವುಗಳೇ ನನ್ನ ಸ್ಫೂರ್ತಿಯ ಸೆಲೆಯಾಗಿದೆ. ಎಂದು ಹೇಳುತ್ತಾಳೆ.

ಎಲೆನ್ ಜಾನ್ಸನ್ ಸರ್ ಲೀಫ್

ಲೈಬೀರಿಯಾದ ಅಧ್ಯಕ್ಷೆಯಾದ ಎಲೆನ್‌ಳಿಗೆ ನೊಬೆಲ್ ಶಾಂತಿ ಪಾರಿತೋಷಕವನ್ನು ಘೋಷಿಸಿದಾಗ ಅವಳು ತನ್ನ ಮರುಚುನಾವಣೆಯ ಪ್ರಚಾರದ ಭರದಲ್ಲಿದ್ದಳು. ಹಲವಾರು ಪಾರಿತೋಷಕಗಳನ್ನು ಗೆದ್ದ ಈ ಪ್ರತಿಭಾನ್ವಿತ ಮಹಿಳೆ, ಲೇಮಾ ಪಾರಿತೋಷಕವನ್ನು ಪಡೆದ ಸಂದರ್ಭದ ಸಂಭ್ರಮಾಚರಣೆಗೆ ಹಾಜರಿದ್ದು ಅವಳನ್ನು ಮನಸಾರೆ ಪ್ರಶಂಸಿಸಿದಳು. ಎಲೆನ್‌ಳನ್ನು ಮತ್ತೆ ಲೈಬೀರಿಯಾದ ಅಧ್ಯಕ್ಷೆಯನ್ನಾಗಿ ಯಾಕೆ ಮರುಚುನಾಯಿಸಬೇಕು ಎನ್ನುವ ಜನರ ಪ್ರಶ್ನೆಗೆ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಎಲೆನ್ ಕೊಟ್ಟ ಕಾರಣಗಳು ಹೀಗಿವೆ:- "we don't want nobody to take us back to war, we don't want nobody to take our people run again, we don't want nobody to molest our children again, Lyberia has passed all of that. So any body who wants to do it, you rebuke them" ಅವಳ ಎಲ್ಲ ಹೋರಾಟಕ್ಕೆ ಸಿಕ್ಕ ಪ್ರತಿಫಲವೆಂದರೆ ನವೆಂಬರ್ 2011 ರಲ್ಲಿ ಮತ್ತೆ ಅವಳು ಲೈಬೀರಿಯಾದ ಅಧ್ಯಕ್ಷೆಯಾಗಿ ಆಯ್ಕೆಯಾದದ್ದು.

ಎಲೆನ್ ಹುಟ್ಟಿದ್ದು 1938ರ ಅಕ್ಟೋಬರ್ 21 ರಂದು. ಬಾಲ್ಯದಿಂದಲೇ ಪ್ರತಿಭಾವಂತೆ. ಅವಳ ಬಾಲ್ಯವೇನು ಸುಖದಾಯಕವಾಗಿರಲಿಲ್ಲ. ರೋಗಿಷ್ಟ ತಂದೆ, ತಾಯಿಯೊಬ್ಬಳೇ ನಿಭಾಯಿಸಬೇಕಾದ ಅಸಹಾಯಕ ಸ್ಥಿತಿಯಲ್ಲಿ ಅವರ ಕುಟುಂಬವಿದ್ದಿತು. ಅವಳ ಶಾಲಾ ವಿದ್ಯಾಭ್ಯಾಸದನಂತರ ಹಾರ್ವರ್ಡ್ ವಿವಿ.ಯಲ್ಲಿ ಅವಳಿಗೆ ಶಿಷ್ಯವೇತನ ದೊರೆಯಿತು. ಸಾರ್ವಜನಿಕ ಆಡಳಿತದ ವಿಷಯದಲ್ಲಿ

ನೊಬೆಲ್ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಮಾಡಿದ ಭಾಷಣದ ತುಣುಕುಗಳು



- ಮಹಿಳೆಯರ ಮೇಲಿನ ಅತ್ಯಾಚಾರ ಯುದ್ಧದ ಒಂದು ಸಾಧನವಾಗಿ ಬಳಕೆ ಯಾಗುತ್ತಿದೆ. ಮಾನವೀಯತೆಯ ವಿರುದ್ಧ ಅದೊಂದು ಅಪರಾಧ. ಕಳೆದ ಎರಡು ದಶಕಗಳಿಂದ ನಮ್ಮ ಸಹೋದರಿಯರು, ಹೆಣ್ಣುಮಕ್ಕಳು ತಮ್ಮ ವಯಸ್ಸಿನ ತಾರತಮ್ಯವಿಲ್ಲದೆ ಇಂತಹ ಅಪರಾಧಕ್ಕೆ ಗುರಿಯಾಗುತ್ತಲೇ ಬರುತ್ತಿದ್ದಾರೆ.
- ಮಹಿಳೆಯ ದೇಹವನ್ನು ಭಗ್ನಗೊಳಿಸುವುದರ (mutilate) ಮೂಲಕ, ಅವಳ ಕನಸುಗಳನ್ನು ನಾಶ ಗೊಳಿಸುವುದರ ಮೂಲಕ ಕೌಟುಂಬಿಕ ಹಾಗೂ ಅಂತರರಾಷ್ಟ್ರೀಯ ಕಲಹಗಳು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿವೆ. ಮಹಿಳೆ ಅದಕ್ಕೆ ತನ್ನ ರಕ್ತ, ಕಣ್ಣೀರು, ಹಾಗು ಆತ್ಮ ಗೌರವದ ಬೆಲೆಯನ್ನು ತೆರಬೇಕಾಗಿದೆ.
- ಹೆಣ್ಣು ಮಕ್ಕಳ ಶಿಕ್ಷಣವೆಂಬುದು ಈಗಲೂ ನಮ್ಮ ಸಮಾಜದಲ್ಲಿ ಸ್ವಾಗತಾರ್ಹ ಸಂಗತಿಯಾಗಿಲ್ಲ. ಅದು ಒಂದು ಅನಾವಶ್ಯಕ ಸಂಗತಿ ಯಾಗಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆರ್ಥಿಕ ಒತ್ತಾಸೆಗಳಾಗಲೀ ಇತರ ಸೌಲಭ್ಯ ಗಳಾಗಲೀ ಅಲಭ್ಯವೇ. ಎಂತಹ ಪ್ರತಿಭಾವಂತ ಹೆಣ್ಣುಮಕ್ಕಳಾದರೂ ಅವರಿಗೆ ಉನ್ನತ ಶಿಕ್ಷಣ ವೆಂಬುದು ಪ್ರೋತ್ಸಾಹದಾಯಕವಾಗಿಲ್ಲ.
- ಮಹಿಳೆಯರ ಮೇಲೆ ಎಸಗುವ ಅಪರಾಧಗಳು ಸರಿಯಾಗಿ ವರದಿ ಯಾಗದೇ ಹೋಗುತ್ತಿವೆ. ಅದಕ್ಕೆ ಸಂಬಂಧಪಟ್ಟ ಕಾನೂನುಗಳೂ ಕಣ್ಮರೆಯಲ್ಲೇ ಉಳಿಯುತ್ತಿವೆ.
- ಆದರೆ ನಾವು ಅಷ್ಟು ನಿರಾಶರಾಗ ಬೇಕಿಲ್ಲ. ಅಲ್ಲಲ್ಲಿ ಜಗತ್ತಿನಾದ್ಯಂತ ಬದಲಾವಣೆಯ ಕುರುಹುಗಳು ಕಂಡು ಬರುತ್ತಿವೆ. ನಿಧಾನವಾಗಿ ಅಂತರ್‌ರಾಷ್ಟ್ರೀಯ ಕಾನೂನು ಮತ್ತು ಮಾನವ ಹಕ್ಕುಗಳ ಅರಿವು ನಮ್ಮ ಶಾಲೆ, ಮಾರುಕಟ್ಟೆ, ಹಾಗೂ ನ್ಯಾಯಾಲಯಗಳ ಕತ್ತಲ ಮೂಲೆಗಳನ್ನು ಬೆಳಕಾಗಿಸುತ್ತಿವೆ.
- ಸ್ತ್ರೀಪುರುಷರು ಮೂಕವಾಗಿ ಅತ್ಯಾಚಾರಕ್ಕೆ ಒಳಗಾಗುತ್ತಿದ್ದ ಮುಚ್ಚಿದ ಕೋಣೆಗಳ ಕಿಟಕಿ ಬಾಗಿಲುಗಳು ಈಗ ನಿಧಾನವಾಗಿ ತೆರೆದುಕೊಳ್ಳುತ್ತಿವೆ.
- ಕತ್ತಲ ಕರಿತೆರೆ ಸರಿದಿದೆ. ಸೂರ್ಯನ ಬೆಳಕಿನಲ್ಲಿ ಈವರೆಗೆ ಕಣ್ಮರೆಯಾದ ಎಲ್ಲ ಸಂಗತಿಗಳೂ ಬಯಲಾಗುತ್ತಿವೆ. ಹೊಸ ತಂತ್ರ ಜ್ಞಾನದಿಂದಾಗಿ ಶಾಂತಿ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯದ ಸಂದೇಶಗಳು ತ್ವರಿತಗತಿಯಲ್ಲಿ ಎಲ್ಲೆಡೆ ಹಬ್ಬುತ್ತಿವೆ.
- ಸಹೋದರಿಯರೇ, ನನ್ನ ಗೆಳತಿಯರೇ, ನನ್ನ ಮಕ್ಕಳೇ ನಿಮ್ಮ ದನಿಯನ್ನು ಕಂಡು ಕೊಳ್ಳಿ.

ಎಲೆನ್ ಜಾನ್ಸನ್ ಸರ್ ಲೀಫ್

(public Admn) ಸ್ನಾತಕೋತ್ತರ ಪದವಿಯನ್ನು ಪಡೆದ ಅವಳಿಗೆ ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿ ಸಹಜವಾಗಿಯೇ ಇದ್ದಿತು. ಅಮೇರಿಕೆಯಿಂದ ವಾಪಸ್ಸಾದ ಅವಳು 1980 ರಲ್ಲಿ ಲೈಬೀರಿಯಾದ ಆರ್ಥಿಕ ಮಂತ್ರಿ ಪದವಿಗೇರಿದಳು. ಆದರೆ ದೇಶದಲ್ಲಿ ತಾಂಡವ ವಾಡುತ್ತಿದ್ದ ಭ್ರಷ್ಟಾಚಾರದ ಬಗ್ಗೆ ರೋಸಿಹೋಗಿ, ಅಧ್ಯಕ್ಷನನ್ನು ಉದ್ದೇಶಿಸಿ 'This country is run by idiots' ಎಂದು ಸಾರ್ವಜನಿಕ ಸಭೆ ಯೊಂದರಲ್ಲಿ ಕಟುವಾಗಿ ಭಾಷಣ ಮಾಡಿದಳು. ಪರಿಣಾಮವಾಗಿ ಅವಳು ಜೈಲು ಸೇರಬೇಕಾಯಿತು. "ಅವಳ ಶವ ಯಾವುದೋ ಚರಂಡಿಯಲ್ಲಿ ತೇಲುತ್ತಿದೆ ಎಂಬ ಸುದ್ದಿ ಬಂದಿತು. ಈಗ ಅವಳು ಜೈಲಿನಲ್ಲಿ ಇದ್ದಾಳೆ ಎಂದು ತಿಳಿದು ಸಂತೋಷವಾಯಿತು. I am happy she is alive" ಎಂದು ಭಾವುಕವಾಗಿ ನುಡಿಯುವ ಪಾರ್ಕರ್ ಎನ್ನುವ ಅವಳ ಗೆಳತಿಯ ಮಾತುಗಳಲ್ಲಿ ಎಲೆನ್ ತೆಗೆದುಕೊಂಡ ರಿಸ್ಕ್ ಮತ್ತು ಅದನ್ನು ನಿಭಾಯಿಸುವುದರಲ್ಲಿ ಅವಳು ತೋರಿಸಿದ ಎದೆಗಾರಿಕೆಯ ಅರಿವಾಗದೇ ಹೋಗದು. ಐದು ತಿಂಗಳನಂತರ ಬಿಡುಗಡೆಯಾದ ಅವಳಿಗೆ ಮತ್ತೆ ತನ್ನ ದೇಶದಲ್ಲಿರುವುದು ಅಪಾಯಕಾರಿ ಯಾದ ಸಂಗತಿಯಾದುದರಿಂದ ಬೇರೆ ಆಯ್ಕೆಗಳೇ ಇಲ್ಲದ ಅವಳು ಅಮೇರಿಕೆಗೆ ಓಡಿಹೋಗಬೇಕಾಯಿತು. ಅವಳ ಬಂಡಾಯವೆಂಬುದು, ಸೈದ್ಧಾಂತಿಕವಾದುದಾಗಿತ್ತೇ ಹೊರತು ಲೇಮಾಳ ಹಾಗೆ ಬೀದಿ ಬದಿಯ ಹೋರಾಟವಾಗಿರಲಿಲ್ಲ. ಅಮೇರಿಕೆಯಲ್ಲಿದ್ದಾಗ ಟೇಲರನ ಚುನಾವಣಾ ಪ್ರಚಾರದ ಕಾರ್ಯಗಳಿಗಾಗಿ ತಾನು ಹಣವನ್ನು ಒದಗಿಸಿದ ತನ್ನ ದೌರ್ಬಲ್ಯವನ್ನು ಅವಳು ಒಪ್ಪಿಕೊಳ್ಳುತ್ತಾಳೆ. 1997 ರಲ್ಲಿ ಅವಳು UNO ಸಂಸ್ಥೆಯಲ್ಲಿ ಒಳ್ಳೆಯ ಸಂಬಳದ ಉನ್ನತ ಹುದ್ದೆಯಲ್ಲಿ ಇದ್ದರೂ ಅದನ್ನು ಬಿಟ್ಟು ಚುನಾವಣಾ ಪೂರ್ವ ಕೆಲಸ ಮಾಡಲು ಲೈಬೀರಿಯಾಕ್ಕೆ ವಾಪಾಸ್ಸಾಗುತ್ತಾಳೆ. ಆನಂತರ ಚಾರ್ಲ್ಸ್ ಟೇಲರನ ವಿಜಯದಿಂದಾಗಿ ಲೈಬೀರೀಯಾದ ಪರಿಸ್ಥಿತಿಯೇನೂ ಸುಧಾರಿಸುವುದಿಲ್ಲ. "Life for Liberians did not get better under Taylor. One dictator replaced the other. None of the institutions were functioning because of centralization, more importantly values were destroyed" ಎಂದು ವಿಷಾದ ವ್ಯಕ್ತಪಡಿಸುತ್ತಾಳೆ. ಟೇಲರನ ಸೈನಿಕರು ಹಾಗು ಬಂಡುಕೋರರ ನಡುವೆ ಎರಡನೇ ಅಂತರ್ ಯುದ್ಧ ಮತ್ತೆ ಪ್ರಾರಂಭವಾಗುತ್ತದೆ. ಲೇಮಾಳಂತಹ ಉಗ್ರ ಕಾರ್ಯಕರ್ತರ ಒತ್ತಡಕ್ಕೆ ಮಣಿದು ಟೇಲರ್ ನೈಜೀರಿಯಾಕ್ಕೆ ಗಡೀಪಾರಾಗಬೇಕಾಗುತ್ತದೆ. 2005ನೆಯ ಇಸವಿ ಲೈಬೀರಿಯಾದ ರಾಜಕೀಯ ಇತಿಹಾಸದಲ್ಲೇ ಬಹಳ ಮಹತ್ವವಾದುದು. ಅದೇ ವರುಷ ತನ್ನ ವರ್ಚಸ್ಸು ಹಾಗೂ ಯಶಸ್ವೀ ಚುನಾವಣಾ ಪ್ರಚಾರದಿಂದಾಗಿ ಎಲೆನ್ ಲೈಬೀರಿಯಾದ ಮೊತ್ತಮೊದಲ ಅಧ್ಯಕ್ಷೆಯಾಗಿ ಆಯ್ಕೆ ಯಾಗುತ್ತಾಳೆ. ಅವಳು ಒಬ್ಬ ಜನಾನುರಾಗಿಯಾದ ಅಧ್ಯಕ್ಷೆಯಾಗಿದ್ದಾಳೆ ಎನ್ನುವುದನ್ನು ಅವಳ ಗೆಳತಿ ಹಾಗು ಅಲ್ಲಿನ ಎಂ.ಪಿ.ಯಾದ ರೆಬೆಕಾ ಕಿಡಾ–ಎಲೆನ್‌ಳ ಬಗೆಗಿನ ಸಾಕ್ಷ್ಯ ಚಿತ್ರದಲ್ಲಿ ಹೇಳಿಕೊಂಡಿದ್ದಾಳೆ: "She allows people to express how they feel, that is why we have peace today"

ಸರ್ವಾಧಿಕಾರದಿಂದ, ಕ್ರೌರ್ಯದಿಂದ ಪತನಗೊಂಡ ರಾಜ್ಯವನ್ನು, ಸಂಸ್ಕೃತಿಯನ್ನು ಮತ್ತೆ ಕಟ್ಟುವುದು ಸುಲಭದ ಮಾತೇನಲ್ಲ. ಜನರ ಮನಸ್ಸಿನೊಳಗೆ ಬೇರು ಬಿಟ್ಟ ಭಯವನ್ನು ತೊಡೆದು ಹಾಕಿ ಶಾಂತಿಯನ್ನು ನೆಲೆಗೊಳಿಸುವ ಕೆಲಸವಂತೂ ಮತ್ತೂ ಕಷ್ಟಕರವಾದುದು. 'ಆರ್ಥಿಕ ಕುಸಿತವನ್ನು ನಿಭಾಯಿಸುವುದೇ ಅಲ್ಲದೇ ಶಾಲೆ, ಆಸ್ಪತ್ರೆಗಳನ್ನು ಕಟ್ಟ ಬೇಕಾಗುತ್ತದೆ. ಜನರ ಆಹಾರ, ನೀರು ಮುಂತಾದ ದಿನನಿತ್ಯದ ಅಗತ್ಯದ ಪೂರೈಕೆಗಳ ಕಡೆ ಗಮನ ಕೊಡಬೇಕಾಗುತ್ತದೆ' ಎನ್ನುವ ಅವಳಿಗೆ ತಾನು ಅಧ್ಯಕ್ಷಳಾದ ಈ ಐದುವರುಷಗಳಲ್ಲಿ ಈ ಎಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸಿರುವ ತೃಪ್ತಿ ಇದೆ. ಈಗ ಅಲ್ಲಿ ಶಾಂತಿ ನೆಲೆಸಿದೆ. ಇದರ ಜೊತೆಗೆ "Noble prize gave her boost to (her)re election campaign' ಎನ್ನುವ ಆಕ್ಷೇಪಣೆಯನ್ನೂ ಅವಳು ಜನರಿಂದ ಕೇಳಬೇಕಾಗಿದೆ. ಇದಕ್ಕೆ ಅವಳು ಕೊಡುವ ಉತ್ತರ 'ನೊಬೆಲ್ ಪಾರಿತೋಷಕ ವೈಯಕ್ತಿಕವಾದುದಲ್ಲ. ಲೈಬೀರಿಯಾದ, ಆಫ್ರಿಕಾದ ಪರವಾಗಿ ನಾನು ಈ ಬಹುಮಾನವನ್ನು ಸ್ವೀಕರಿಸುತ್ತಿದ್ದೇನೆ. ಇದು ತಲಪಬೇಕಾಗಿರುವುದು ನನ್ನ ಜನರಿಗೆ' ಎಂದು ವಿನಯಪೂರ್ವಕವಾಗಿ ಹೇಳಿಕೊಳ್ಳುತ್ತಾಳೆ. "ಯುದ್ಧದನಂತರ ವಿನಾಶಗೊಂಡ ಭಗ್ನ ಸ್ಥಿತಿಯಲ್ಲಿ ರಾಜ್ಯವನ್ನು ಮುನ್ನಡೆಸಲು ಯಾವುದೇ ಮಾರ್ಗಸೂಚಿಗಳಿರಲಿಲ್ಲ (Road map). ದೇಶವನ್ನು ನಾವು ಮತ್ತೆ ಯುದ್ಧದ ದಳ್ಳುರಿಗೆ ತಳ್ಳಬಾರದೆಂಬ ಅರಿವೂ ನಮಗಿದ್ದಿತು. ನಮಗಿದ್ದ ತುರ್ತಿನ ಸವಾಲೆಂದರೆ, ನಮ್ಮ ಹೆಗಲ ಮೇಲಿದ್ದ ದೊಡ್ಡ ಜವಾಬ್ದಾರಿಯೆಂದರೆ ಶಾಂತಿಯನ್ನು ಕಾಪಾಡುವುದಾಗಿತ್ತು." ಎಂದು ಹೇಳಿಕೊಳ್ಳುವ ಎಲೆನ್ ಜಾನ್ಸನ್ ಸರ್ ಲೀಫ್‌ಳಂತಹ ನಾಯಕಿಯರು ದೇಶದ ಅಭಿವೃದ್ಧಿಗಾಗಿ ಹಾಗೂ ಅದರ ಶಾಂತಿಯನ್ನು ಕಾಪಾಡಲು ಮತ್ತೆ ಮತ್ತೆ ಆಯ್ಕೆಯಾಗಿ ಅಧಿಕಾರಕ್ಕೆ ಬರಬೇಕಾಗಿದೆ.

ತವಕ್ಕೊಲ್ ಕರ್ಮಾನ್

ಕರ್ಮಾನ್ ದೇಶವನ್ನು ಬದಲಾಯಿಸುವ ಕನಸು ಹೊತ್ತವಳು. ಅಜ್ಞಾನ, ಬಡತನ, ಯುದ್ಧ, ಸಂಘರ್ಷಗಳನ್ನು ಶಾಂತಿಯುತವಾಗಿ ನಿರ್ಮೂಲನ ಮಾಡಬಹುದೆಂದು ಗಾಢವಾಗಿ ನಂಬಿರುವವಳು. ಮಹಾತ್ಮ ಗಾಂಧಿ, ಮಾರ್ಟಿನ್ ಲೂಥರ್ ಹಾಗೂ ನೆಲ್ಸನ್ ಮಂಡೇಲಾ ಅವರ ಆದರ್ಶಗಳಿಂದ ಪ್ರಭಾವಿತಳಾದವಳು. ಅವರದೇ ಹಾದಿಯಲ್ಲಿ ನಡೆಯುವ ಆಕಾಂಕ್ಷೆ ಹೊತ್ತಿರುವವಳು. ಈ ಹಾದಿಯಲ್ಲಿ ಇವಳ ಹೋರಾಟ ಇನ್ನೂ ಮುಗಿದಿಲ್ಲ. ಲೇಮಾ ಮತ್ತು ಎಲೆನ್ ಇವರಿಗೆ ಹೋಲಿಸಿದರೆ ಕರ್ಮಾನ್ ವಯಸ್ಸಿನಲ್ಲಿ ಇನ್ನೂ ಕೂಸು. ಈ ಕೂಸಿಗೆ ಇಸ್ಲಾಮಿನ ಮೂಲಭೂತ ವಾದಿ 'ದೊರೆ'ಯನ್ನು ಎದುರು ಹಾಕಿಕೊಳ್ಳುವ ಧೈರ್ಯವಿದೆ. ಬುರ್ಖಾದೊಳಗೆ ಬಂದಿಯಾಗಿ, ಅಡುಗೆ ಕೋಣೆಯಲ್ಲಿ ಮೂಗುಬ್ಬಸ ಪಡುತ್ತಿರುವ ತನ್ನ ಸರಿವಯಸ್ಸಿನವರ ನಡುವೆಯೇ ಬುರ್ಖಾ ಇಲ್ಲದೆ ಬೀದಿಗಿಳಿದು ಸಾವಿರಾರು ಜನರನ್ನು ಬೆನ್ನಿಗೆ ಕಟ್ಟಿಕೊಂಡು "your throne shall fall, your throne shall fall. Our revolution is peaceful. Hundred percent peaceful" ಎಂದು ಅಮೇರಿಕೆಯ ಬೀದಿಗಳಲ್ಲಿ ಬ್ಯಾನರ್ ಹಿಡಿದು ಯಮನ್‌ನ ಅಧ್ಯಕ್ಷನಾದ ಅಲಿ ಅಬ್ದುಲ್ಲ ಸಲೇಹ್‌ನ ವಿರುದ್ಧ ಘೋಷಣೆಗಳನ್ನು ಕೂಗುವ ಎದೆಗಾರಿಕೆ ಇವಳಿಗೆ ಇದೆ.

ಯಮನ್ ಮೂಲದ ಕರ್ಮಾನ್ ಹುಟ್ಟಿದ್ದು 1979ರ ಫೆಬ್ರುವರಿ 7ರಂದು. ಕೇವಲ ಮೂವತ್ತೆರಡರ ಈ ಯುವತಿ ತಾನು ಹುಟ್ಟಿದ್ದೇ ಹೋರಾಟಕ್ಕೆನ್ನುವಂತೆ ತನ್ನನ್ನು ತಾನು ಅದಕ್ಕೆ ಮುಡಿಪಾಗಿರಿಸಿಕೊಂಡು ಬಿಟ್ಟಿದ್ದಾಳೆ. ಪ್ರತಿಭಾವಂತ ಪತ್ರಕರ್ತೆಯಾಗಿ ತನ್ನ ವೃತ್ತಿಯನ್ನು ಪ್ರಾರಂಭಿಸಿದವಳು ಕರ್ಮಾನ್. ವಾಕ್ ಸ್ವಾತಂತ್ರ್ಯದ ಮೇಲೆ ಯಮನ್‌ನ ಸರ್ವಾಧಿಕಾರಿ ಅಬ್ದುಲ್ಲಾ ಅಲಿ ಸಾಲ್ಲೆಹ್‌ನ ಹಲ್ಲೆಯೇ ಅವಳನ್ನು ಹೋರಾಟದ ಕಣಕ್ಕೆ ಇಳಿಯುವಂತೆ ಮಾಡುತ್ತದೆ. ಪತ್ರಿಕೆಯನ್ನು ಅಮಾನತುಗೊಳಿಸುವುದಲ್ಲದೆ, ಕರ್ಮಾನ್‌ಳಂತಹ ಸಾವಿರಾರು ಪತ್ರಕರ್ತರನ್ನು ಬಂಧಿಸಲಾಗುತ್ತದೆ, ಅವರನ್ನು ಅಪಹರಣ ಮಾಡ ಲಾಗುತ್ತದೆ. ಇಂತಹ ಅಪಾಯಕರ ಪರಿಸ್ಥಿತಿಯ ನಡುವೆಯೂ ಕರ್ಮಾನ್ ಮತ್ತು ಅವಳ ಸಹಚರರು "women journalists Association" ಎಂಬ ಸಂಸ್ಥೆಯನ್ನು ಕಟ್ಟುವಲ್ಲಿ ಯಶಸ್ವಿಯಾಗುತ್ತಾರೆ.

ಇದರ ಆಧಾರದ ಮೇಲೆ ತಮ್ಮ ಕಾರ್ಯಾಚರಣೆಗೆಳಿಗೆ ಸಹಾಯ ವಾಗುವಂತೆ ಒಂದು ಜಾಗವನ್ನು ಗೊತ್ತುಮಾಡುತ್ತಾರೆ. ಈ ಜಾಗಕ್ಕೆ ಅವರು ಇಡುವ "Freedom Square" ಎನ್ನುವ ಹೆಸರೇ ಅವರ ಸಂಘಟನೆಯ ಉದ್ದೇಶವನ್ನೂ ಸಾರಿ ಹೇಳುತ್ತದೆ..

ಅನ್ಯಾಯದ ವಿರುದ್ಧ ಹೋರಾಡುವ ಈ ಕೆಚ್ಚು ಅವಳಿಗೆ ಸಲೇಹ್‌ನ ಮಾಜಿ ಸಚಿವರಾಗಿದ್ದ ಅವಳ ತಂದೆಯಿಂದಲೇ ದತ್ತವಾವಾಗಿರುತ್ತದೆ. ಅವಳ ತೀವ್ರ ಹೋರಾಟಕ್ಕೆ ಸಿಕ್ಕ ಪ್ರತಿಫಲವೆಂದರೆ ಜೈಲುವಾಸ. ಬಿಡುಗಡೆ ಯಾದ ನಂತರ ಅವಳ ಹೋರಾಟವನ್ನು ಇನ್ನೂ ತೀವ್ರಗೊಳಿಸುತ್ತಾಳೆ. ನ್ಯೂಯಾರ್ಕನ್ನು ತನ್ನ ಹೋರಾಟದ ಕೇಂದ್ರವನ್ನಾಗಿಸಿಕೊಂಡು ಅಲ್ಲಿಂದಲೇ ತನ್ನ ಹೋರಾಟದ ಉಪಾಯಗಳನ್ನು (Strategies) ಕಂಡುಕೊಳ್ಳುತ್ತಾಳೆ. ಅವಳ ತೀವ್ರ ಹೋರಾಟಕ್ಕೆ ಸಿಕ್ಕ ಪ್ರತಿಫಲವೆಂದರೆ ಜೈಲುವಾಸ. ಅವಳ ಕಾರ್ಯಚಟುವಟಿಕೆಗಳು ಸಾಲ್ಲೆಹ್‌ನ 32 ವರುಷಗಳ ಆಳ್ವಿಕೆಗೆ ಕಂಟಕ ಪ್ರಾಯವಾಗಿರುತ್ತದೆ. "we speak to Abdullah saleh & his corrupt gang & his corrupt Family that they must leave before they are made to leave" ಎನ್ನುವ ಅವಳ ಈ ದಣಿವರಿಯದ ಆತ್ಮ ವಿಶ್ವಾಸವನ್ನು ಕಂಡ ರಾಜಾ ಅಲ್ತಯ್ ಬನಿ ಎನ್ನುವ ಅವಳ ಗೆಳತಿ, ಒಬ್ಬ ಕಾರ್ಯಕರ್ತೆ "ಒಬ್ಬ ಮಹಿಳೆಯ ನೇತೃತ್ವದಲ್ಲಿ ಸಹಸ್ರಾರು ಯುವಕರು ತಂಡೋಪತಂಡವಾಗಿ ಸಾಗುವುದನ್ನು ಕಂಡು ನಾನು ನಿಬ್ಬೆರಗಾಗಿ ಹೋದೆ" ಎನ್ನುತ್ತಾಳೆ. ಈ ಪ್ರತಿಭಟನಾ ಮೆರವಣಿಗೆಯ ಮೇಲೆ ಪೊಲೀಸರ ದಾಳಿಯಾಗಿ 13 ಜನ ಸಾವಿಗೀಡಾಗುತ್ತಾರೆ. ಎದೆಗುಂದದ ಕರ್ಮಾನ್ ಅವರಿಗೆ ಶಾಂತಿಯಿಂದಿರಬೇಕೆಂದು ಕರೆ ಕೊಡುತ್ತಾಳೆ. ನ್ಯೂಯಾರ್ಕಿನಲ್ಲಿ UN Security Council ಮುಂದೆ ತನ್ನ ನಾಡಿನ ಭವಿಷ್ಯಕ್ಕಾಗಿ ನ್ಯಾಯಕೋರಿ ಮನವಿಯೊಂದನ್ನು ಸಲ್ಲಿಸುತ್ತಾಳೆ. ಅವಳ ಮನವಿಯನ್ನು UN Security Councilನ ಸದಸ್ಯರು ಸರ್ವಾನುಮತದಿಂದ ಸಮ್ಮತಿಸುತ್ತಾರೆ. ಅಷ್ಟೇ ಅಲ್ಲದೆ ಅಲಿ ಸಾಲೇಹ್‌ನನ್ನು ತಕ್ಷಣವೇ ಗದ್ದುಗೆಯಿಂದ ಇಳಿಯ ಬೇಕೆಂದು ಕೌನ್ಸಿಲ್ ತಾಕೀತು ಮಾಡುವುದಲ್ಲದೆ, ಯಮನ್‌ನಲ್ಲಿ ಸಂಭವಿಸಿದ ಎಲ್ಲ ರೀತಿಯ ಸಾವು ನೋವು ಅನಾಹುತಗಳಿಗೆ ಸಾಲೇಹ್‌ನನ್ನು ಜವಾಬ್ದಾರನನ್ನಾಗಿ ಮಾಡುತ್ತದೆ. ಇದರಿಂದ ತೃಪ್ತಳಾಗದ ಕರ್ಮಾನ್ ಅವನನ್ನು ಕೂಡಲೇ ಸಂಬಂಧಪಟ್ಟ ಸಂಸ್ಥೆಗೆ ಒಪ್ಪಿಸಬೇಕೆಂದು ವರಾತ ಹೂಡುತ್ತಾಳೆ. ನವೆಂಬರ್ 23 ರಂದು ಸರ್ವಾಧಿಕಾರಿ ಸಾಲೇಹ್‌ನನ್ನು ಕೆಳಗಿಳಿಸುವಲ್ಲಿ ಯಶಸ್ವಿ ಯಾಗುತ್ತಾಳೆ.

"ಈ ಪ್ರಶಸ್ತಿ ಅರಬ್ ಇಲ್ಲವೇ ಮುಸ್ಲಿಮ್ ದೇಶಕ್ಕಿಂತ ಯಮನ್‌ನ ಜನರಿಗೆ ಸಂದ ಪ್ರಶಸ್ತಿಯಾಗಿದೆ. ಇದು ಜಗತ್ತಿನ ಎಲ್ಲ ಸರ್ವಾಧಿಕಾರಿ ಗಳಿಗೂ ಸರ್ವಾಧಿಕಾರ ವ್ಯವಸ್ಥೆಗೂ ಸಂದ ಉತ್ತರವಾಗಿದೆ. ಅರಬ್ಬರು, ಮುಸಲ್ಮಾನರು ಭಯೋತ್ಪಾದಕರಲ್ಲ ವೆಂಬುದನ್ನು ಜಗತ್ತಿಗೆ ವಿಶೇಷವಾಗಿ ಪಾಶ್ಚಾತ್ಯದೇಶಗಳಿಗೆ ತಿಳಿಸುವುದರ ಮೂಲಕ ಅವುಗಳ ಕಣ್ಣು ತೆರೆಸುವುದಾಗಿದೆ. ಪ್ರಪಂಚವು ಬದಲಾವಣೆಯ ಶಿಖರವನ್ನು ತಲಪುತ್ತಿದೆ ಎಂಬುದನ್ನು ಇದು ಧ್ವನಿಸುತ್ತದೆ." ಎಂದು ನೊಬೆಲ್ ಪ್ರಶಸ್ತಿ ಬಂದ ಈ ಸಂದರ್ಭದಲ್ಲಿ ಸಂದರ್ಶನ ವೊಂದರಲ್ಲಿ ಹೇಳಿಕೊಂಡಿದ್ದಾಳೆ.

ಮಹಿಳೆಯರನ್ನು ಬುರ್ಖಾದೊಳಗೆ ಮುಚ್ಚಿಟ್ಟ ಇಸ್ಲಾಂ ದೇಶಗಳಲ್ಲಿ, ಮನೆಯ ಹೊಸ್ತಿಲು ದಾಟುವುದಲ್ಲದೆ, ಬೀದಿಗಳಿದು ಕ್ರಾಂತಿಕಾರಿ ಚಟುವಟಿಕೆ ಗಳಲ್ಲಿ ಸಂಘಟಿತ ರಾಗುವುದು ಬದಲಾವಣೆಯ ಒಂದು ಶಿಖರವೇ. ಯಾಕೆಂದರೆ ಅವಳದೇ ಮಾತುಗಳಲ್ಲಿ ಹೇಳುವುದಾದರೆ ಅಲಿ ಸಾಲೇಹ್ ನಿಗೆ 'No.1 enemies' ಎಂದರೆ ಮಹಿಳೆಯರೇ. "He wanted me to go home, (but) women participated in revolution. He was knocked down" ಎಂದು ಹೇಳುವಲ್ಲಿ ಅವಳಿಗೆ ಯುದ್ಧ ಗೆದ್ದ ಹೆಮ್ಮೆಯಿದೆ. ಮಹಿಳೆಯ ಪಾತ್ರ ಕೇವಲ ಅಡುಗೆ ಮನೆಯಲ್ಲಿ ಮಾತ್ರವಲ್ಲ ಅವಳು ದೇಶವನ್ನು ಕಟ್ಟಬಲ್ಲಳು ಎನ್ನುವುದಕ್ಕೆ ತನಗೆ ಸಂದ ನೊಬೆಲ್ ಪ್ರಶಸ್ತಿಯೇ ಸಾಕ್ಷಿಯಾಗಿದೆ ಎನ್ನುವ ಅವಳು "woman is the leader, she can lead, it is not only struggle for women but for human beings" ಎಂದು ಹೇಳುವುದರ ಮೂಲಕ ಮಹಿಳಾ ಚಳವಳಿಗಳ ಸ್ವರೂಪ ವಿಸ್ತೃತಗೊಳ್ಳಬೇಕಾದ ಗುರುತರ ಜವಾಬ್ದಾರಿಯ ಕಡೆಗೆ ಗಮನ ಸೆಳೆಯುತ್ತಾಳೆ. ತುನಿಶಿಯನ್ ಜನರ ಮಹಾಕ್ರಾಂತಿಗೆ ಸಿಕ್ಕ ವಿಜಯವನ್ನು ಅಭಿನಂದಿಸುವ ಅವಳು ಗಡ್ಡಾಫಿಯ ಕೊಲೆಯೊಂದಿಗೆ ಸರ್ವಾಧಿಕಾರ ಅಂತ್ಯಗೊಂಡಿದೆ ಈಗ ಭವಿಷ್ಯದ ಮಾತೆಂದರೆ ಶಾಂತಿಯದು ಎನ್ನುತ್ತಾಳೆ. ❑

ನೊಬೆಲ್ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಮಾಡಿದ ಭಾಷಣದ ತುಣುಕುಗಳು



- ದೇಶವೊಂದರ ಆಂತರಿಕ ಶಾಂತಿಯು ಎರಡು ದೇಶಗಳ ನಡುವಿನ ಶಾಂತಿಗಿಂತ ಕಡಿಮೆ ಯದೇನಲ್ಲ. ಯುದ್ಧ ಎರಡು ರಾಷ್ಟ್ರಗಳ ನಡುವೆಯೇ ಘಟಿಸಬೇಕಾಗಿಲ್ಲ. ವ್ಯವಸ್ಥೆ ಯೊಂದು ತನ್ನದೇ ಜನರನ್ನು ದಬ್ಬಾಳಿಕೆಗೆ ಒಳಪಡಿಸುವುದು ಇನ್ನೂ ಕಂಟಕ ಪ್ರಾಯ ವಾದುದು.
- 1901ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಸ್ಥಾಪನೆ ಯಾದ ದಿನದಿಂದಲೂ ಮಿಲಿಯ ಗಟ್ಟಲೆ ಜನರು ಯುದ್ಧಗಳಲ್ಲಿ ಮಡಿದಿದ್ದಾರೆ. ಒಂದಿಷ್ಟು ಧೈರ್ಯ ಹಾಗೂ ವಿವೇಕವನ್ನು (ನಾವು) ತೋರಿದ್ದರೆ ಇಂತಹ ಅನಾಹುತ ಗಳನ್ನು ತಡೆಗಟ್ಟಬಹುದಿತ್ತು. ಇವುಗಳಿಗೆ ಅರಬ್ ದೇಶಗಳ ದೇಣಿಗೆಯೂ ಬಹಳವಾಗಿದೆ. ಶಾಂತಿ ಸಂದೇಶ ಸಾರಿದ ಪ್ರವಾದಿಗಳು ಹುಟ್ಟಿದ ಈ ನೆಲದಲ್ಲಿ, 'ಶಾಂತಿಯನ್ನು ಎತ್ತಿ ಹಿಡಿಯುವುದು ಭಗವಂತನಿಗೆ ಪ್ರಿಯವಾದುದು' ಎಂದು ಸಾರಿದ ನೆಲದಮೇಲೆ ಇವು ಘಟಿಸಿರುವುದು ಒಂದು ದುರಂತ.
- ನಮ್ಮ ಚರಿತ್ರೆ ಅನೇಕ ಯುದ್ಧಗಳನ್ನು ಕಂಡಿದೆ ಆದರೂ ಮಾನವ ಜನಾಂಗ ಅಳಿಯದೇ ಉಳಿದಿದೆ. ಮನುಷ್ಯನಿಗೆ ಕಟ್ಟುವ ಹಂಬಲ ಅದಮ್ಯವಾಗಿದೆಯೇ ಹೊರತು ಕೆಡಹುವುದಲ್ಲ ಎಂಬುದಕ್ಕೆ ಇದು ಪ್ರತೀಕವಾಗಿದೆ. ಇಂದು ಅಭಿವೃದ್ಧಿ ಹೊಂದುತ್ತಿರುವ ಸಮೂಹ ಮಾಧ್ಯಮ ಗಳು ಈ ನಂಬಿಕೆಯನ್ನು ಬಲಪಡಿಸುತ್ತಿವೆ.
- ಶಾಂತಿಯೆಂದರೆ ಕೇವಲ ಯುದ್ಧವನ್ನು ನಿಲ್ಲಿಸುವುದಲ್ಲ. ದಬ್ಬಾಳಿಕೆಯನ್ನು, ಅನ್ಯಾಯ ವನ್ನು ತಡೆಗಟ್ಟುವುದೂ ಆಗಿದೆ.
- ಅರಬ್ ದೇಶವೂ ಸೇರಿದಂತೆ ಹೆಚ್ಚಿನ ದೇಶಗಳು ನೋವನ್ನು ಅನುಭವಿಸಿವೆ ಯುದ್ಧದಿಂದ ದಣಿದಿವೆ. ಅವು ಯುದ್ಧದಲ್ಲಿ ತೊಡಗಿ ಕೊಂಡಿರದಿದ್ದರೂ ಶಾಂತಿಯಿಂದಲೂ ಇಲ್ಲ. ಇದುವರೆಗೆ ಹುಸಿ ಶಾಂತಿಯಲ್ಲಿ, "ಶಾಂತಿಯ ಗೋರಿಯಲ್ಲಿ" ಬದುಕಿದ್ದೆವು. ಜನರನ್ನು ಜಡರನ್ನಾಗಿ ಮಾಡುವ ಅವರ ಕನಸುಗಳನ್ನು ಕೊಲ್ಲುವ ನಿರಂಕುಶ ಪ್ರಭುತ್ವಕ್ಕೆ, ಭ್ರಷ್ಟಾಚಾರಕ್ಕೆ ಅಡಿಯಾಳಾಗಿ ಬದುಕುವುದು ಶಾಂತಿಯಲ್ಲ.

ತವಕ್ಕೊಲ್ ಕರ್ಮಾನ್

ಬಾಳಬಟ್ಟೆಯ ನೇಯ್ಗೆ-ಬರೆಹ

■ ಡಾ. ಬಿ.ಎಸ್. ಸುಮಿತ್ರಾಬಾಯಿ



ಇತ್ತೀಚೆಗೆ ತಮ್ಮ 69ನೆಯ ವಯಸ್ಸಿನಲ್ಲಿ ತೀರಿಕೊಂಡ ಇಂದಿರಾ ಗೋಸ್ವಾಮಿ ಸಮಗ್ರಭಾರತದಲ್ಲಿ ಕೊಂಡಾಡಲ್ಪಡುವ ಕೆಲವೇ ಸಮಕಾಲೀನ ಬರಹಗಾರರಲ್ಲಿ ಒಬ್ಬರು. ಅವರು ಸಣ್ಣಕಥೆ, ಕಾದಂಬರಿ, ಕಾವ್ಯ, ವೈಚಾರಿಕ ಬರಹ, ಸಂಶೋಧನೆ ಮುಂತಾದ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದು, ಅವರ ಕೃತಿಗಳು ಬಹುದಿಟ್ಟತನ ದಿಂದ ಕೂಡಿವೆ, ಮಹಿಳೆಯರ ಮತ್ತು ಅಂಚಿನ ನೆಲೆಯ ದುರ್ಬಲ ಜನರಲ್ಲಿ ಶಕ್ತಿ ತುಂಬಬಲ್ಲ ರೀತಿಯಲ್ಲಿವೆ. ದೇಶದ ಅತ್ಯುನ್ನತ ಪ್ರಶಸ್ತಿ (ಜ್ಞಾನಪೀಠ ಪ್ರಶಸ್ತಿ) ಆಕೆಗೆ 2001ರಲ್ಲಿ ಲಭಿಸಿತ್ತು. ಅವರ ಜನ್ಮಭೂಮಿಯಾದ ಅಸ್ಸಾಮಿನ ಜನರಿಗೆ ಅಕ್ಕರೆಯ 'ಬಾಯ್‌ಡು' (ಅಕ್ಕ) ಎನಿಸಿದ್ದ ಇಂದಿರಾ ತಮ್ಮ ಅಸಾಧಾರಣ ಸಾಹಿತ್ಯ ಸಾಧನೆಯ ಜೊತೆಗೆ ಭಯೋತ್ಪಾದಕ ಸಂಘಟನೆ ULFA ಹಾಗೂ ಅಸ್ಸಾಮಿ ಸರ್ಕಾರದ ನಡುವಿನ ಶಾಂತಿ ಒಪ್ಪಂದದ ಮಾತುಕತೆಯಲ್ಲಿ ಬಹು ಪ್ರಮುಖ ಪಾತ್ರ ವಹಿಸಿದವರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1983), ನೆದರ್‌ಲ್ಯಾಂಡ್ಸ್‌ನ Prince Claus Awardಗಳಂಥ ಅನೇಕಾನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿದ್ದ ಅವರ ಕೃತಿಗಳು ಅಸ್ಸಾಮಿ ಭಾಷೆಯಿಂದ ಇಂಗ್ಲಿಷ್ ಹಿಂದಿ ಹಾಗೂ ಅನೇಕ ಭಾರತೀಯ ಭಾಷೆಗಳಿಗೆ ಅನುವಾದ ಗೊಂಡಿರುತ್ತವೆ. ಅಖಿಲ ಭಾರತೀಯ ಮಟ್ಟದ ವಸ್ತು, ಜೀವನದ ಅನುಭವದ ಹರಹುಗಳಿಂದಾಗಿ ಆಕೆಗೆ ಅಸ್ಸಾಂನ ಹೊರಗಡೆ ಕೂಡ ಅಪಾರ ಜನಪ್ರಿಯತೆಯಿದೆ. ಮಾಮೊನಿ ರಾಯ್‌ಸಮ್ ಗೋಸ್ವಾಮಿ ಎಂಬುದು ಅವರ ಕಾವ್ಯನಾಮ. ಇಂದಿರಾ ಅವರ ಜೀವನ ಪರಿಚಯವನ್ನು ಎಲ್ಲಾ ಪತ್ರಿಕೆಗಳ ಶ್ರದ್ಧಾಂಜಲಿ ಲೇಖನಗಳಲ್ಲೂ ಕಂಡಿರುತ್ತೇವೆ. ಆದ್ದರಿಂದ 'ನಮ್ಮ ಮಾನಸ'ಕ್ಕಾಗಿ ಕೊಂಚ ಹೊಸ ರೀತಿಯಲ್ಲಿ ಅವರ ಪರಿಚಯಕ್ಕೆ, ಸ್ಮರಣೆಗೆ ಯತ್ನಿಸಲಾಗಿದೆ.

*ಇಂದಿರಾಗೋಸ್ವಾಮಿ ಅವರ ಸಂದರ್ಶನ ಮಾಡಿರುವ ಹೃದಯಾನಂದ ಗೊಗೊಯ್, ಸ್ವರ್ಣಲಿಪಿ ಎಂಬ ಸಾಹಿತ್ಯಕ-ಸಾಮಾಜಿಕ ಪತ್ರಿಕೆಯ ಸಂಪಾದಕರು. ಸ್ವಾತಂತ್ರ್ಯಯೋಧ ಪದ್ಮಭೂಷಣ ಶ್ರೀ ಚಂದ್ರಪ್ರಸಾದ್ ಸೈಕಿಯ ಅವರ ಸ್ಮರಣೆಗಾಗಿ ನಡೆಸುತ್ತಿರುವ ವೆಬ್‌ಪತ್ರಿಕೆ **Asianviews**, ಇದರ ಸಂಪಾದಕರಾಗಿ, ಅವರು ನಡೆಸಿದ್ದ ಸಂದರ್ಶನದ ಸಂಗ್ರಹ ಅನುವಾದ ಇಲ್ಲಿದೆ.*

ಹೃದಯಾನಂದ : ನಿಮ್ಮ ಸಾಹಿತ್ಯ ಕೊಡುಗೆಯ ವಿಸ್ತಾರವನ್ನು ಗಮನದಲ್ಲಿಟ್ಟುಕೊಂಡು, ನಿಮ್ಮನ್ನು ಭಾರತೀಯ ನವೋದಯದ ಬಹುಪ್ರಮುಖ ಉತ್ತರಾಧಿಕಾರಿ ಎನ್ನಬಹುದಲ್ಲವೆ? ಈ ಬಗ್ಗೆ ನಿಮ್ಮ ಅಭಿಪ್ರಾಯ ವೇನು?

ಮಾಮೊನಿ : ನನ್ನ ಓದುಗರು ಮತ್ತು ನನ್ನ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಕಾಣಲು ಅರಿತಿರುವವರು ಈ ವಿಷಯದಲ್ಲಿ ತೀರ್ಪು ನೀಡಬಲ್ಲರು ಅಷ್ಟೆ.

ಹೃ : ನಿಮ್ಮ ಬರಹಗಳಲ್ಲಿ ಸಂವೇದನೆಯ ಅತಿಸೂಕ್ಷ್ಮತೆಯು ತುಂಬಾ ಪ್ರಭಾವ ಬೀರುತ್ತವೆ; ವಾಸ್ತವವನ್ನು ಮರೆಸಿಡದ ಅನುಭವ ಕಥನ ಆ ಸೂಕ್ಷ್ಮಸಂವೇದನೆಯನ್ನು ಸಮೃದ್ಧ ಗೊಳಿಸುತ್ತದೆ. ಐಂದ್ರಿಕ ಅನುಭವಗಳನ್ನು ಇನ್ನೂ ಗಾಢವಾಗಿ ಹೇಳಬಹುದಿತ್ತೆಂದು ಯಾವಾಗಲಾದರೂ ನಿಮಗನ್ನಿಸಿದೆಯೆ?

ಮಾ : ನಿಸ್ಸಂದೇಹವಾಗಿ, ನನ್ನ ಕಾದಂಬರಿಗಳಲ್ಲಿ, ಅದರಲ್ಲೂ ಮೊದಲೆರಡು ಕಾದಂಬರಿಗಳಲ್ಲಿ ಐಂದ್ರಿಕ ಸಂವೇದನೆ ಯನ್ನು ಇನ್ನೂ ಹೆಚ್ಚಾಗಿ ಒಳಗೊಳ್ಳ ಬಹುದಿತ್ತು, ಹಾಗೆ ನಾನು ಇನ್ನೂ ಬಹಳಷ್ಟು ಹೇಳಬಹುದಿತ್ತು. 'ಚೆನಾ ಬೋರ್ ಗ್ಸೊರೋಟ್' 'ನೀಲಕಾಂತೀನ್ ಬ್ರೊಜೊ' ಕಾದಂಬರಿಗಳು ಇನ್ನೂ ಉತ್ತಮವಾಗಲು ಸಾಧ್ಯವಿತ್ತು. ಆ ಕಾದಂಬರಿಗಳನ್ನು ಬರೆದಾಗ ನನಗೆ ಇಪತ್ತೊಂದೋ ಇಪ್ಪತ್ತೆರಡೋ ವಯಸ್ಸು ಅಷ್ಟೆ. ಇನ್ನೂ 30ನ್ನು ತಲುಪಿರಲಿಲ್ಲ. ಅನುಭವಗಳು, ಸಂವೇದನೆಗಳು ತೀವ್ರ ಗೊಳ್ಳುವುದು ಆ ವಯಸ್ಸಿನಲ್ಲೇ. ವೈಯಕ್ತಿಕವಾಗಿ ಹೇಳುವುದಾದಲ್ಲಿ ಮನುಷ್ಯರ ಮನದಾಳದ ಅಸಂಖ್ಯ ಸೂಕ್ಷ್ಮ ಭಾವನೆಗಳು ಚೆನ್ನಾಗಿ ಬೆಳೆದು ಸ್ಫುಟವಾಗುವುದು 35–40ರ ಹರೆಯದಲ್ಲೇ. ಇಂದಿನ ವೈದ್ಯರೆನ್ನುವ ಹಾಗೆ ಮನುಷ್ಯರ ಬಾಲ್ಯ ಮುಗಿಯುವುದೇ 25ಕ್ಕೆ ಅಂತೆ.

ಹೃ : 'ತೇಜ್ ಅರು ಧುಲಿರೆ ಧುಕ್ಸೊರಿಕೊ ಪೃಷ್ಠ' ದಂತಹ ನಿಮ್ಮ ಹಲವು ಕಾದಂಬರಿಗಳಲ್ಲಿ ವಿದ್ಯುತ್ತಿನ ಶಾಕ್ ಹೊಡೆದ ಹಾಗೆ ಓದುಗರ ಮೈಗೂದಲು ನೆಟ್ಟಗೆ ನಿಮಿರಿ ಬಿಡುವಂಥ ಬರ್ಬರ ಭೀಕರ ಸನ್ನಿವೇಶಗಳನ್ನು ನೀವು ಚಿತ್ರಿಸಿದ್ದೀರಿ. ವಾಸ್ತವತೆ ಮತ್ತು ಕಲ್ಪನೆಗಳ ಮಧ್ಯೆ ಎಂಥ ಅಂತರಗಳನ್ನು ನೀವು ಕಾಯ್ದು ಕೊಳ್ಳುತ್ತೀರಿ?

ಮಾ : ನನ್ನ ಸಣ್ಣಕತೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ವಾಸ್ತವತೆಯ ಪ್ರಾಮಾಣಿಕ ಚಿತ್ರಣಕ್ಕೆ ನಾನು ಯತ್ನಿಸುತ್ತೇನೆ ನಿಜ. ಆದರೆ ಸಾಹಿತ್ಯ ಒಂದು ಕಲೆ. ಅಲ್ಲಿ ಕೇವಲ ಯಥಾವತ್ ವಾಸ್ತವದ ಪ್ರತಿಪಾದನೆಯ ವಿಧಾನವನ್ನು ಅನ್ವಯಿಸಲಾಗದು. ಹೀಗಾಗಿ ಬರಹಗಳಲ್ಲಿ ನಾನು ವಾಸ್ತವತೆ ಮತ್ತು ಕಲ್ಪನೆಗಳೆಂಬ ವ್ಯತ್ಯಾಸ ಕಾಯ್ದುಕೊಳ್ಳುವುದು ಬಹು ಕಡಿಮೆ. ಈ ಜಗತ್ತಿನಲ್ಲಿ ಅನೇಕ

ಘಟನೆಗಳು ನಡೆಯುತ್ತಿರುತ್ತವೆ. ಅವನ್ನೆಲ್ಲ ಇರುವಂತೆಯೇ ವಿವರಿಸುವುದು ಬಹಳ ಕಷ್ಟ ದೇವರು ಈ ಲೋಕದಲ್ಲಿ ಸೃಷ್ಟಿಸಿರುವ ಜೀವಿಗಳಲ್ಲಿ ಮನುಷ್ಯನೇ ಅತ್ಯಂತ ಕ್ರೂರಿ. ಅಂತಹ ಪಶುತ್ವದ ಕ್ರೂರ ಸನ್ನಿವೇಶಗಳನ್ನು ವರ್ಣಿಸಲು ಕಲ್ಪನೆಯ ಮೊರೆ ಹೋಗುವ ಅವಶ್ಯಕತೆಯೇ ನನಗಿರಲಿಲ್ಲ. ನಿಜವೆಂದರೆ, ವಾಸ್ತವದ ಅನೇಕ ದೃಶ್ಯಗಳ ವೈಚಿತ್ರ್ಯಗಳನ್ನು ಒಂದು ಕ್ರಮದಲ್ಲಿ ಹಿಡಿಯಲು ನಾನು ನನ್ನ ಭಾವನಾತೀವ್ರತೆಗೆ ಕಡಿವಾಣ ಹಾಕಿಯೇ ಯತ್ನಿಸಬೇಕಾಯಿತು. ನನ್ನ ಬದುಕಿನ ಅನುಭವಗಳು ತುಂಬಾ ವಿಸ್ತಾರವಾದಂಥವು. ಜನರೆನ್ನುವ ಹಾಗೆ ಅವು ನಿಗೂಢ ರೀತಿಯವೂ ಹೌದೋ ಏನೋ! ನಾನು ಸಾಧು ಸಂತರನ್ನು ಕಂಡಿದ್ದೇನೆ, ಹಾಗೆಯೇ ಪಶುತ್ವದ ಕ್ರೂರ ಮನುಷ್ಯರನ್ನು ಬದುಕಿನಲ್ಲಿ ನೋಡಿದ್ದೇನೆ.


ಹೃ : *ನಿಮ್ಮ ಪ್ರಧಾನ ಸ್ತ್ರೀಪಾತ್ರಗಳೆಲ್ಲ ತುಂಬಾ ಧೈರ್ಯವಂತೆಯರು, ಬಂಡೇಳುವವರು. ಇದಕ್ಕೆ ಮುಖ್ಯ ಕಾರಣ ಏನೆಂದು ನಿಮ್ಮ ಅಭಿಪ್ರಾಯ?*

ಮಾ : ನನ್ನ ವೈಯಕ್ತಿಕ ಬದುಕಿನ ಗಾಢವಾದ ದುಃಖ ಮತ್ತು ತೀವ್ರವಾದ ಅಸಮಾಧಾನದ ಭಾವನೆಗಳು ನನ್ನ ಸ್ತ್ರೀಪಾತ್ರ ಗಳೊಳಗೆ ಮೈತಳೆದಿವೆ. 'ದಂತಾಲ್ ಹಾಥೀರ್ ಉನೆ ಖೋವಾ ಹೌದಾ' ಕಾದಂಬರಿಯ ಗಿರಿಬಾಲೆಯ ವ್ಯಕ್ತಿತ್ವದಲ್ಲಿ ಆಗಿರುವ ಹಾಗೆಯೇ ಯಜ್ಞಯಾಗಗಳಲ್ಲಿನ ಪ್ರಾಣಿಹಿಂಸೆಗಳ ವಿರುದ್ಧವಾದ ನನ್ನ ಪ್ರತಿಭಟನೆ 'ಛಿನ್ನ ಮಸ್ತಾರ್ ಮಾನ್ನುತೋ' ಕಾದಂಬರಿಯ ಬಿಥಿಬಾಲೆಯಲ್ಲಿ ಸೇರಿಹೋಗಿದೆ. 'ದೇವಿ ಪೀಠಾರ್ ತೇಜ್' ಕಾದಂಬರಿಯಲ್ಲಿ ಪರಿತ್ಯಕ್ತೆ ಪದ್ಮಪ್ರಿಯಾ ಪಾತ್ರದಲ್ಲಿಯೂ ಇದೇ ರೀತಿಯ ದುಃಖ ಮತ್ತು ಕ್ರೋಧ ಭಾವನೆಗಳು ಸಂಮಿಶ್ರಿತವಾಗಿವೆ. ಬಹುಶಃ ಹೃದಯದಾಳದಿಂದ ಹೊಮ್ಮಿ ಬರುವುದರಿಂದಲೇ ಇಂಥ ಅಭಿವ್ಯಕ್ತಿ ಸ್ಫುಟವಾಗಿ ಪರಿಣಾಮಕಾರಿಯಾಗಿ ಹೊಮ್ಮಿರುತ್ತದೆ ಅನ್ನಿಸುತ್ತದೆ. ಆದರೆ ಇದರ ಬಗ್ಗೆ ತೀರ್ಮಾನ ಹೇಳಬಹುದಾದ್ದು ನಾನಲ್ಲ. ನನ್ನ ಓದುಗರು ನನ್ನಸಾಹಿತ್ಯದ ತೀರ್ಪುಗಾರರು. ವಾಸ್ತವವು ಕಲ್ಪನೆಗಿಂತಲೂ ತುಂಬ ಪ್ರಭಾವಶಾಲಿ ಎನ್ನುವುದು ಹಲವಾರು ಬಾರಿ ನನಗೆ ಅನುಭವಕ್ಕೆ ಬಂದಿದೆ.

ಹೃ : *ಉಪಮೆಗಳನ್ನು ಸಂಕೇತಗಳನ್ನು ತುಂಬ ಧ್ವನಿಪೂರ್ಣವಾಗಿ ಆಕರ್ಷಕವಾಗಿ ಬಳಸಿಕೊಳ್ಳುವುದರಲ್ಲಿ ನೀವು ತುಂಬಾ ಯಶಸ್ವಿ ಯಾಗಿದ್ದೀರಿ. ನಿಮ್ಮ ಸಣ್ಣಕತೆಗಳಲ್ಲೂ ಕಾದಂಬರಿಗಳಲ್ಲೂ ಕಥಾ ವಸ್ತುವಿನ ನಿರೂಪಣೆಯಲ್ಲೂ ಅದರ ಬೆಳವಣಿಗೆಯಲ್ಲೂ ಇಂಥ (ಉಪಮಾ ಸಂಕೇತಗಳ) ಬಳಕೆ ನಿಮ್ಮ ಓದುಗರಿಗೆ ಸಂತೃಪ್ತಿ ನೀಡಿದೆ. ಈ ಲಕ್ಷಣವೇ ಏಕೆ ನಿಮ್ಮ ಬರಹಗಳಲ್ಲಿ ಅಷ್ಟೊಂದು ಜೀವಂತವಾಗಿದೆ?*

ಮಾ: ಕೆಲವು ನಿಜದ ಅಂಶಗಳನ್ನು ಅವು ಇರುವಂತೆಯೇ ನಿರ್ವಚಿಸಲು ಸಾಧ್ಯವಾಗದು. ನಿಮ್ಮ ಈ ಪ್ರಶ್ನೆ ಕೂಡ ಅಂತಹುದೇ ಒಂದು ನಿಜದ ಅಂಶ. ಒಂದು ಕತೆಯನ್ನು ಬರೆಯುತ್ತಿರುವಾಗ ಮನದಲ್ಲೇಳುವ ಅನೇಕ ರೀತಿಯ ಪ್ರತಿಕ್ರಿಯೆಗಳೂ ಕಥಾ ವಸ್ತು ವಿನೊಂದಿಗೆ, ಅದರ ವ್ಯಕ್ತಿಗಳಿಗೆ ಸಂಬಂಧಿಸಿದ ದೃಶ್ಯಗಳೊಂದಿಗೆ ಬೆರೆತುಕೊಳ್ಳುವುದೂ ಒಂದು ಕಾರಣವಿದ್ದೀತು. ಆಕಾಶ, ಗಾಳಿ, ನದಿಗಳು, ಪರ್ವತಗಳು ಸಹಜವಾಗಿ ಹೃದಯದ ದ್ವಾರವನ್ನು ಹಿಗ್ಗಿಸುತ್ತವೆ. ಆ ಕಾರಣಕ್ಕೇ ಇದ್ದೀತು. ನಾನು 'ಛಿನ್ನಮಸ್ತಾ'





ಕಾದಂಬರಿಯಲ್ಲಿ ಸೂರ್ಯಾಸ್ತ ವನ್ನು 'ಬಲಿಯ ರಕ್ತದಿಂದ ಲೇಪಿತವಾದಂತೆ, ಹನಿಹನಿ ಯಾಗಿ ತೊಟ್ಟಿಕ್ಕುವಂತೆ' ಎಂದು ಕಲ್ಪಿಸಿಕೊಂಡಿದ್ದೇನೆ. ಕೆಲವು ವರ್ಣನೆಗಳನ್ನು ಜೀವಂತ ವಾಗಿಸಲು ನಾನು ಯತ್ನಿಸುತ್ತೇನೆ 'ಛಿನ್ನಮಸ್ತಾ'ದಲ್ಲಿ ಡೊರತಿಬ್ರೌನ್‌ಳನ್ನು ಸಾಮೂಹಿಕವಾಗಿ ಅತ್ಯಾಚಾರಕ್ಕೆ ಬಲಿ ಯಾಗಿಸುವ ಮೊದಲು ಆ ಜನರು ಅವಳ ಬಟ್ಟೆಗಳನ್ನು ಹರಿದು ಕೀಳುವ ರೀತಿಯನ್ನು ಅವರು ಪ್ರಾಣಿಗಳ ಚರ್ಮಗಳನ್ನು ಹಿಸಿದು ಹಾಕುವ ರೀತಿ ಇತ್ತು ಎಂದು ವರ್ಣಿಸಿದ್ದೂ ಇದೇ ರೀತಿಯ ಉದಾಹರಣೆ.

"...ಬ್ರಹ್ಮಪುತ್ರ ತುಂಬಿ ರಭಸವಾಗಿ ಹರಿಯುತ್ತಿದೆ. ಕಪ್ಪಾದ ಮರದ ದಿಮ್ಮಿಗಳು ತೇಲಿ ಹೋಗುತ್ತಿವೆ, ಬ್ರಹ್ಮಪುತ್ರದ ಎದೆ ಮೇಲೆ ಮೂಡಿದ ಉಗುರುಗಾಯಗಳ ಕಪ್ಪುಕಲೆಗಳಂತೆ... ದೇವಾಲಯದ ವೈಭವದ ಗೋಪುರದ ಅಲಂಕಾರ ಉರುಳಿ ಚೂರು ಚೂರಾದ ಹಾಗೆ... ಓಹ್ ಮತ್ತೊಮ್ಮೆ ಬ್ರಹ್ಮಪುತ್ರ ತುಂಬಿ ಹರಿಯುತ್ತಿದೆ. ಪ್ರವಾಹದೊಂದಿಗೆ ಕೊಚ್ಚಿಕೊಂಡು ಬಂದ ಇನ್ನಷ್ಟು ಬೊಂಬುಗಳು, ಮರದ ತುಂಡುಗಳು... ಕಂಬವೊಂದಕ್ಕೆ ತಗಲು ಹಾಕಿರುವ ಹೆಣಹೊರಲು ಬಳಸುವ ಕಲ್ಲುಭಾರ ವೊಂದು ತೇಲಿಹೋಗು ತ್ತಿರುವಂತೆ..."

ಮುಂತಾಗಿ ಒಂದು ಚಿತ್ರ ಒಂದು ದೃಶ್ಯದಲ್ಲಿ ಜೀವಂತವಾಗಿ ತೋರುವ ಹಾಗೆ ನಾನು ಪ್ರಯತ್ನಿಸುತ್ತೇನೆ. ಇನ್ನೊಂದು ಅಂಥ ಉದಾಹರಣೆ ನೋಡಿ:

"ಮಾತೃದೇವಿಯ ಮಹಾಭಕ್ತ ರಾಜಾರುದ್ರಸಿಂಗ್‌ನ ಹೆಣವನ್ನು ದೋಣಿಯೊಳಕ್ಕೆ ಬಲವಾಗಿ ಎಳೆದು ತರಲಾಯಿತು. ರಾಜನ ಪಾದಗಳ ಬಳಿ, ಅಂದರೆ, ದೋಣಿಯ ಕೊನೆಭಾಗದಲ್ಲಿ ರಕ್ತದಲ್ಲಿ ತೋಯ್ದುಹೋದ ಕೆಲವು ನರ್ತಕಿಯರಿದ್ದಾರೆ. ಅವರ ಕೈಗಳಲ್ಲಿ ಹಳದಿ ಬಣ್ಣದ ಸುಣ್ಣದ ಗಡಿಗೆಗಳಿವೆ. ಸೊಂಟಗಳಲ್ಲಿ ಚಿನ್ನದ ಡಾಬುಗಳಿವೆ. ಕಿವಿಗಳಲ್ಲಿ ಹೊನ್ನಿನ ಓಲೆಗಳಿವೆ, ಬೊಂಬುಗಳ ನಡುವೆ ಸಿಕ್ಕಿಸಿ ಇರುಕಿಸಿ ಈ ಹುಡುಗಿಯರನ್ನು ಕೊಲ್ಲಲಾಗಿದೆ. ಆಹ್! ಎಂಥ ದೇವೀ ಅನುಗ್ರಹ! ರಕ್ತ! ರಕ್ತ! ರಕ್ತ! ಅಲ್ಲೆಲ್ಲೋ ದೂರದಲ್ಲಿ ಬಲಿಕೊಡಲಾದ ಕೋಣಗಳ ತಲೆಗಳು ಉರುಳಿ ಬಿದ್ದಿವೆ. ಹಬ್ಬದ ಔತಣಕ್ಕೆಂದು ಅದೇತಾನೆ ಹೋಳು ಮಾಡಿ ಬೇಯಿಸುತ್ತಿರುವ ಮಾಂಸದ ವಾಸನೆಯ ಜೊತೆ ಶೇಫಾಲಿ ಹೂವುಗಳ ಸುಗಂಧವೂ ಬೆರೆತು ಅನನ್ಯ ಸನ್ನಿವೇಶ ನಿರ್ಮಿಸಿದೆ.



ಕೂದಲನ್ನು ಜಟೆಯಾಗಿ ಕಟ್ಟಿಕೊಂಡಿದ್ದ ಆ ವ್ಯಕ್ತಿಯ ದೇಹ ನಿಧಾನವಾಗಿ ಬಾವುಟದ ಹಿಂದಿನಿಂದ ಮುಂದೆ ಕಾಣಿಸ ತೊಡಗಿತು, ಕೊಳದ ಒಳಗಿನಿಂದ ಪುರಾತನ ಭೂಭಾಗ ವೊಂದು ಮೆಲ್ಲಗೆ ಹೊರ ತೋರಿದಂತೆ... ಈ ನೆಲದ ಭಾಗದ ತುಂಬ ನೀರು ಪಾಚಿ ನಾರು ಬಳ್ಳಿಗಳಿಂದ ತುಂಬಿದೆ. ಅವನ ಮೈ ಬಣ್ಣ ನೆಲದೊಳಗಿಂದ ಅಗೆದು ಹೊರತೆಗೆದ ಹೆಣದ ಮೂಳೆಯ ತರಹದ್ದೇ ಬಣ್ಣ..."

ನನ್ನ ಸಣ್ಣ ಕತೆಗಳಲ್ಲೂ ಈ ಬಗೆಯ ಜೀವಂತಿಕೆಯುಳ್ಳ ದೃಶ್ಯವರ್ಣನೆಗೆ ನಾನು ಯತ್ನಿಸಿದ್ದೇನೆ. 'ಪಶು' ಎಂಬ ಕತೆಯ ಈ ವರ್ಣನೆಯನ್ನು ಉದಾಹರಿಸಬಹುದು:

"...ಒಂದೊಂದು ವಿಭಾಗವೂ ಪಶುಗಳಾಗಿ ಬದಲಾದ ಹಾಗೆ ತೋರುತ್ತಿತ್ತು. ಅವರ ದೇಹಗಳು ಘೇಂಡಾಮೃಗದ ಚರ್ಮ ದಂತೆ ದಪ್ಪನಾಗಿಬಿಟ್ಟವು. ಅವರ ಒಳಲೋಕಗಳು ಹಿಮಕರಡಿಗಳ ಮೈಗೂದಲಿನಂತೆ ಆಗಿದ್ದವು. ಈ ಹಿಮಕರಡಿಗಳು ಸಮುದ್ರದಲ್ಲಿ ಈಸಿದ ನಂತರವೂ ಕೂದಲುಗಳು, ಉಗುರುಗಳು ಒದ್ದೆಯಾಗದ ಹಾಗೆ ಕಾಪಾಡಿಕೊಳ್ಳುತ್ತವೆಂದು ಹೇಳುತ್ತಾರೆ. ಅವುಗಳ ದಾಹ ವೆಂದರೆ ವ್ಯಾಂಪೇರುಗಳ ರಕ್ತದಾಹದಂತೆಯೇ. ಸಂನ್ಯಾಸಿ ಏಡಿಯ ಹಾಗೆ ಬೇಕೆಂದಾಗ ಬೇರೆಯವರ ವೇಷಗಳನ್ನು ತೊಡಬಲ್ಲವರು ಇವರು... ಹೌದು ಹೌದು. ಅವಶ್ಯಕತೆ ಹಾಗಿದ್ದರೆ ಅವರೇನು ಮಾಡಿಯಾರು... ಅವಶ್ಯಕತೆ ಬಿದ್ದರೆ ವ್ಯಾಘ್ರವನ್ನೇ ಹರಿದು ತಿನ್ನುವವರೇ ಸರಿ... "ಇಂಥ ವರ್ಣನೆಗಳನ್ನು ನನ್ನ ಸಾಹಿತ್ಯದ ತುಂಬ ಕಾಣಬಹುದು.

ಹೃ : ನಿಮ್ಮ ಕಥೆಗಳನ್ನು, ಪಾತ್ರಗಳನ್ನೂ ನಿರೂಪಿಸುವಾಗ ನೀವು ಏನನ್ನೂ ಮರೆಮಾಚುವುದಿಲ್ಲವಲ್ಲ. ಹೀಗೆ ಮಾಡುವ ಮೂಲಕ ಕೆಲವು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ತೋರಿಸಲು ನಿಮಗೆ ಸಾಧ್ಯವಾಗಿದೆ ಅನ್ನಿಸುವುದೆ?

ಮಾ : ನಿಮ್ಮ ಈ ಪ್ರಶ್ನೆಗೆ ಉತ್ತರವಾಗಿ ನಾನು ನನಗೆ ಅಸ್ಸಾಮಿನ ಎಲ್ಲಾ ಸ್ಥಳಗಳಿಂದಲೂ, ಅಸ್ಸಾಂ ಹೊರಗಿನಿಂದಲೂ ಓದುಗರು ಬರೆದಿರುವ ಪತ್ರಗಳನ್ನು ಸ್ಮರಿಸಿಕೊಳ್ಳಬಯಸುತ್ತೇನೆ. ನನ್ನ ಆತ್ಮಕಥನವಾದ 'ಆಧಾ ಲೇಖಾ ದೊಸ್ತಬೇಜ್' ಅನ್ನು ಓದಿದ ಮೇಲೆ ತಮ್ಮ ಸ್ವಂತದ ಬದುಕಿನ ಹೋರಾಟಗಳಿಗೆ ಎಂಥಾ ಪ್ರೇರಣೆ ಸಿಕ್ಕಿತೆಂದು ಅನೇಕರು ನನಗೆ ಬರೆದಿದ್ದು ನನ್ನ ಬರಹಗಳು ಅನೇಕರ ಹೃದಯಗಳನ್ನು ಮುಟ್ಟಿವೆ ಎಂಬ ಭಾವನೆ ನನಗೆ ಬಂದಿದೆ. ಈಗಲೂ ಅಂಥ ಪತ್ರಗಳು ಬರುತ್ತಲೇ ಇವೆ. ಕೆಲವರಂತೂ ಪತ್ರದ ಜೊತೆ ಕವನಗಳನ್ನು ಬರೆದು ಕಳಿಸಿರುತ್ತಾರೆ. ನನ್ನ ಆತ್ಮಕಥನದ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು (ಬೇರೆ ಬೇರೆ ಸ್ಥಳಗಳ) ಜನರ ಮೇಲೂ ಎಷ್ಟು ಪ್ರಭಾವ ಬೀರಿವೆ ಎಂದು ಯೋಚಿಸಿದರೆ ನನಗೆ ಆಶ್ಚರ್ಯ ವಾಗುತ್ತದೆ.

'ಆಧಾಲೇಖಾ ದೊಸ್ತಬೇಜ್' ಕೃತಿಯ ಹಿಂದಿ ರೂಪವನ್ನು 'ಜಿಂದಗಿ ಕೊಯಿ ಸೌದಾ ನಹೀ' ಎಂಬ ಹೆಸರಿನಲ್ಲಿ ದೆಹಲಿಯ ಸರಸ್ವತಿ ಬಿಹಾರ್ ಪ್ರಕಾಶನದವರು ಪ್ರಕಟಿಸಿದರು. ಅದನ್ನು ಓದಿದ ಮಧ್ಯ ಪ್ರದೇಶದ ಲೇಖಕ ದಿನೇಶ್ ದ್ವಿವೇದಿ ತಾವು ಪ್ರಕಟಿಸುವ 'ಪುನಶ್ಚರ' ಎಂಬ ಪತ್ರಿಕೆಯ ಇಡೀ ಒಂದು ಸಂಚಿಕೆಯನ್ನು ನನ್ನ ಬರಹಗಳಿಗೆಂದೇ ಮೀಸಲಿಟ್ಟು 2000ದ ಇಸವಿಯ ಡಿಸೆಂಬರ್‌ನಲ್ಲಿ ಪ್ರಕಟಿಸಿದರು. ಆ ಸಂಚಿಕೆಗೆ ನನ್ನ ಸಾಹಿತ್ಯ ಕುರಿತು ಬರೆದವರಲ್ಲಿ ಅಸ್ಸಾಮಿನ ಹೊರಗಿನವರೇ ವಿಶೇಷ ವಾಗಿದ್ದಾರೆ. ಅಮೃತಾಪ್ರೀತಮ್, ಮಹೇಶ್ ದರ್ಪಣ್, ಶರವಣಕುಮಾರ್, ಅಲಕಾಪಾಂಡೆ, ಡಾ. ಬುದ್ಧದೇವ ಚಟರ್ಜಿ, ಡಾ. ಭಾರತೀಝುವೇರಿ, ಸರೋಜ್‌ಶರ್ಮಾ, ಎಂ.ಎಸ್. ರಾಜನಾರಾಯಣ, ಕಿರಣ್‌ಕುಮಾರ್‌ಪೈಗಳಂಥ ಪ್ರಖ್ಯಾತ ಸಾಹಿತಿಗಳೆಲ್ಲ ಸೇರಿದಂತೆ ಅನೇಕರು ಅದರಲ್ಲಿ ಲೇಖನಗಳನ್ನು ಬರೆದಿದ್ದಾರೆ. ಪಂಜಾಬಿನ ಸುಪ್ರಸಿದ್ಧ ಲೇಖಕ ಕರ್ತಾರ್‌ಸಿಂಗ್ ದುಗ್ಗಾಲ್ ಹೇಳಿರುವ ನುಡಿಗಳಿವು:


"ಶ್ರೀಕೃಷ್ಣನ ಪ್ರೇಮಲೀಲೆಗಳ ನೆಲೆಯಾದ ಬೃಂದಾವನದ ಅತಿಬೋಳಾದ ಚಿತ್ರ ಮತ್ತು ಅಲ್ಲಿ ಹುದುಗಿರುವ ದ್ರೋಹ, ಯಾತನೆಗಳ ವರ್ಣನೆಗಳು ಮನದಲ್ಲಿ ದುಃಖ ಉಕ್ಕಿಸುತ್ತವೆ. ಹಾಗೆಯೇ ಮಧುವಿನ ಪ್ರಸಂಗದ ನಿಧಾನವಾದ ನಿರೂಪಣೆ ಮನೋವೇಧಕವಾಗಿದೆ. ನೇರವಾಗಿ ಹೃದಯಕ್ಕೇ ಹೋಗಿ ಮುಟ್ಟುವ ನಿರೂಪಣೆ ಮತ್ತು ಅಭಿವ್ಯಕ್ತಿ ಇದಾಗಿದೆ."

ಹೃ : ನೀವು ಮಾನವತಾವಾದಿ ಸಾಹಿತಿ, ಸದಾ ನಿರ್ಭೀತವಾದ ಆದರೆ ಅನುಕಂಪಭರಿತ ಹೃದಯದ ಹುಡುಕಾಟದಲ್ಲಿ ತೊಡಗಿರುವವರು ಈ ವಿಷಯದಲ್ಲಿ ನಿಮಗೆ ಸ್ಫೂರ್ತಿ ಯಾವುದರಿಂದ? ಅಂಥಾದ್ದನ್ನು ನಿರ್ವಹಿಸಲು ಯಾವುದು ನಿಮಗೆ ಶಕ್ತಿ ನೀಡುತ್ತದೆ?

ಮಾ : ಮಾನವತೆ ಬಗೆಗೆ ಏನನ್ನಾದರೂ ಬೋಧಿಸುವ ಅವಶ್ಯಕತೆ ನನಗಿಲ್ಲ. ಅದು ಹೃದಯದಲ್ಲಿ ಯಾವಾಗಲೂ ಸಹಜವಾಗಿ ಹುಟ್ಟಿ ಹರಿಯುವ ಪ್ರವಾಹ. ಆದರೆ ನನ್ನ ತಾಯಿ ಮತ್ತು ತಂದೆ ನನಗೆ ಕಲಿಸಿದ್ದನ್ನು ಮಾತ್ರ ಮರೆಯಲಾರೆ. ಬಾಲ್ಯದಲ್ಲಿ ಒಂದು ದಿನ ಕಟುಕನೊಬ್ಬ ಕಪ್ಪು ಆಡೊಂದನ್ನು ಕೊಲ್ಲಲು ಎಳೆದೊಯ್ಯುತ್ತಿದ್ದ. ಅದನ್ನು ಕಂಡು ನನ್ನ ತಂದೆಯವರು ಒಂದೇ ಸಮನೆ ಅರಚಿ ಕೊಳ್ಳುತ್ತಿದ್ದ ಆ ಭಯಭೀತ ಆಡಿನ ಬಗ್ಗೆ ದಯೆಗೊಂಡು ಆ ಕಟುಕನಿಂದ ಅದನ್ನು ಖರೀದಿಸಿ ನಮಗೆ ಆಡುವುದಕ್ಕೆಂದು ತಂದು ಬಿಟ್ಟಿದ್ದರು. ನಮ್ಮ ಅಜ್ಜನ ವಾರ್ಷಿಕದ ದಿನ ನನ್ನ ಶ್ರಾದ್ಧದ ಭೋಜನಕ್ಕೆಂದು ಆಡೊಂದನ್ನು ತಂದು ನೀರಲ್ಲಿ ತಲೆ ಮುಳುಗಿಸಿ ಉಸಿರು ಕಟ್ಟಿಸಿ ಕೊಲ್ಲುವ ಪದ್ಧತಿ ದಕ್ಷಿಣ ಕಾಮ ರೂಪದಲ್ಲಿ ನಮ್ಮ ಪೂರ್ವಜರ ಸತ್ರದಲ್ಲಿ ರೂಢಿಯಲ್ಲಿತ್ತು. ತಂದೆ ಅದನ್ನು ನಿಲ್ಲಿಸಿಬಿಟ್ಟರು. ಅದೇ ಕಾಲದಲ್ಲಿ ಈ ಸತ್ರನಿವಾಸದ ಆನೆಯೊಂದು ಮದವೇರಿ ಜನರನ್ನು ಕೊಲ್ಲಲು ತೊಡಗಿದಾಗ ಸರ್ಕಾರಿ ಆಜ್ಞೆಯ ಅನುಸಾರ ಅದನ್ನು ಗುಂಡಿಟ್ಟು ಕೊಲ್ಲಲಾಯಿತು. ಆ ದಿನ ನಮ್ಮ ತಂದೆ ಎಷ್ಟೊಂದು ಕಣ್ಣೀರಿಟ್ಟಿದ್ದರೆಂಬ ಚಿತ್ರ ಇನ್ನೂ ಕಣ್ಣಿಗೆ ಕಟ್ಟಿದಂತಿದೆ.

ನನ್ನ ತಾಯಿ ಅಂಬಿಕಾದೇವಿ ತುಂಬ ಮೃದು ಹೃದಯದ ಮಹಿಳೆ. ಅವರು ಬಯಸಿದರೆ ತುಂಬ ಶ್ರೀಮಂತಿಕೆ, ವೈಭವಗಳ ಜೀವನ ಬಾಳಬಹುದಿತ್ತು. ಆದರೆ 'ಆಡಂಬರ' ಎಂಬ ಶಬ್ದವೇ ಅವರಿಗೆ ತಿಳಿದಿರಲಿಲ್ಲ. ಒಮ್ಮೆ ಲಾಟೀನಿನಿಂದ ಎದ್ದ ಜೋರಾದ ಉರಿ

ಮನೆಯನ್ನೇ ಸುಟ್ಟುಹಾಕಿ ಬಿಡುವಂತಿದ್ದಾಗ ಧೈರ್ಯವಾಗಿ ಮುನ್ನುಗ್ಗಿ ಆರಿಸಿದ್ದರು. ಒಬ್ಬ ಅಸಹಾಯಕ ಹೆಣ್ಣು ಕೆಲಸ ಕೋರಿ ಮನೆಗೆ ಬಂದಿದ್ದಳು. ಅವಳ ಮೇಮೇಲಿದ್ದ ನವೆದು ಹರಿದುಹೋದ ಬಟ್ಟೆಗಳನ್ನು ಕಂಡು ನನ್ನ ತಾಯಿ ಜಡಿಮಳೆ ಯಿದ್ದರೂ ಅಂಗಡಿಗೆ ಹೋಗಿ ಬಟ್ಟೆಗಳನ್ನು ಕೊಂಡು ತಂದು ಆಕೆಗೆ ನೀಡಿದ್ದರು. ಮಳೆಯಲ್ಲಿ ನೆನೆದ ಅವರು ಎರಡು ದಿನ ಜ್ವರದಲ್ಲಿ ನರಳಿದ್ದರು. ಆದರೆ ಆ ಹೆಂಗಸಿನ ನಡತೆ ಸರಿಯಿರ ಲಿಲ್ಲವೆಂದು ಅನಂತರ ನಮಗೆ ತಿಳಿದುಬಂತು. ನೆಂಟರಿಷ್ಟರು ಲೌಕಿಕ ವ್ಯವಹಾರದಲ್ಲಿ ದಡ್ಡಳೆಂದು ನನ್ನ ತಾಯಿಯನ್ನು ಆಡಿಕೊಂಡಿದ್ದರು. ಆದರೂ ಅಮ್ಮನಲ್ಲಿ ದೇವರಂಥ ಕೆಲವು ಗುಣಗಳಿದ್ದುವು. ಅವು ನನ್ನ ಮೇಲೆ ತುಂಬಾ ಪ್ರಭಾವ ಬೀರಿವೆ.



ನನಗೆ ಜಗತ್ತಿನ ಜನರೆಲ್ಲರೂ ಶಾಖಾಹಾರಿಗಳೇ ಆಗಲಿ ಎಂಬ ಕನಸೊಂದು ಇದೆ. ಕಟುಕರ ಅಂಗಡಿಗಳು, ದೇವಾಲಯದ ಅಂಗಳಗಳು, ಊರತೇರಿನ ಉತ್ಸವದ ಜಾಗಗಳು ಎಲ್ಲಾ ಕಡೆ ಗಳಲ್ಲೂ ರಕ್ತದ ಕಲೆಗಳು ಕಾಣೆಯಾಗಬೇಕು. ಬಲಿ ಕೊಡಲಿಕ್ಕೆಂದು ಬಲಾತ್ಕಾರವಾಗಿ ಎಳೆದೊಯ್ಯಲಾಗುತ್ತಿದ್ದ ಕೋಣವೊಂದು ಭೀತಿಯಿಂದ ಹಿಗ್ಗಲಿಸಿದ್ದ ಹೊರಳುಗಣ್ಣನ್ನು ಮೊದಲಸಲ ಕಂಡಾಗ ನನಗೆ ಎಷ್ಟೋ ದಿನಗಳವರೆಗೆ ಬೇರೇನೂ ಯೋಚಿಸ ಲಾಗದಂತಾಗಿತ್ತು. ಆಗ ತುಂಬ ಅಸಹಾಯಕತೆ ಅನುಭವಿಸಿದ್ದೆ. ಇಂತಹ ಮನದಲ್ಲಿ ಉಳಿದು ಕಾಡಿಸುವಂಥ ಅನುಭವಗಳನ್ನು ನನ್ನ 'ಛಿನ್ನಮಸ್ತಾರ್ ಮಾನುಹ್ತೋ', ಕಾದಂಬರಿಯಲ್ಲಿ ಅಭಿವ್ಯಕ್ತಿಸಿದ್ದೇನೆ.

ನಾನು ಮೀನು-ಮಾಂಸಗಳನ್ನು ತಿನ್ನುವುದನ್ನು ನಿಲ್ಲಿಸಿದ್ದೇನೆ. ಈ ಭೂಮಿಯ ಮೇಲೆ ಮನುಷ್ಯ ಮಾತ್ರವೇ ಕಡುಕ್ರೂರಿ ಪ್ರಾಣಿ ಎಂಬ ಭಾವನೆ ನನ್ನಲ್ಲಿ ಗಾಢವಾಗಿ ಬೇರೂರಿಬಿಟ್ಟಿದೆ. ಬುದ್ಧ ಮತ್ತು ಕಟುಕಪಶುಮಾನವ ಇಬ್ಬರೂ ಈ ಲೋಕದಲ್ಲಿ ಒಟ್ಟೊಟ್ಟಿಗೇ ಇರುತ್ತಾರೆ. ಮಾನವರ ಈ ನಿಗೂಢ ರೂಪವನ್ನು ಅರ್ಥಮಾಡಿಕೊಳ್ಳಲು ನಾನು ಯಾವಾಗಲೂ ಯತ್ನಿಸಿದ್ದೇನೆ.

ಹೃ : *ಆಧುನಿಕ ಮನುಷ್ಯನ ಅತಿದೊಡ್ಡ ಸಮಸ್ಯೆ ಯಾವುದು? ನೀವು ಅದನ್ನು ಚಿತ್ರಿಸಿದ್ದೀರೆಂದು ನಿಮಗೆ ಅನ್ನಿಸುತ್ತದೆಯೆ?*

ಮಾ : ಆಧುನಿಕ ಮಾನವರ ಅತಿದೊಡ್ಡ ಸಮಸ್ಯೆ ಎಂದರೆ ತಾವು ಆಸೆ ಪಟ್ಟಿದ್ದೆಲ್ಲವನ್ನೂ ಒಂದೇ ಸಲಕ್ಕೆ ಬಾಚಿಕೊಳ್ಳಬೇಕೆಂಬ ದುರಾಶೆ. ಹೀಗೆ ಎಲ್ಲವನ್ನೂ ಬಾಚಿಕೊಳ್ಳಬೇಕೆಂದರೆ ಅದಕ್ಕಾಗಿ ನಿರ್ದಯವಾಗಿ ಕೆಲಸ ಮಾಡಬೇಕಾಗುತ್ತದೆ. ಅನೇಕರು ಈ ಬಗ್ಗೆ ವಿಚಾರ ಮಾಡಲಿಕ್ಕೇ ಹೋಗುವುದಿಲ್ಲ. ತಾವು ಬಯಸಿದ ಗುರಿ ತಲುಪಲಿಕ್ಕೆ ಬೇರೆ ಎಲ್ಲಾ ವಿಷಯಗಳನ್ನೂ ನಿರ್ಲಕ್ಷಿಸಿ ತಮ್ಮ ಪ್ರಯತ್ನವೊಂದನ್ನೇ ಕಾಯ್ದಿಟ್ಟುಕೊಳ್ಳುವುದು ಅವರಿಗೆ ಅನಿವಾರ್ಯವಾಗಿರುತ್ತದೆ.

ಹೃ : *ಜನರ ಮನಸ್ಸಿನಲ್ಲಿ ಒಬ್ಬ ವ್ಯಕ್ತಿಯಾಗಿ ನೀವು ಜೀವಂತವಾಗಿ ಉಳಿದಿರಲು ಬಯಸುತ್ತೀರಾ? ಅಥವಾ ನಿಮ್ಮ ಸಾಹಿತ್ಯ ಅವರ ಮನಸ್ಸಿನಲ್ಲಿ ಸದಾ ಜೀವಂತವಾಗಿ ಉಳಿದರೆ ಸಾಕು ಎನ್ನುತ್ತೀರಾ?*

ಮಾ : ಈ ಜಗತ್ತಿನಲ್ಲಿ ಶಾಶ್ವತತೆ ಎಂಬ ಒಂದು ಸ್ಥಿತಿ ಇದೆ ಎಂದು ಎಂದೂ ನನಗೆ ಅನ್ನಿಸಿಲ್ಲ. ಆದರೆ ನನ್ನ ಬದುಕು ನನ್ನ ಸಾಹಿತ್ಯ ದೊಳಗೂ ನೇಯ್ದು ಕೊಂಡುಬಿಟ್ಟಿದೆ ಎಂಬುದಂತೂ ನಿಜ. ಆದ್ದರಿಂದ ನನ್ನ ಸಾಹಿತ್ಯ ಸೃಷ್ಟಿ ಜೀವಂತವಾಗಿ ಉಳಿಯ ಬಹುದು ಎನ್ನುವುದಾದರೆ ಅದರೊಳಗಿನ ಮಹಿಳೆಯಾದ ನಾನೂ ಬಹುಶಃ ಓದುಗರ ಕಲ್ಪನೆಗಳಲ್ಲಿ ಜೀವಂತವಾಗಿ ಉಳಿಯಬಲ್ಲೆನೋ ಏನೋ ಯಾರು ಹೇಳಬಲ್ಲರು?

ಹೃ : *ಭವಿಷ್ಯ ಏನಾದರೂ ಇರಲಿ ಜನರಂತೂ ನೀವು ಸದಾ ಜೀವಂತ ಉಳಿದಿರಲೆಂದು ಅಪೇಕ್ಷಿಸುತ್ತಾರೆ. ನೀವು ಮತ್ತು ನಿಮ್ಮ ಸಾಹಿತ್ಯ ಅನಂತಕಾಲದ ವರೆಗೂ ಉಳಿದಿರುತ್ತೀರಿ. ಕೊನೆಯಪ್ರಶ್ನೆ, ಮನುಷ್ಯರು ಬದುಕನ್ನು ಕುರಿತು ಎಂಥ ದೃಷ್ಟಿ ಹೊಂದಿರ ಬೇಕೆಂದು ನಿಮ್ಮ ಅಭಿಪ್ರಾಯ?*

ಮಾ : ಜೀವನ ಕುರಿತಂತೆ ಮನುಷ್ಯರು ಹೊಂದಿರುವ ದೃಷ್ಟಿ ಕಾಲದೊಂದಿಗೆ ಸನ್ನಿವೇಶಗಳೊಂದಿಗೆ ಬದಲಾಗು ತ್ತಿರುತ್ತದೆ. ನನ್ನ ಇಚ್ಛೆ ಎಂದರೆ ಮಾನವರು ಮಾನವರಾಗಿ ಉಳಿದಿರ ಬೇಕು ಎಂಬುದು. ಎಲ್ಲಾ ಮನುಷ್ಯ ರೊಳಗೆ ತಾನು ಮಾನವ ಜೀವಿಯಾಗಿ ಸದಾ ಜೀವಂತಿಕೆ ಉಳಿಸಿಕೊಳ್ಳುವುದು ಎಂದರೇನು ಎನ್ನುವುದರ ನಿಜದ ಗಾಢವಾದ ಅರಿವು ಮೂಡಿದಾಗ ಮಾತ್ರವೇ ಈಲೋಕ ಸ್ವರ್ಗವಾಗಿ ಬದಲಾದೀತು. ❑

ಪ್ರಸಿದ್ಧ ಬರಹಗಾರ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಗೆ ಭಾಜನರೂ ಆಗಿದ್ದ ಮಲ್ಲಿಕಾ ಕಡಿದಾಳು ಅವರು ನಮ್ಮನ್ನಗಲಿದ್ದಾರೆ. ಅವರಿಗೆ ಮಾನಸ ಬಳಗದ ಶ್ರದ್ಧಾಂಜಲಿಗಳು.

-ಸಂ.

ಹಾದರಗಿತ್ತಿಗೊಂದು ಪ್ರಗಾಥೆ

ಜನ ಅನ್ನುತ್ತಾರೆ
ನಾನು ಚೆನ್ನಾಗಿ
ಭಟ್ಟಿಯಿಳಿಸುವವಳು ಎಂದು

ನಾನು
ಈ ದಿನ ತಯಾರಿಸಿದ ಮದ್ಯ
ನೂರು ವರ್ಷದಷ್ಟು ಹಳತು
ಆಗುವಂತೆ ಪರಿವರ್ತಿಸಬಲ್ಲೆ

ಅದು ಜನರಿಗೆ
ಮತ್ತೇರಿಸುತ್ತೆ ಹುಚ್ಚು ಹಿಡಿಸುತ್ತೆ
ನಾನು ಕಾಯಿಸಿದ ಮದ್ಯ
ಹೀರಿ ನಾನೂ ಮದವೇರುತ್ತೇನೆ
ಸದಾ,
ನನ್ನ ತುಂಬು ಮೊಲೆಗಳು ಈಗ
ಮಲಗಿವೆ ಸತ್ತ ನದಿಯ ಹಾಗೆ
ಈ ನದಿ ಕೂಡ ನನಗೆ ಈಗ
ಒಂದು ಹರಿತ ಶಸ್ತ್ರ

ನಾ ಭಟ್ಟಿಯಿಳಿಸಿದ ಮದ್ಯಕ್ಕೆ ಗೊತ್ತಿದೆ
ಶಿಲೆಗಳಿಂದ ಹಾಡು ಹೊಮ್ಮಿಸುವುದು
ಬೂದಿಗಳಿಂದ ಗೀತ ಹೊಮ್ಮಿಸುವುದು
ಹೇಗೆಂದು

ನನ್ನ ರಹಸ್ಯ ತಿಳಿಯಲೆಂದು ಜನ
ಹತಾಶರಾಗುತ್ತಾರೆ. ಗೋಡೆಗಳಿಗೆ
ಕಬ್ಬಿಣದ ಕಂಬಗಳಿಗೆ ತಮ್ಮ
ತಲೆಚಚ್ಚಿಕೊಳ್ಳುತ್ತಾರೆ

ಅವರು ಕೂಗಿಕೊಳ್ಳುತ್ತಾರೆ
ಓಹ್! ಇದೆಂಥ ಅನುಗ್ರಹ!
ಸ್ವರ್ಗವೇ ತನ್ನ ಹಾದಿಯಲ್ಲಿ
ದಯಮಾಡಿಸಿದ್ದಾಳೆ!

ಇಂಥ ರುಚಿಕಟ್ಟಾದ ಮದ್ಯವನ್ನು
ಭಟ್ಟಿ ಹೇಗೆ ಇಳಿಸಿದೆನೆಂದು ನಾನು
ಹೇಗೆ ಹೇಳಲಿ? ನಾನೇ
ಅರಿವಿಲ್ಲದೆ ಬಿದ್ದಿದ್ದೆ
ದುಃಖದ ಕಾರ್ಗತ್ತಲ ಹಜಾರದಲ್ಲಿ
ಯಾತನೆಯಲ್ಲಿ
ನನ್ನದೇ ಮೈಗೆ ಬಾರುಕೋಲಿಂದ
ಹೊಡೆದುಕೊಂಡೆ
ನನ್ನದೇ ರಕ್ತ ನಾನು ಕುಡಿದೆ
ನನ್ನ ಪ್ರಿಯಕರನ ಎದುರಲ್ಲಿ
ಬಟ್ಟೆ ಕಳಚಲಾರದವಳೂ ಆಗಿದ್ದವಳಿಗೆ
ಈಗ ನೂರಾರು ಪ್ರಿಯತಮರು
ಆದರೂ ಉಳಿದಿರುವೆ
ಕನ್ಯೆಯಾಗಿ.

ಹೆಂಗಸರು ನದಿಯ ಆಚೆದಡದಿಂದ
ಕಿರುಚಿಕೊಳ್ಳುತ್ತಾರೆ
ಪಾಪಿಷ್ಠೆ ನೀನು
ಕುಷ್ಠರೋಗಿಯ ಸಾವು
ಬರಲಿ ನಿನಗೆ!

ನನ್ನ ಮೈ ಕೆಂಪುನದಿ
ಅಲೆಯ ಮೇಲೆ ಕುಣಿದಾಡುವ
ಬರಾಲಿ ಮೀನಿನ ಹಾಗೆ
ಮೃದುವಾಗಿದೆ
ನನ್ನ ಮೊಲೆಗಳು
ಟ್ಯುಯೆನ್ ಸಾಂಗ್ ಕಣಿವೆಯಲ್ಲಿನ
ಸಾರಾಮತಿ ಶಿಖರ
ನನ್ನ ಸೊಂಟದ ಮೇಖಲೆ
ಸತೋಯ್ ಪರ್ವತಶ್ರೇಣಿಯಲ್ಲಿ
ಅರಳುವ ಡೊಡೋಡೆಂಡ್ರಾನ್
ಮರದ ಕೊಂಬೆಗಳಂತೆ.

ನದಿಯ ಆಚೆದಡದಲ್ಲಿರುವ
ಹೆಂಗಸರು ವಿಷಕಾರುತ್ತಾರೆ
ಏಯ್ ಬೇಟೆಗಾತಿ ಹೆಣ್ಣೆ
ನಿನ್ನ ಮೈಯಿ ಹುಳ ತಿನ್ನಲಿ!

ನರೆತ ತಲೆಯ ಹೆಂಗಸರು
ನದಿಯ ಆಚೆದಡದಲ್ಲಿ
ಬಗೆಬಗೆಯಾಗಿ ಕೂಗಿ ಹೇಳುವರು
ಹೆಣ್ಣುಗಳೆ! ಅವಳ ಮಾಂಸ
ಎಬ್ಬಿ ಕೀಳಲು ಹೋಗಬೇಡಿ.

ಯಾರಿಗೆ ಗೊತ್ತು, ಆ ಗಂಡಸರು
ನಿಮ್ಮ ನೆರಳಿನಂತೆ ನಿಮಗಂಟಿಕೊಂಡಿದ್ದವರು
ತಮ್ಮ ಹೆಣ್ಣುಮಕ್ಕಳ ರೇಷ್ಮೆ ಮೈಗೂ
ಕೈಯಿಕ್ಕಿದವರು ಯಾರಿಗೆ ಗೊತ್ತು,
ಯಾರಿಗೆ ಗೊತ್ತು!

ತಿಳಿದವರೆನ್ನುತ್ತಾರೆ ಸೂಳೆಯರು
ಯುದ್ಧಗಳ ಸೇನಾಧಿಪತಿಗಳೆಂದು
ನದಿಗಳಂತೆ ಅವರೂ ಬಲೆ ಒಡ್ಡುವವರು
ಪರ್ವತಗಳಂತೆ ಮುಗ್ಧ ಆತ್ಮಗಳ ರಕ್ಷಿಸುತ್ತಾರೆ

ಓ ಹೆಣ್ಣುಗಳೆ! ಸಂನ್ಯಾಸಿ ಹೇಳಿದ
ಹಾಡಿನ ಜಾಡಲ್ಲಿ ನಡೆಯಿರಿ
ಸೂಳೆಯರ ಮಾಂಸ ಕಂಡು
ಎಬ್ಬಿಕೀಳಲು ಹೋಗದಿರಿ.

ಅವರಿಗೆ ಗೊತ್ತಿರುತ್ತೆ ಅಪರಿಚಿತ
ಹಾದಿಹೋಕರಾರು
ಕತ್ತಲಿನ ಬೇಟೆಗಾರರಾರು ಎಂದು
ತಿಳಿದಮಂದಿ ಹೇಳುವರು

ಸೂಳೆಯರೆಂದರೆ ಯುದ್ಧಗಳಲ್ಲಿ
ದಣಿದು ಹೈರಾಣಾದ ಸೇನಾಪತಿಗಳೇ.

ನನ್ನ ಮೈ ಈಗ ಮೂಳೆಗಳ ಹಂದರ
ನನ್ನ ಚರ್ಮ ಜೋತುಬಿದ್ದಿದೆ
ಉದ್ದದಿಮ್ಮಿಯ ಮೇಲೆ ಕಟುಕ
ಒಣಹಾಕಿರುವ ಪಶುವಿನ ಚರ್ಮದಂತೆ:

ದುಃಖ ಸಂಕಟದ ರಕ್ಕಸಭೂತ ಈಗ
ನನ್ನ ಹೃದಯಕ್ಕಾಗಿ ಹುಡುಕುತ್ತಿದೆ
ನನ್ನ ಮೈಯಿಡೀ ಉಗುರುಗಳಿಂದ
ಬಗೆದುಹಾಕಿದೆ.

ಇದ್ದಕ್ಕಿದ್ದ ಹಾಗೆ ಮದ್ಯ ತಯಾರಿಸುವ
ಈ ಕಲೆ ನಾನು ಕಂಡುಹಿಡಿದೆ.
ಮನುಜಬದುಕೆಂಬ ವೇಷತೊಟ್ಟು
ಹರಿಯುವ ಈ ವಿಯೋಗ ನದಿಯನ್ನು
ಈಗ ನಾನು ನಡೆದು ದಾಟಬಲ್ಲೆ.
ಅದರ ಎದೆಯೊಳಗೆ ಕಾಯ್ದಿಟ್ಟುಕೊಂಡಿದೆ
ಸುಟ್ಟು ಬೂದಿಯಾದ ಸಾಮ್ರಾಜ್ಯಗಳ
ಪುರಾತನ ಭೂಪಟ

ಸಂಹಿತೆಗಳ ಪುಟಗಳಿಂದ
ಉಪನಿಷತ್ತುಗಳ ಗರ್ಭಗಳಿಂದ
ಚಿನ್ನದ ಬಿಂದಿಗೆ ತೇಲಿಬರುತ್ತಿದೆ
ದಿವ್ಯ ಧ್ವನಿಯೊಂದು ಕೂಗಿ ಹೇಳುತ್ತಿದೆ
ಎಲೆಹೆಣ್ಣೆ, ದಪ್ಪ ಮೊಲೆಯವಳೆ
ತೆರೆ ಮುಚ್ಚಳ ತೆರೆ,

ಎಷ್ಟೊಂದು ಹಗಲು ಎಷ್ಟೊಂದು ಇರುಳು
ಕುದಿಸಿಯೇ ಕುದಿಸಿದ್ದೇನೆ ಮದ್ಯವನ್ನು
ಉಪನಿಷದ್ಗರ್ಭದಿಂದ ಹೊರಬಂದ
ಆ ಹೊನ್ನ ಬಿಂದಿಗೆಯ ಮುಚ್ಚಳ
ತೆರೆಯಬಹುದೆಂದು.
ಆದರೆ ಸೋತು ಹೋಗಿದ್ದೇನೆ
ಕುಡಿತ ನನ್ನ ಕೆರಳಿಸಿದೆ.
ಸೋತು ಹೋದವರಷ್ಟೇ
ಹೀರಿ ಕುಡಿಯಬಲ್ಲರು
ಮೀನುಗಳ ಹಾಗೆ.

ದಿಢೀರನೆ ಮುಚ್ಚಳ
ತೆರೆದುಕೊಂಡಿದೆ!
ನದಿಯ ಆ ದಡದಲ್ಲಿ ನಿಂತು
ನಾನು ಕಂಡೆ
ನನ್ನ ಮದ್ಯದ ಗ್ಲಾಸುಗಳ
ಥಳಥಳಿಸುವ ಮುಚ್ಚಳಗಳು
ಚೆಲ್ಲಿ ಚೆದುರಿವೆ
ಸಾವಿರ ಚೂರುಗಳಾಗಿ

ರಚನೆ : ಮಾಮೊನಿ ರಾಯ್‌ಸಮ್ ಗೋಸ್ವಾಮಿ
(An ode to a whore)
ಅನುವಾದ : ಡಾ. ಬಿ.ಎಸ್. ಸುಬ್ರಾಯ



ಹೆಚ್.ಐ.ವಿ / ಏಡ್ಸ್ ಬಾಧಿತ ಮಹಿಳೆಯರ ಕರುಳ ಕೇಂದ್ರದ ಉರಿಚಿಂತನೆ

■ ಟಿ.ಎನ್.ಅನಿತ

ಭಾರತದಲ್ಲಿ ಅಂದಾಜಿನಂತೆ 2.6 ಮಿಲಿಯನ್ (2006ರ ಎನ್.ಎ.ಸಿ.ಓ.ವಿನ ಸಮೀಕ್ಷೆ ಪ್ರಕಾರ) ಜನರಿಗೆ HIV/AIDS ರೋಗವಿದೆ. ಕರ್ನಾಟಕದಲ್ಲಿ 5.2 ಲಕ್ಷ ಜನರಿಗೆ ಹೆಚ್.ಐ.ವಿ. ಸೋಂಕಿರುವುದು ಕಂಡುಬಂದಿದೆ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಣಿಪುರ ಮತ್ತು ನಾಗಾಲ್ಯಾಂಡ್ ರಾಜ್ಯಗಳಲ್ಲಿ ಈ ರೋಗಿಗಳ ಪ್ರಮಾಣ ಹೆಚ್ಚಿದೆ. ಇದರಲ್ಲಿ ಶೇ 70ರಷ್ಟು ಮಹಿಳೆಯರೇ ಇರುವುದು ಶೋಚನೀಯ. ಅದರಲ್ಲಿ ಶೇ. 70ರಷ್ಟು ಮಹಿಳೆಯರಿಗೆ ಗಂಡನಿಂದಲೇ ಈ ರೋಗ ತಗುಲಿರುವುದು ಕಂಡುಬಂದಿದೆ. ಉಳಿದ ಪ್ರಮಾಣದ ವ್ಯಾಧಿಯು ರಕ್ತದಿಂದ, ವೈದ್ಯರ ನಿರ್ಲಕ್ಷ್ಯದಿಂದ ಹಾಗೂ ಪರಪುರುಷರ ಜೊತೆಗಿನ ಲೈಂಗಿಕ ಚಟುವಟಿಕೆಯಿಂದ ಬಂದದ್ದಾಗಿದೆ.

ಏಡ್ಸ್ ರೋಗಿಗಳು ರೋಗ ಲಕ್ಷಣಗಳಿಂದುಂಟಾಗುವ ದೈಹಿಕ ಸಮಸ್ಯೆಗಳನ್ನಷ್ಟೇ ಅಲ್ಲದೆ ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ, ಆರ್ಥಿಕ, ಮಾನಸಿಕ ಸಮಸ್ಯೆಗಳನ್ನೂ ಅನುಭವಿಸುತ್ತಿದ್ದಾರೆ (ಮುಂದಿನ ಪುಟಗಳಲ್ಲಿ ಇವುಗಳ ವಿವರಣೆ ಇದೆ). ಈ ಸಮಸ್ಯೆಗಳ ಪ್ರಮಾಣ ದಲ್ಲಿಯೂ ಸ್ತ್ರೀಯರ ಪ್ರಮಾಣವೇ ಹೆಚ್ಚು. ಇಂತಹ ಸಮಸ್ಯೆಗಳನ್ನು ಕುರಿತ ವಿಶ್ಲೇಷಣೆಯಲ್ಲಿ ಮಹಿಳಾ ಅಧ್ಯಯನದ ವೈಧಾನಿಕತೆಯನ್ನು ಅವಲಂಬಿಸಿದ ಸ್ತ್ರೀವಾದಿ ದೃಷ್ಟಿಕೋನವುಳ್ಳ ಸಂಶೋಧನೆ ಕೈಗೊಳ್ಳುವುದು ಅತ್ಯಗತ್ಯವಾಗಿದೆ. ಸಂಶೋಧನೆಗಳಲ್ಲಿ ಪುರುಷ ಕೇಂದ್ರಿತ ಚಿಂತನೆಯ ಅಧ್ಯಯನಗಳಲ್ಲಿ ಪುರುಷರಿಗೆ ಪೂರಕಅಂಶವಾಗಿ ಮಾತ್ರ ಕಾಣಸಿಗುತ್ತಾಳೆ. ಆದಕಾರಣ ಮಹಿಳಾಕೇಂದ್ರಿತ ಅಧ್ಯಯನಗಳು ಪ್ರಸ್ತುತ ನಡೆಯಬೇಕಿದೆ.

ಅಧ್ಯಯನಕ್ಕಾಗಿ ಏಡ್ಸ್ ಎಂಬ ವಿಷಯದ ಆಯ್ಕೆಯಿಂದಲೇ ನಾನು ಹಲವಾರು ಪ್ರಶ್ನೆಗಳಿಗೆ, ಗೊಂದಲಗಳಿಗೆ ಈಡಾಗುವ ಪರಿಸ್ಥಿತಿ ಗಳಿಗೆ ಸಿಲುಕಿದ್ದೇನೆಂದರೆ, ಈ ರೋಗದ ಆಳ ಎಷ್ಟಿದೆ ಎಂಬುದು ಮನದಟ್ಟಾಗುತ್ತದೆ. ಏಡ್ಸ್ ಬಗೆಗಿನ ಮಾಹಿತಿ ಪಡೆಯುವಾಗ, ಅದರ ವಿಭಾಗ ಎಲ್ಲಿದೆ ಎಂದು ಕೇಳುವಾಗ ಅದಕ್ಕುತ್ತರಿಸುವ ಡಾಕ್ಟರ್, ನರ್ಸ್, ಸಾಮಾನ್ಯ ಜನರು ನನ್ನನ್ನು ನೋಡುವ ದೃಷ್ಟಿಯನ್ನು, ಅವರ ಮುಖದಲ್ಲಿ ಆಗುವ ಭಾವನೆಗಳ ಬದಲಾವಣೆಯನ್ನು ವಿವೇಚಿಸಿದರೆ ರೋಗಕ್ಕೆ ತುತ್ತಾದವರ ಪಾಡು ಏನೆಂಬುದನ್ನು ಊಹಿಸಬಹುದು. ನಾನು ಅವಿವಾಹಿತ ಹುಡುಗಿಯಾಗಿದ್ದುಕೊಂಡು ಲೈಂಗಿಕ ವಿಚಾರಗಳ ಹಿನ್ನೆಲೆಯುಳ್ಳ ಸಂಗತಿಗಳ ಅಧ್ಯಯನ ಕೈಗೊಳ್ಳುತ್ತಿರುವುದು ನನಗೆ ದೊಡ್ಡ ಸವಾಲೇ ಆಗಿದೆ. ಆದ್ದರಿಂದ ವಿಜ್ಞಾನದ ವಸ್ತುನಿಷ್ಠ ವೈಧಾನಿಕತೆ ಮಹಿಳಾ ಅಧ್ಯಯನದ ವೈಧಾನಿಕತೆಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಬೇಕೆಂಬುದೇನೂ ಇಲ್ಲ. ನನ್ನ ಈ ಸಂಶೋಧನಾ ಕಾರ್ಯದಲ್ಲಿ ಸಂಶೋಧಕಿಯಾದ ನನ್ನ ವೈಯಕ್ತಿಕ ಪ್ರಜ್ಞೆ, ಸಂವೇದನೆಗಳನ್ನು ದಾಖಲಿಸುವುದು ನನ್ನ ಉದ್ದೇಶ. ಮಹಿಳಾ ಅಧ್ಯಯನದ ವೈಜ್ಞಾನಿಕತೆ ಈ ಬಗೆಯ ವ್ಯಕ್ತಿನಿಷ್ಠತೆಯನ್ನು ಅಪೇಕ್ಷಿಸುವಂಥದ್ದೇ. HIV/AIDS ಸೋಂಕಿತ ಮಹಿಳೆಯರ ಸಂವೇದನಾ ಸೂಕ್ಷ್ಮತೆಯನ್ನು ಅಷ್ಟೇ ಸೂಕ್ಷ್ಮವಾದ ಸಂವೇದನೆಯ ನೆಲೆಯಲ್ಲಿ ಅರಿಯುವ ಉದ್ದೇಶ ನನ್ನ ಅಧ್ಯಯನದ್ದು. ಕಟ್ಟಾ ವಸ್ತುನಿಷ್ಠ ಸಂಶೋಧನೆಯ ಜ್ಞಾತೃತ್ವ ಕೇಂದ್ರಿತ ಅಹಂಅನ್ನು ಆದಷ್ಟು ಪ್ರಜ್ಞಾಪೂರ್ವಕವಾಗಿ ನೀಗಿಸಿಕೊಳ್ಳುವ ಆಶಯ ನನ್ನದು. HIV/AIDS ರೋಗಿಗಳನ್ನು ವೈದ್ಯವಿಜ್ಞಾನದ ರೀತ್ಯ ವಸ್ತುನಿಷ್ಠ ವೆಂದು ಪರಿಭಾವಿಸದೆ ಸ್ತ್ರೀವಾದವು ಉದ್ದೇಶಿಸಿದ ಸೋದರಿತ್ವದ ಸಂವೇದನಾತ್ಮಕ ನೆಲೆಯಲ್ಲಿ ನನ್ನ ಅಧ್ಯಯನವನ್ನು ಕೈಗೊಳ್ಳಲು ಉದ್ದೇಶಿಸಿದ್ದೇನೆ. ಹಾಗಾಗಿ ವ್ಯಕ್ತಿನಿಷ್ಠ ಸಂಶೋಧನಾ ಪ್ರಯತ್ನವು ಸ್ತ್ರೀವಾದಿ ತಾತ್ತ್ವಿಕತೆಯುಳ್ಳ ವ್ಯವಸ್ಥಿತ ವಿನ್ಯಾಸವುಳ್ಳದ್ದೂ ಆಗಿದೆ.

ಸ್ತ್ರೀಯರು ಈ ರೋಗದ ಸಮಸ್ಯೆಗಳ ಬಗೆಗೆ ಹೆಚ್ಚು ಕಾಳಜಿ ವಹಿಸಬೇಕು. ತಾಯ್ತನದ ಸಮಯದಲ್ಲಿ ಆಕೆಯಿಂದ ಮಗುವಿಗೂ ಈ ರೋಗ ಹರಡುವ ಸಂಭವ ಹೆಚ್ಚಾಗಿರುತ್ತದೆ. ಹಾಗೆಯೇ ಮಹಿಳೆಯರು ರೋಗ ಬಂದ ತಕ್ಷಣ ಸಾಕಷ್ಟು ಗೊಂದಲ, ಭಯ, ಜಿಜ್ಞಾಸೆ, ಒತ್ತಡ, ಸಾಮಾಜಿಕ ಅವಹೇಳನ, ಕೌಟುಂಬಿಕ ಪರಿಹಾಸ್ಯಗಳಿಗೆ ಒಳಗಾಗುತ್ತಾರೆ. ಪುರುಷರನ್ನು ಕಾಡದಷ್ಟು ಗೊಂದಲಗಳು ಮಹಿಳೆಗೇಕೆ? ಈ ರೋಗದ ಉದ್ಭವಕ್ಕೆ ಮಹಿಳೆಯನ್ನೇ ದೂಷಿಸುವ ಸಂಗತಿಗಳು ನಡೆಯುತ್ತಿವೆ. ಇಂದಿಗೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಏಡ್ಸ್ ಎಂದರೆ 'ಮಹಿಳೆ' ಎಂಬ ಪರಿಕಲ್ಪನೆಯೇ ಪ್ರಧಾನವಾಗಿದೆ. ಇವರಲ್ಲಿ ಈ ಕುರಿತು ಅರಿವು ಕಡಿಮೆಯಿರುವುದರಿಂದ ಮಹಿಳೆಯರೇ ಹೆಚ್ಚಾಗಿ ಬಲಿಪಶುಗಳಾಗುತ್ತಿದ್ದಾರೆ. ಇವೆಲ್ಲದರ ಕುರಿತಾದ ಸಮಗ್ರ ಅಧ್ಯಯನಾತ್ಮಕ ದೃಷ್ಟಿಕೋನದ ಮಹಿಳಾ HIV/AIDS ಸೋಂಕಿತರ ಪರಿಭಾವನೆ ಇಲ್ಲಿದೆ.

ಪ್ರಕರಣ 1: ಸುಚಿತ್ರ ಎಂಬುವವರಿಗೆ 34 ವರ್ಷ ವಯಸ್ಸಾಗಿದ್ದು, ತಿರುಮ ಕೂಡಲು ನರಸೀಪುರ ತಾಲ್ಲೂಕಿಗೆ ಸೇರಿದವರಾಗಿದ್ದಾರೆ. ಎಂ.ಎ. ಪದವೀಧರ ರಾಗಿರುವ ಇವರು ವಿವಾಹಿತೆಯಾಗಿದ್ದು, ಒಂದು ಹೆಣ್ಣುಮಗುವನ್ನು ಹೊಂದಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ್ದು, ಪತಿಯೂ ಉಪನ್ಯಾಸಕರಾಗಿದ್ದಾರೆ.



ಸುಚಿತ್ರಾರವರು ಟಿ. ನರಸೀಪುರದಲ್ಲಿ ವಾಸವಾಗಿದ್ದು, ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಪತಿಯೂ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು, ವಿವಾಹಕ್ಕೂ ಮುಂಚೆ ಪ್ರೀತಿಸುತ್ತಿದ್ದ ಹುಡುಗಿಯ ಜೊತೆ ವಿವಾಹದ ನಂತರವೂ ಸಂಪರ್ಕದಲ್ಲಿದ್ದು, ಅಸುರಕ್ಷಿತ ಲೈಂಗಿಕಕ್ರಿಯೆ ನಡೆಸಿದ ಕಾರಣದಿಂದ ಹೆಚ್.ಐ.ವಿ. ಸೋಂಕಿಗೆ ಒಳಗಾದರು. ಆ ಹುಡುಗಿಯು ಲೈಂಗಿಕ ವೃತ್ತಿಯಲ್ಲಿ ತೊಡಗಿದ್ದು ಹೆಚ್.ಐ.ವಿ. ಸೋಂಕನ್ನು ಇತರರಿಗೆ ಹರಡುತ್ತಿದ್ದಾಳೆ ಎನ್ನುವುದು ಸುಚಿತ್ರರವರ ಹೇಳಿಕೆಯಾಗಿದೆ. "ಪತಿಯಿಂದ ನನಗೂ ಹೆಚ್.ಐ.ವಿ. ಸೋಂಕು ಹರಡಿದೆ. ಸಂಪಾದಿಸಿದ ಹಣವನ್ನೆಲ್ಲಾ ಅವಳಿಗೆ ತೆಗೆದು ಕೊಂಡು ಹೋಗಿ ಸುರಿಯುತ್ತಾರೆ. ನನ್ನ ಬದುಕು ಶೂನ್ಯವಾಗಿ ಹೋಯಿತು. ನಮ್ಮ ಮನೆಯವರು ನನಗಿಂತಲೂ ದುಃಖದ ಸ್ಥಿತಿಯಲ್ಲಿದ್ದಾರೆ. ಅವರಿಗೆ ಸಾಂತ್ವನದ ಮಾತುಗಳನ್ನು ಹೇಳಿ" ಎಂದು ನನ್ನನ್ನು ಕೇಳಿಕೊಳ್ಳುತ್ತಿದ್ದರು. "ನನಗೆ ಒಂದು ಹೆಣ್ಣು ಮಗುವಿದೆ. ಅದಕ್ಕೆ ಹೆಚ್.ಐ.ವಿ. ಸೋಂಕು ಇಲ್ಲ. ಮಗುವನ್ನು ನನ್ನ ತಂದೆ–ತಾಯಿ ಅವರ ಜೊತೆಯೇ ಇರಿಸಿಕೊಂಡು ಬೆಳೆಸುತ್ತಿದ್ದಾರೆ. ನನ್ನ ಗಂಡ ದಿನವೂ ಅವಳ ಮನೆಗೆ ಹೋಗುತ್ತಾರೆ. ನನಗಂತೂ ಅವರ ಹೆಂಡತಿ ನಾನಾ ಅಥವಾ ಅವಳಾ ಎಂಬುವುದೇ ಚಿಂತೆಯಾಗಿದೆ. ಈ ಸಮಾಜದಲ್ಲಿ ವಿವಾಹವಾದರೆ ಒಳ್ಳೆಯ ಹುಡುಗನ ಜೊತೆ ವಿವಾಹವಾಗ ಬೇಕು. ಅವನು ಯಾವುದೇ ಸಣ್ಣ ಕೆಲಸದಲ್ಲಿದ್ದರೂ ಸರಿ ಉದ್ಯೋಗ, ಆಸ್ತಿ ಎಂದು ಯಾರ್ಯಾರನ್ನೋ ವಿವಾಹವಾದರೆ ಹೀಗೆ ಆಗಿ ಹೋಗುತ್ತದೆ. ವಿವಾಹಕ್ಕೂ ಮುಂಚೆ ವಿಚಾರಿಸ ಬೇಕು" ಎಂದು ಉಪನ್ಯಾಸಕರಂತೆಯೇ ಪ್ರವಚನ ನೀಡಿದರು.

"ಜೀವನದಲ್ಲಿ ಏರುಪೇರುಗಳಿರುತ್ತವೆ. ಆದರೆ ಇಷ್ಟೊಂದು ದುರಂತ, ಏರು–ಪೇರು ಉಂಟಾಗಬಾರದು. ನಾನು ಇಷ್ಟು ಶಿಕ್ಷಿತಳಾಗಿ ಈ ಸೋಂಕಿಗೆ ಒಳಗಾಗಿದ್ದೇನೆ ಅಂದರೆ ಇನ್ನು ಏನೂ ಅರಿಯದ ಮುಗ್ಧ ಮಹಿಳೆಯರ ಪಾಡು ಏನಾಗಬೇಕು." ಎಂದು ವ್ಯಥೆಯ ಮಾತಾಡಿದರು. "ಜೀವನದಲ್ಲಿ ಸೋತುಬಿಟ್ಟೆ, ಕನಸುಗಳೆಲ್ಲಾ ಅಳಿಯುವ ಕಾಲ ಬಂದಿದೆ. ಎಲ್ಲದಕ್ಕೂ ಕಾರಣ ನನ್ನ ಪತಿ. ಯಾರನ್ನೂ ದೂಷಿಸಿ ಪ್ರಯೋಜನವಿಲ್ಲ" ಎಂದು ಹೇಳಿದರು. "ಎ.ಆರ್.ಟಿ. ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ದೇವರನ್ನು ನಂಬುತ್ತೇನೆ. ಆದರೆ ರೋಗ ವಾಸಿಮಾಡೆಂದು ಹೇಗೆ ಕೇಳುವುದು? ಕೇಳಿದರೂ ನೀಡಲಾಗದ ವರ ಇದು. ಸ್ಥಳೀಯ ಚಿಕಿತ್ಸೆಗಳ ಬಗ್ಗೆ ಆಸಕ್ತಿ ಇಲ್ಲ. ಇರುವಷ್ಟು ದಿನ ಮಕ್ಕಳಿಗೆ ಪಾಠ ಮಾಡಿಕೊಂಡು ಸಂತೋಷದಲ್ಲಿ, ನೆಮ್ಮದಿಯಾಗಿ, ಆತ್ಮವಿಶ್ವಾಸದಲ್ಲಿ ಬದುಕಲು ಬಯಸುತ್ತಿದ್ದೇನೆ. ಅದರಂತೆ ಇರುತ್ತೇನೆ. ಹೆಚ್ಚೇನೂ ಹೇಳಲು ಇಷ್ಟಪಡುವುದಿಲ್ಲ." ಎಂದು ಹತಾಶೆಯಿಂದ ನಿಟ್ಟುಸಿರು ಬಿಟ್ಟರು.

ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಶಿಕ್ಷಕರೇ ಭವಿಷ್ಯವನ್ನು ಕಳೆದುಕೊಳ್ಳುವ ಸ್ಥಿತಿಯನ್ನು ಈ ಪ್ರಕರಣದಿಂದ ಗಮನಿಸಬಹುದು. ಪತಿ–ಪತ್ನಿಯರಿಬ್ಬರೂ ಶಿಕ್ಷಿತರಾಗಿದ್ದು, ಉಪನ್ಯಾಸಕ ವೃತ್ತಿಯನ್ನು ಮಾಡುತ್ತಿದ್ದರೂ ಸಹ ಜೀವನದಲ್ಲಿ ಅಸಹಾಯಕ ಸ್ಥಿತಿಯನ್ನು ತಲುಪಿದ್ದಾರೆ. ಪತಿಯು ಏಕಪತ್ನಿತ್ವ ಪದ್ಧತಿಯನ್ನು ಪಾಲಿಸಿದ್ದರೆ ಹೆಚ್.ಐ.ವಿ. ಸೋಂಕು ಹರಡುತ್ತಿರಲಿಲ್ಲ. ತಾವು ಪಡೆದರಲ್ಲದೇ ಪತ್ನಿಗೂ ಅದನ್ನು ವರ್ಗಾಯಿಸುವ ಕೆಲಸ ಮಾಡಿದ್ದು ಅವರು ವಿದ್ಯಾಭ್ಯಾಸವಿದ್ದರೂ ಅವಿದ್ಯಾವಂತರು ಎಂಬುದಕ್ಕೆ ಸಾಕ್ಷಿಯಾಗಿದೆ. ಸುಚಿತ್ರರವರು ಸರ್ಕಾರಿ ಉದ್ಯೋಗಿಯೇ ಬೇಕು ಎಂದು ಹಠಮಾಡಿ ವಿವಾಹವಾಗಿದ್ದರು. ಅವರ ಶ್ರಮವು ಈ ಕಾರಣದಿಂದ ವ್ಯರ್ಥವೆನಿಸಿದೆ. ನೆಮ್ಮದಿಯ ಜೀವನವನ್ನು ಹುಡುಕಬೇಕೆ ವಿನಃ ಹಣವನ್ನು ಹುಡುಕಿ ಆ ಮುಖಾಂತರ ನೆಮ್ಮದಿ ದೊರೆಯುತ್ತದೆಂಬ ಕಲ್ಪನೆಯನ್ನು ಈ ಪ್ರಕರಣದಿಂದ ತಳ್ಳಿಹಾಕಬಹುದು.

ಪತಿ–ಪತ್ನಿಯರಲ್ಲೂ ಸಂಬಂಧದ ಬಿರುಕು ಉಂಟಾಗಿದ್ದು, ದಿನವೂ ಇಲ್ಲಸಲ್ಲದ ಮಾತುಗಳು ಇವರಿಬ್ಬರಲ್ಲೂ ಹಾದು ಹೋಗುತ್ತಿರುತ್ತವೆ. ಪ್ರತೀ ಪ್ರಶ್ನೆಗೆ ಉತ್ತರಿಸುವಾಗಲೂ ಗಂಡನನ್ನು ದೂದಲಿಸುವ ಪ್ರಯತ್ನವನ್ನೇ ಸುಚಿತ್ರ ಮಾಡುತ್ತಿದ್ದರು. ತನ್ನ ಬದುಕನ್ನು ನಾಶ ಮಾಡಿದ ಪತಿಯನ್ನು ಕೊಂದುಬಿಡಬೇಕು ಎನ್ನುವಷ್ಟು ಕೋಪವನ್ನು ತಾಳುತ್ತಿದ್ದರು. ಅದೆಷ್ಟೋ ಬಾರಿ ಕಣ್ಣೀರು ಸುರಿಸಿದರು. ಅವರ ಮಾತುಗಳಲ್ಲಿ ಕಿಂಚಿತ್ತೂ ತಪ್ಪಿಲ್ಲವೆಂಬುದು ನನಗೆ ಅರಿವಾಗುತ್ತಿತ್ತು. ಏಕೆಂದರೆ ಸುಚಿತ್ರ ಬಹಳ ಸರಳ, ಸಭ್ಯ ವ್ಯಕ್ತಿ ಎನಿಸಿದ್ದರು. ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಪಾಠ ಮಾಡುವುದರ ಜೊತೆಗೆ ಉಚಿತವಾಗಿ ಮನೆಯಲ್ಲೂ ಸಹ ಪಾಠ ಮಾಡುತ್ತಿದ್ದರು. ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದರು. ಇವರ ಜೊತೆಗಿನ ಸಂದರ್ಶನ ಮುಗಿಯುವ ವೇಳೆಗೆ (ಒಂದು ಗಂಟೆ) ಗೃಹ ಕೆಲಸಗಳನ್ನು ಮಧ್ಯೆ ಮಧ್ಯೆ ಮಾಡಿ ಮುಗಿಸಿದ್ದರು. ಸುತ್ತಮುತ್ತಲಿನ ಜನರು ಇವರೊಂದಿಗೆ ಮಾತನಾಡಲೆಂದು ಬಂದು ಹೋಗುತ್ತಿದ್ದರು. ಅವರೆಲ್ಲರನ್ನು ಮಾತನಾಡಿ ಸುವುದರ ಜೊತೆಗೆ ನನ್ನ ಸಂದರ್ಶನಕ್ಕೂ ಅವಕಾಶ ಕೊಟ್ಟರು.

ಪ್ರಕರಣ 2 : ಲಕ್ಷ್ಮಿ ಎಂಬುವವರಿಗೆ 31 ವರ್ಷ ವಯಸ್ಸಾಗಿದ್ದು, ನಂಜನಗೂಡು ತಾಲ್ಲೂಕಿಗೆ ಸೇರಿದವರಾಗಿದ್ದು, 7ನೇ ತರಗತಿ ವಿದ್ಯಾಭ್ಯಾಸವನ್ನು ಮುಗಿಸಿದ್ದು, ಅವಿವಾಹಿತೆಯಾಗಿರುವ ಇವರು ಪರಿಶಿಷ್ಟ ಜಾತಿಗೆ ಸೇರಿದ್ದು, ಕೂಲಿ ಕೆಲಸ ಮಾಡುತ್ತಾರೆ.

ಲಕ್ಷ್ಮಿ ನಂಜನಗೂಡು ತಾಲ್ಲೂಕಿಗೆ ಸೇರಿದ ಒಂದು ಹಳ್ಳಿಯಲ್ಲಿ ವಾಸವಾಗಿರುವ ಮಹಿಳೆ. ಕೇವಲ ಏಳನೇ ತರಗತಿಗೇ ತನ್ನ ವಿದ್ಯಾಭ್ಯಾಸವನ್ನು ನಿಲ್ಲಿಸಿ ಅಂದಿನಿಂದಲೂ ಕೂಲಿ ಕೆಲಸದಲ್ಲಿ ನಿರತಳಾದಳು. ಪರಿಶಿಷ್ಟ ಜಾತಿಗೆ ಸೇರಿದ ಲಕ್ಷ್ಮಿ, ಕಡುಬಡತನದಲ್ಲಿಯೇ ಹುಟ್ಟಿ ಬೆಳೆದವರಾಗಿದ್ದಾರೆ. ತನ್ನ ಹದಿಮೂರನೇ ವಯಸ್ಸಿಗೆ ಋತುಮತಿಯಾದ ಲಕ್ಷ್ಮಿಯು ಇನ್ನಿಬ್ಬರು ಸ್ನೇಹಿತೆಯರೊಂದಿಗೆ ಒಟ್ಟಿಗೆ ಹೊಲ ಗದ್ದೆಗಳಲ್ಲಿ ಕೂಲಿ ಕೆಲಸವನ್ನು ಮಾಡಿಕೊಂಡಿದ್ದರು. ದಿನವೂ ಇವರ ಕೆಲಸ ಎಡೆಬಿಡದೆ ಸಾಗಿತ್ತು. ಗದ್ದೆಯಲ್ಲಿ ನಾಟಿ ಹಾಕುವುದು, ಕಳೆ ಕೀಳುವುದು, ರಾಗಿ, ಬತ್ತ ತೂರುವ ಕೆಲಸಗಳನ್ನು ಮಾಡುತ್ತಿದ್ದರು. ಕೆಲಸಕ್ಕೆಂದು ಹೋದಾಗ ಅಲ್ಲಿನ ಭೂಮಾಲೀಕರು ಆಕೆಯನ್ನು ಲೈಂಗಿಕವಾಗಿ ಬಳಸಿಕೊಂಡರು. ಕಾರಣವಾಗಿಯೇ ಹೆಚ್.ಐ.ವಿ. ಸೋಂಕು ತನಗೆ ಅಂಟಿತು ಎಂದು ಲಕ್ಷ್ಮಿ ಹೇಳಿಕೊಂಡರು. 'ಅದನ್ನು ಆ ಸಂದರ್ಭದಲ್ಲಿ

ಚಿಕ್ಕವಯಸ್ಸಿನವರಾಗಿದ್ದರಿಂದ ವಿರೋಧಿಸಲಿಲ್ಲ. ವಿರೋಧಿಸಲು ಪ್ರಯತ್ನಿಸಿದರೆ ಎಲ್ಲಿ ಊರಿನ ಜನರಿಗೆ ತಿಳಿದು ತಮ್ಮದೇ ತಪ್ಪು ಎಂದು ಹಣೆಪಟ್ಟಿ ಹಚ್ಚಿಬಿಡುತ್ತಾರೋ ಎಂದು ಭಯಪಡುತ್ತಿದ್ದೆ. ತನ್ನಂತೆಯೇ ತನ್ನಿಬ್ಬರು ಸ್ನೇಹಿತೆಯರಿಗೂ ಹೆಚ್.ಐ.ವಿ/ಏಡ್ಸ್ ಸೋಂಕು ಹರಡಿದೆ. ಅವರನ್ನೂ ಸಹ ಇತರ ಪುರುಷರು ಗದ್ದೆ ಬಯಲಿನಲ್ಲಿ ಲೈಂಗಿಕವಾಗಿ ದುರುಪಯೋಗ ಪಡಿಸಿ ಕೊಂಡರು ಎಂದು ಯಾವುದೇ ಬೇಸರ, ದುಗುಡವೂ ಇಲ್ಲದೆ ಲಕ್ಷ್ಮಿ ಹೇಳಿಕೊಂಡರು.

'ಇದಾದ ಐದುವರ್ಷಗಳ ನಂತರ ಒಮ್ಮೆ ರಾಷ್ಟ್ರೀಯ ಸೇವಾ ಯೋಜನೆಯವರು ನಮ್ಮೂರಿಗೆ ಬಂದಿದ್ದಾಗ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಿದ್ದರು. ನನಗೂ ಆಗಾಗ್ಗೆ ತಲೆನೋವು, ಉಸಿರಾಟದ ತೊಂದರೆ, ಕೆಮ್ಮು, ಭೇದಿ ಮುಂತಾದ ರೋಗಗಳು ಬರುತ್ತಿದ್ದ ಕಾರಣ ಪರೀಕ್ಷೆ ಮಾಡಿಸಲು ಹೋದೆ. ಆಗ ನನಗೆ ಹೆಚ್.ಐ.ವಿ. ಸೋಂಕು ತಗುಲಿರುವುದು ತಿಳಿದುಬಂದಿತು. ಇದಕ್ಕೆ ಕಾರಣ ಮುಂಚೆ ನನ್ನನ್ನು ಪರಪುರುಷ ಬಳಸಿಕೊಂಡದ್ದೇ ಕಾರಣವೆಂದು ಅನುಮಾನ ಬಂದಿತು. ಕ್ಯಾಂಪಿನಲ್ಲಿದ್ದ ವೈದ್ಯರು ನನ್ನನ್ನು ಮತ್ತೊಮ್ಮೆ ಆಸ್ಪತ್ರೆಗೆ ಬಂದು ಹೋಗುವಂತೆ ತಿಳಿಸಿದ್ದರಿಂದ, ಆಸ್ಪತ್ರೆಗೆ ಹೋದಾಗ ಹೆಚ್.ಐ.ವಿ./ಏಡ್ಸ್ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಿತು. ನಾನು ಹೆಚ್ಚು ಕಾಲ ಬದುಕುವುದಿಲ್ಲ ಎಂದು ತಿಳಿದಾಗ ಒಂದು ಕ್ಷಣ ತಲೆ ಸುತ್ತಿದ ಹಾಗಾಯಿತು. ಅಲ್ಲಿನ ಆಪ್ತಸಮಾಲೋಚಕರು ನನಗೆ ಧೈರ್ಯ ತುಂಬಿದರು. ಮನೆಯಲ್ಲಿ ನನಗೆ ಐದು ಜನ ಅಕ್ಕಂದಿರಿದ್ದಾರೆ. ಅವರಲ್ಲಿ ಮೂರು ಜನ ಅಕ್ಕಂದಿರಿಗೆ ವಿವಾಹವಾಗಿದೆ. ನನಗೆ ರೋಗವಿದೆ ಎಂದು ತಿಳಿದ ಮೇಲೆ ನಾನು ವಿವಾಹದ ಕಡೆಗೆ ಆಸಕ್ತಿಯನ್ನು ತೋರಲಿಲ್ಲ. ಆದರೆ ನನ್ನ ಈ ಸೋಂಕಿನಿಂದಾಗಿ ಇನ್ನಿಬ್ಬರು ಅಕ್ಕಂದಿರಿಗೂ ವಿವಾಹದ ಭಾಗ್ಯ ಕೂಡಿಬಂದಿಲ್ಲ. ನಾನಾದರೂ ಬೇಗನೆ ಸತ್ತರೆ ಅವರು ವಿವಾಹವಾಗಬಹುದು. ನನಗೆ ಆತ್ಮಹತ್ಯೆ ಮಾಡಿಕೊಳ್ಳಲು ಮನಸ್ಸು, ಧೈರ್ಯ ಎರಡೂ ಇಲ್ಲ. ಎಲ್ಲಾದರು ಊರು, ಮನೆ ಬಿಟ್ಟು ಹೋಗೋಣವೆಂದರೆ ಅಕ್ಕಂದಿರು, ಅಪ್ಪ, ಅಮ್ಮ ನನ್ನನ್ನು ಬಿಡುತ್ತಿಲ್ಲ. ಕುಟುಂಬದವರೆಲ್ಲರೂ ತುಂಬಾ ಪ್ರೀತಿಸುತ್ತಾರೆ. ಈಗಲೂ ಮನೆಯಲ್ಲೇ ಇರು. ನಾವು ನಿನ್ನನ್ನು ನೋಡಿಕೊಳ್ಳುತ್ತೇವೆ. ಕೂಲಿ ಕೆಲಸಕ್ಕೆ ಹೋಗಬೇಡ ಎನ್ನುತ್ತಾರೆ. ಆದರೆ ನನಗೆ ಯಾರ ಹಣದಿಂದಲೋ ಕುಳಿತು ತಿನ್ನುವ ಗುಣ ಚಿಕ್ಕ ವಯಸ್ಸಿನಿಂದಲೂ ಇಲ್ಲ ಎಂದು ಕಣ್ಣೀರು ಹಾಕಿಕೊಂಡರು. "ನನ್ನ ಕಣ್ಣೆದುರೇ ಸಾವು ಕಾಣಿಸುತ್ತಿದೆ ಎಂದಾಗ ನನಗೆಂತಹ ಭಯ ಉಂಟಾಗಿರಬಹುದು ನೀವೆ ಯೋಚಿಸಿ" ಎಂದು ನನ್ನ ಉತ್ತರಕ್ಕಾಗಿ ಕಾಯುತ್ತಿದ್ದರು. ನನ್ನ ಕಣ್ಣಲ್ಲಿದ್ದ ನೀರು ಅದಕ್ಕೆ ಉತ್ತರವೆಂಬಂತೆ ಪ್ರತಿಬಿಂಬಿತವಾಗಿತ್ತು.

"ನನಗೆ ಈಗಲು ಅನ್ನಿಸುತ್ತದೆ. ಆ ದಿನ ಆ ವ್ಯಕ್ತಿ ನನ್ನನ್ನು ಮುಟ್ಟುವಾಗ ನಾನು ವಿರೋಧಿಸಬೇಕಿತ್ತು ಎಂದು. ಆ ವ್ಯಕ್ತಿಯು ಹೆಚ್.ಐ.ವಿ. ಪಾಸಿಟಿವ್ ಸೋಂಕಿ ನಿಂದಲೇ ಇತ್ತೀಚೆಗೆ ಮರಣ ಹೊಂದಿದ. ದಿನವೂ ಆ ವ್ಯಕ್ತಿಯನ್ನು ಎದುರಿಗೆ ನೋಡಿದಾಗಲೆಲ್ಲ ನನ್ನೊಳಗೆ ದ್ವೇಷ, ಕೋಪ ಕಿಡಿಕಾರುತ್ತಿತ್ತು. ಈಗಲೂ ಪುರುಷರು ಎಂದರೆ ನಾನು ಸ್ವಲ್ಪ ದೂರವೇ ಉಳಿಯುತ್ತೇನೆ. ಪುರುಷರಲ್ಲಿ ಕೆಲವರಂತು ಹಿತ ಶತ್ರುಗಳು. ಹೇಗಾದರೂ ಮಾಡಿ ಹೆಣ್ಣನ್ನು ಮೋಸಗೊಳಿಸುವ ಚಾಕಚಕ್ಯತೆ ಅವರಿಗಿರುತ್ತದೆ" ಎನ್ನುತ್ತಾರೆ ಲಕ್ಷ್ಮಿ. "ಅಪ್ಪನಿಗೂ ವಯಸ್ಸಾಗಿದೆ. ಅಮ್ಮನೂ ಹೆಚ್ಚು ದುಡಿಯಲಾರರು. ನಾನೂ ತೀರಿಕೊಂಡರೆ ನಮ್ಮ ಕುಟುಂಬ ಏನಾಗು ವುದೋ ಎಂಬ ಭಯ ನನ್ನನ್ನು ಕಾಡುತ್ತಿರುತ್ತದೆ. ನಾವು ಆರು ಜನರು ಹೆಣ್ಣುಮಕ್ಕಳೇ ಆಗಿರುವುದರಿಂದ ಗಂಡುಮಕ್ಕಳ ಸ್ಥಾನವನ್ನು ನಾವೇ ತುಂಬಿದ್ದೇವೆ. ಆದರೂ ಈ ಏಡ್ಸ್ ಸೋಂಕಿಗೆ ತಿಳಿದೂ ತಿಳಿದೂ ಬಲಿಯಾದೆನಲ್ಲ ಎನಿಸುತ್ತದೆ. ಆರ್ಥಿಕವಾಗಿ ಅಷ್ಟು ಸದೃಢರಾಗಿಲ್ಲದ ಕಾರಣ ಆಸ್ಪತ್ರೆಯ ಮುಖವನ್ನು ವರ್ಷಕ್ಕೊಮ್ಮೆ ನೋಡುವಂತಾಗಿದೆ'

ಅತ್ಯಾಚಾರದಿಂದಲೂ ಸಹ ಹೆಚ್.ಐ.ವಿ. ಸೋಂಕು ಹರಡು ತ್ತಿರುವುದು ನಂಜನಗೂಡಿನ ಪ್ರಕರಣಗಳಿಂದ ತಿಳಿದು ಬಂದಿದೆ. ಬಡತನದ ಕಾರಣದಿಂದ, ಕುಟುಂಬದ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಕೂಲಿ ಕೆಲಸದಲ್ಲಿ ತೊಡಗಿರುವ ಮಹಿಳೆಯರನ್ನು ಭೂಮಾಲೀಕರೇ ಅತ್ಯಾಚಾರವನ್ನು ಎಸಗುತ್ತಿರುವುದು ಅಧ್ಯಯನ ದಿಂದ ತಿಳಿದುಬಂದಿದೆ. ಲಕ್ಷ್ಮಿಯೊಬ್ಬರೇ ಈ ಸಮಸ್ಯೆಗೆ ಒಳಗಾಗದೇ ಆಕೆಯ ಸ್ನೇಹಿತೆಯರೂ ಭೂಮಾಲೀಕರಿಗೆ ಲೈಂಗಿಕವಾಗಿ ಬಳಕೆಯಾಗಿರುವು ದನ್ನು ನಾವಿಲ್ಲಿ ಗಮನಿಸಬಹುದು. ಔದ್ಯೋಗಿಕ ಕ್ಷೇತ್ರವು ಮಹಿಳೆಯರ ಪಾಲಿಗೆ ಸಮಸ್ಯೆಯಾಗಿ ಪರಿಣಮಿಸಿರುವುದು ಸಾಮಾಜಿಕ ಅಸಮಾನತೆಗೆ ಉದಾಹರಣೆ ಎನಿಸಿದೆ.


ಪ್ರಕರಣ 3 : ಗೀತಾ ಎಂಬುವವರಿಗೆ 20 ವರ್ಷ ವಯಸ್ಸಾಗಿದ್ದು, ನಂಜನಗೂಡು ತಾಲ್ಲೂಕಿನ ಗೊದ್ದನಪುರ ಗ್ರಾಮಕ್ಕೆ ಸೇರಿದವರಾಗಿದ್ದು, 5ನೇ ತರಗತಿ ವಿದ್ಯಾಭ್ಯಾಸವನ್ನು ಮುಗಿಸಿದ್ದು, ವಿವಾಹಿತೆ ಯಾಗಿರುವ ಇವರಿಗೆ ಒಂದು ಗಂಡು ಮಗುವಿದೆ. ಇವರು ಪರಿಶಿಷ್ಟ ಜಾತಿಗೆ ಸೇರಿದ್ದು, ಮನೆ ಕೆಲಸದಲ್ಲಿ ನಿರತರಾಗಿದ್ದಾರೆ. ಗಂಡ ಆರ್.ಎಂ.ಸಿ. ಯಲ್ಲಿ ಕೂಲಿ ಕೆಲಸ ಮಾಡುತ್ತಾರೆ.

ವಿದ್ಯಾಭ್ಯಾಸವಿಲ್ಲದ ಇವರ ಕುಟುಂಬದಲ್ಲಿ ಊಟಕ್ಕೆ, ಬಟ್ಟೆಗೇನು ತೊಂದರೆ ಇರಲಿಲ್ಲ. ಗೀತಾ ನೋಡಲು ಸುಂದರವಾಗಿದ್ದಾರೆ. ಆದರೂ ಗಂಡ ಈಕೆಯನ್ನು ದಿನವೂ ಹೀಯಾಳಿಸುತ್ತಿದ್ದರಂತೆ, "ಏನ್ ಸುಂದರ ವಾಗಿದ್ದರೆ ಏನ್ ಬಂತು. ವರದಕ್ಷಿಣೆ ಮಾತ್ರ ಒಂದು ಬಿಡಿಗಾಸು ಕೊಟ್ಟಿಲ್ಲ. ಜೀವನಕ್ಕೆ ಬೇಕಾಗಿರುವುದು ಕಾಸು, ಪ್ರೀತಿ ಅಂದಚೆಂದ ಅಲ್ಲ" ಎಂದು ಬೇಸರದ ಮಾತುಗಳನ್ನಾಡುತ್ತಿದ್ದರು. "ನಮ್ಮ ಮನೆಯವರು ಅವರ ಕೈಲಾದಷ್ಟು ಕೊಟ್ಟು ವಿವಾಹ ಮಾಡಿಕೊಟ್ಟರು. ಗಂಡ ಬಿಟ್ಟು 6 ತಿಂಗಳಾದ ನಂತರ ರೋಗವಿದೆ ಎಂದು ತಿಳಿಯಿತು. ಅದಕ್ಕೆ ನನ್ನ ಗಂಡ ನನ್ನನ್ನು ತಪ್ಪು ತಿಳ್ಕೋತಾ ಇದಾರೆ. ನಾನು ನಿನ್ನನ್ನು ಬಿಟ್ಟಿದ್ದಾಗ ನೀನೇನು ತಪ್ಪು ಮಾಡಿದೆ ಹೇಳು ಎಂದು ಹೊಡೆಯುತ್ತಾರೆ. ಅವರನ್ನು ಚೆಕ್ ಮಾಡಿಸಿಕೊಳ್ಳೋಕೆ ಬನ್ನಿ ಎಂದರೆ ಬರುತ್ತಿರಲಿಲ್ಲ. ನಿಮಗೇ ನಾದರೂ ಈ ರೋಗವಿಲ್ಲ ಎಂದಾದಲ್ಲಿ ನಾನು ತಪ್ಪು ಮಾಡಿದ್ದೀನಿ ಎಂಬುದು ನಿಜವಾಗಿ ಬಿಡಲಿ. ಬನ್ನಿ ಟೆಸ್ಟ್ ಮಾಡಿಸಿಕೊಳ್ಳಿ ಎಂದು ಸವಾಲು ಹಾಕಿದೆ. ಕೊನೆಗೆ ನಮ್ಮಪ್ಪ ಅಮ್ಮ ಎಲ್ಲರೂ ಹಠ ಮಾಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿದೆವು. ಅವರಿಗೆ ಹೆಚ್.ಐ.ವಿ. ಸೋಂಕಿರುವುದು ತಿಳಿಯಿತು. ಅದಕ್ಕೆ ನಾನೇನೂ ಮಾಡಲಿಲ್ಲ. ಮಾತನ್ನೂ ಆಡಲಿಲ್ಲ. ಆರುತಿಂಗಳು ನಾನು ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ. ಎಲ್ಲಾ ಜನರೂ ನನ್ನನ್ನು ಗಂಡನ್ನ ಬಿಟ್ಟೋಳು ಎಂದು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ಮಾತನಾಡಿಕೊಳ್ಳುತ್ತಿದ್ದರು. 'ಸೋಂಕಿದೆ ಎಂದು ತಿಳಿದಾಗ ಬೇಜಾರಾಯ್ತು. ನನ್ ಬಗ್ಗೆ ನಮ್‌ಯಜಮಾನ್ರು ತಪ್ಪು ತಿಳ್ಕೊಂಡ್ರೆ ಎಂದು ಭಯ ಇತ್ತು' ಎಂದು ಗೀತಾ ವೇದನೆ ಪಡುತ್ತಿದ್ದರು.

'ಮಗನನ್ನು ಕಂಡರೆ ಇಷ್ಟಪಡುವ ಇವರು ಕೆಲವೊಮ್ಮೆ ನನ್ನ ಕಣ್ಣೆದುರಿಗೆ ಅವನನ್ನು ಬೈದು ಹೊಡೆದರು. ಕೆಲವೊಮ್ಮೆ ಯಾಕಾದರೂ ಹುಟ್ಟಿದೆ ನನ್ನ ಹೊಟ್ಟೆಯಲ್ಲಿ ಎಂದು ಗೋಳಾಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ಅವನನ್ನು ಮುದ್ದಾಡುತ್ತಿದ್ದರು. ಆ ಮಗುವಿಗೆ ನಾಲ್ಕೈದು

ವರ್ಷವಿರಬಹುದು. ಆ ವಯಸ್ಸಿಗೆ ಆ ಹುಡಗನ ದೈಹಿಕ ಬೆಳವಣಿಗೆ ಹಾಗೂ ಮಾನಸಿಕ ಬೆಳವಣಿಗೆಗಳೆರಡೂ ಕಡಿಮೆಯಿರುವುದು ಕಂಡು ಬಂದಿತು. ನನ್ನ ಅವಲೋಕನಕ್ಕೆ ಕಂಡುಬಂದ ಹಾಗೆ ಗೀತಾರವರು ಸಿವಿಯರ್ ಡಿಪ್ರೆಶನ್‌ಗೆ ಒಳಗಾಗಿರಬಹುದು ಎನ್ನಿಸಿತು. ಅವರ ಮಾತುಗಳು, ಭಾವನೆಗಳು, ಮುಖಚರ್ಯೆಗಳು, ಆಸಕ್ತಿಗಳು, ಕ್ಷಣ-ಕ್ಷಣ ಬದಲಾವಣೆಗೆ ಒಳಪಡುತ್ತಿದ್ದವು. ಅವರನ್ನು ಸಂದರ್ಶನಕ್ಕೆ ಒಳಪಡಿಸುವುದೇ ಸಂಶೋಧಕಿಯಾದ ನನಗೆ ದೊಡ್ಡ ಸವಾಲೆನಿಸಿತ್ತು.' ಯಾರನ್ನು ಕಂಡರೆ ನಿಮಗೆ ಇಷ್ಟವಿಲ್ಲ ಎಂದಾಗ ಕೆಂಡದಂತಹ ಮುಖ ಮಾಡಿಕೊಂಡು "ಪಕ್ಕದ ಮನೆಯವರು ಹಾಗೂ ಅತ್ತೆಯವರನ್ನು ಕಂಡರೆ ನನಗೆ ಇಷ್ಟವಿಲ್ಲ. ಭೂಮಿ ಮೇಲೆ ನಾನಿರಬೇಕು ಇಲ್ಲವೇ ಅವರಿರ ಬೇಕು" ಎಂದು ಕಡ್ಡಿ ತುಂಡು ಮಾಡಿದ ಹಾಗೆ ಹೇಳಿದರು. ಕಾರಣ ಕೇಳಿದಾಗ ನನ್ನ ಗಂಡನನ್ನು ಬಿಟ್ಟರೆ ನನಗೆ ಬಹಳ ಹಿಂಸೆ ನೀಡಿದವರು ಪಕ್ಕದ ಮನೆಯವರು ಹಾಗೂ ಅತ್ತೆ ಎಂಬ ಉತ್ತರ ನೀಡಿದರು.

ಗೀತಾ ಎಲ್ಲಿ ಹೋಗುತ್ತಾಳೆ, ಯಾವಾಗ ಬರುತ್ತಾಳೆ ಎಂಬುದನ್ನೆಲ್ಲಾ ಹಿಂಬಾಲಿಸಿ ನೋಡುವುದೇ ಪಕ್ಕದ ಮನೆಯವರ ಹವ್ಯಾಸವಾಗಿತ್ತಂತೆ. ಅತ್ತೆಯಂತೂ ಅಡಿಗೆಮನೆಗೆ ಹೋಗಲೂ ಬಿಡುತ್ತಿರಲಿಲ್ಲವಂತೆ. "ವೈದ್ಯರು ನೋಡಿದರೆ ಮಗನಿಗೆ ಹಾಲು ಕುಡಿಸಬೇಡಿ ಎನ್ನುತ್ತಾರೆ. ಅತ್ತೆ ನೋಡಿದರೆ ಮಗನನ್ನು ಮುಟ್ಟಬೇಡಿ ಎನ್ನುತ್ತಾರೆ. ಹಾಗಾದರೆ ನಾನು ಯಾಕೆ, ಯಾವ ಸುಖಕ್ಕೋಸ್ಕರ ಬದುಕಿರಬೇಕು. ಗಂಡನ ಪ್ರೀತಿ ಇಲ್ಲ, ಮಗನ ಪ್ರೀತಿ ಪಡೆಯಲು ಬಿಡುತ್ತಿಲ್ಲ. ಉಳಿದವರು ಪ್ರೀತಿ ಕೊಡೋದಿಲ್ಲ. ಇದೆಂಥಾ ಬದುಕು ಕೊಟ್ಟೆ ದೇವರೆ ನನಗೆ" ಎಂದು ರೋದಿಸುತ್ತಿದ್ದರು.



ಪ್ರೀತಿ ಇಲ್ಲದಮೇಲೆ ಹೂವು ಅರಳೀತು ಹೇಗೆ, ಮೋಡ ಕಟ್ಟೀತು ಹೇಗೆ, ಮಳೆ ಸುರಿದೀತು ಹೇಗೆ ಎಂದು ಹೇಳಿರುವ ಕವಿಗಳ ಸಾಹಿತ್ಯದಲ್ಲಿರುವ ಅರ್ಥವು ಗೀತಾರವರ ಮಾತಿನಿಂದ ಹೊರ ಹೊಮ್ಮುತ್ತಿತ್ತು. ಪ್ರೀತಿಯೇ ಎಲ್ಲ ಕಾಲಕ್ಕೂ ಜೀವ, ಚೈತನ್ಯ ತುಂಬು ವಂಥದ್ದು ಎಂಬುದು ನೈಜ ಸಂಗತಿ. ಆದರೆ ಗೀತಾರವರ ಹಾಗೆ ಸೋಂಕಿತರಲ್ಲದವರೂ ಬದುಕಿನ ತುಂಬ ಬವಣೆಗಳನ್ನು ತುಂಬಿ ಕೊಂಡು, ಮನಸಿನ ತುಂಬ ನೋವುಗಳನ್ನು ತುಂಬಿಕೊಂಡು ಬದುಕುತ್ತಿದ್ದಾರೆ. ಅವರೆಲ್ಲರೂ ಸಹ ಮಾನಸಿಕ ಅಸ್ವಸ್ಥತೆಯ ಕುರುಹು ಗಳಂತೆ ಬಾಳ ಬಂಡಿಯನ್ನು ತಳ್ಳಿಕೊಂಡು ಜೀವಿಸುತ್ತಿದ್ದಾರೆ.

ಹೆಣ್ಣು, ಭೂಮಿ, ಪ್ರಕೃತಿ, ದೇವತೆ, ಎಂಬೆಲ್ಲಾ ಗೌರವ ಸೂಚಕ ಪದಗಳು ಪ್ರಸ್ತುತ ಸಮಾಜಕ್ಕೆ ಅನ್ವಯವೇ ಎಂಬುದನ್ನು ಮತ್ತೆ ಒರೆಗೆ ಹಚ್ಚಿ ನೋಡಬೇಕಾಗಿದೆ. ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ಕೃತ್ಯ, ವರದಕ್ಷಿಣೆ, ಸಾವು, ಚುಡಾಯಿಸುವಿಕೆ, ಮಾನಸಿಕ ಹಿಂಸೆ, ಖಿನ್ನತೆ, ಅಸಮಾನತೆಗೆ ಸಿಕ್ಕಿ ನಲುಗುತ್ತಿರುವ ಮಹಿಳೆಯರಿಗೆ ಹೆಚ್.ಐ.ವಿ. ಸೋಂಕು ನುಂಗಲಾರದ ತುತ್ತಾಗಿದೆ. ಇವೆಲ್ಲವೂ ಪುರುಷ ಪ್ರಾಧಾನ್ಯದ ಮೂಲದಿಂದಲೇ ಜನ್ಮತಾಳಿದ ಸಮಸ್ಯೆಗಳಾಗಿವೆ. ಅಂತೆಯೇ ಗಂಡ ನಿಂದಲೇ ಹೆಚ್.ಐ.ವಿ. ಸೋಂಕು ಪಡೆಯುತ್ತಿರುವ ಶೇ 70ರಷ್ಟು ಸೋಂಕಿತ ಮಹಿಳೆಯರು ಸಮಾಜದಿಂದ, ಕುಟುಂಬದಿಂದ, ಸಮುದಾಯದಿಂದ, ಗಂಡನಿಂದ ಕೊನೆಗೆ ತನಗೆ ತಾನೇ ಬೇಡ ಎನ್ನುವಷ್ಟು ಅಂಚಿಗೆ ದೂಡಲ್ಪಟ್ಟಿದ್ದಾರೆ. ಈ ತೆರನಾದ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವವರು ಯಾರು? ಈ ಕೂಪದಿಂದ ಅವರನ್ನು ಮೇಲೆತ್ತುವವರು ಯಾರು ಎಂಬ ಕೂಗಿಗೆ ಪ್ರತಿಧ್ವನಿಯಾಗಿ ಮಹಿಳೆ ಎಂಬ ಪದವೇ ಕೇಳಿಬರುತ್ತದೆ. ಸಮಸ್ಯೆಗಳನ್ನು ಅನುಭವಿಸುವವರು ಎಚ್ಚೆತ್ತುಕೊಳ್ಳಬೇಕು. ಧೈರ್ಯದಿಂದ ಮುನ್ನುಗ್ಗಿ ಬದುಕಿರುವಷ್ಟು ದಿನ ಸಾಧನೆಯ ಹಾದಿಯನ್ನು ಹಿಡಿದು ಮಾದರಿಯಾಗಿ ಬದುಕಿ ತೋರಿಸಬೇಕು. ಗಂಡಂದಿರು ಮಾಡುತ್ತಿರುವ ದುಷ್ಕೃತ್ಯದ ಬಗ್ಗೆ ಅರಿವು ಮೂಡಿಸಲು ಹೋರಾಡಬೇಕು.

ಹೆಂಡತಿ ಇದ್ದಲ್ಲೇ ಇದ್ದರೂ ಆಕೆಯನ್ನು ಬಿಟ್ಟು ಹೋದದ್ದು ಗಂಡ. ಆದರೂ ಸಮಾಜ ಈಕೆಯನ್ನು 'ಗಂಡನ್ನ ಬಿಟ್ಟೋಳು' ಎಂದು ಹೇಳಿದ್ದು ತಪ್ಪು. ಬುದ್ಧಿ ಜೀವಿಗಳು ಸಮಾಜದ ಹಿತ ಬಯಸುವವರು. 'ಹೆಂಡತಿಯನ್ನು ಬಿಟ್ಟೋನು' ಎಂದು ಆತನನ್ನು ದೂಷಿಸಬೇಕು. ಪುರುಷ ಪ್ರಾಧಾನ್ಯದ ರೂಢಿ ಮಾತುಗಳು ಮಹಿಳೆಯ ಮನಸ್ಸನ್ನು ಛಿದ್ರ ಮಾಡುವಷ್ಟು ಶಕ್ತಿಯುಳ್ಳವಾಗಿವೆ. ತಪ್ಪು ಮಾಡುವವರಿಗೆ ಶಿಕ್ಷೆ ಕೊಟ್ಟರೆ ಸಮಾನತೆಯ ಪ್ರಶ್ನೆಗೆ ಉತ್ತರ ದೊರಕಿದಂತಾಗುತ್ತದೆ.

ಗೀತಾರವರಿಗೆ ತಮಗೆ ಸೋಂಕಿದೆ ಎಂಬ ವಿಷಯಕ್ಕಿಂತ ತನ್ನ ಗಂಡನಿಗೆ ತಿಳಿದರೆ ಜೀವನ ಹೇಗಾಗುತ್ತದೆಯೋ ಏನೋ ಎಂಬ ಆತಂಕವೇ ಹೆಚ್ಚಾಗಿತ್ತು. ಗಂಡನಿಂದಲೇ ಪಡೆದಿರುವ ಸೋಂಕಿನ ಯಾತನೆ ಒಂದೆಡೆಯಾದರೆ, ಅದೇ ಗಂಡ ತನಗೆ ಸೋಂಕು ಬಂದಿರುವ ಬಗೆಗೆ ಏನು ಅಂದುಕೊಳ್ಳುತ್ತಾರೊ ಎಂಬ ಚಿಂತೆ ಮತ್ತೊಂದು ಕಡೆ. ಆದರೆ ಗಂಡನಿಗೆ ಯಾವುದೇ ವಿಷಯದ ಬಗೆಗೂ ಚಿಂತೆಯಿಲ್ಲ. ಯಾರ ಮಾತೂ ಲೆಕ್ಕಕ್ಕಿಲ್ಲ. ಜನರೂ ಸಹ ಗೀತಾರನ್ನೇ ದೂಷಿಸುತ್ತಾರೆ. ಕಾರಣವಾಗಿಯೇ ಗೀತಾ ಕೈಗೆ ಸಿಕ್ಕ ಮಾತ್ರೆಗಳನ್ನು ತೆಗೆದುಕೊಂಡು ಸಾಯಲು ಪ್ರಯತ್ನಿಸಿದ್ದರು. ಗೀತಾರವರು ಜೀವನದಲ್ಲಿ ಬಹಳ ನೊಂದಿರುವ ಹಾಗೆ ಕಾಣಿಸುತ್ತಿದ್ದರು. ಅವರ ಮಾತುಗಳೂ ಸಹ ಭೂಮಿಯಮೇಲೆ ತಾನು ಹೆಚ್ಚುಕಾಲ ಬದುಕುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದವು. ಈಕೆಗೆ ಮಗನ ಮೇಲೆ ಎಲ್ಲಿಲ್ಲದ ಆಸಕ್ತಿ, ಪ್ರೀತಿ. ಅವನನ್ನು ಬಿಟ್ಟು ಹೋಗಬೇಕಲ್ಲ ಎಂಬ ಕೊರಗಿನ ಜೊತೆಗೆ ಗಂಡುಹುಡುಗ ಎಲ್ಲಾದರೂ ಕೂಲಿಮಾಡಿ ಕೊಂಡು ಬದುಕುತ್ತಾನೆ ಎಂಬ ನಿರಾಳ ಮನೋಭಾವವು ಮತ್ತೊಂದೆಡೆ ವ್ಯಕ್ತವಾಗುತ್ತಿತ್ತು. ಮಗನಿಗೆ ಸೋಂಕು ಇಲ್ಲದಿದ್ದರೆ ಚಿನ್ನದತೇರು ಎಳೆಸುತ್ತೇನೆ ಎಂಬ ಹರಕೆಯನ್ನು ಗೀತ ಕಟ್ಟಿಕೊಂಡಿದ್ದರು. ಅದರಂತೆ ಮಹದೇಶ್ವರ ಬೆಟ್ಟದಲ್ಲಿ ತೇರನ್ನು ಎಳೆಸಿದ್ದರು. ದೇವರ ಮೇಲೆ ಅವರಿಗೆ ಅಪಾರ ಭಕ್ತಿ. ತನಗೆ ಸೋಂಕು ಇದ್ದರೂ ಸಹ ದೇವರಲ್ಲಿ ಸ್ವಲ್ಪವೂ ನಿರಾಸಕ್ತಿ ಬಂದಿಲ್ಲ. ನಮ್ಮ ಕರ್ಮಕ್ಕೆ ರೋಗ ಬಂದರೆ ಪಾಪ ದೇವರು ಏನು ಮಾಡುತ್ತಾನೆ ಎಂಬ ಅಭಿಪ್ರಾಯ ಗೀತಾರದ್ದು.

ಪ್ರಕರಣ 4 : ಪದ್ಮ ಎಂಬುವವರಿಗೆ 32 ವರ್ಷ ವಯಸ್ಸಾಗಿದ್ದು, ತಿರುಮಕೂಡಲು ನರಸೀಪುರ ತಾಲ್ಲೂಕಿನ ಸೋಸಲೆ ಹೋಬಳಿಗೆ ಸೇರಿದವರಾಗಿದ್ದಾರೆ. 8ನೇ ತರಗತಿ ವಿದ್ಯಾಭ್ಯಾಸವನ್ನು ಮುಗಿಸಿದ್ದಾರೆ. ವಿವಾಹಿತೆಯಾಗಿದ್ದು, ಒಂದು ಹೆಣ್ಣು ಮಗಳಿದ್ದಾಳೆ. ಪರಿಶಿಷ್ಟ ಜಾತಿಗೆ ಸೇರುವ ಪದ್ಮ ಗೃಹಕೃತ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಗಂಡ ಕಾರು ಚಾಲಕನಾಗಿ ಕೆಲಸ ಮಾಡುತ್ತಾನೆ.

ಪದ್ಮ ಇವರಿಗೆ 32 ವರ್ಷ. ತಿರುಮಕೂಡಲು ನರಸೀಪುರ ತಾಲ್ಲೂಕಿನ ಸೋಸಲೆ ಹೋಬಳಿಗೆ ಸೇರಿಕೊಂಡ ಒಂದು ಗ್ರಾಮದಲ್ಲಿ ಇವರ ವಾಸ. ಇವರಿಗೆ ಒಬ್ಬ ಅಕ್ಕ, ಒಬ್ಬ ತಂಗಿ, ಇಬ್ಬರು ತಮ್ಮಂದಿರಿದ್ದಾರೆ. ತಂದೆ ಸರ್ಕಾರಿ ಉದ್ಯೋಗದಲ್ಲಿದ್ದು ನಿವೃತ್ತಿ ಹೊಂದಿರುತ್ತಾರೆ. ಪದ್ಮ ತನ್ನ ಜೀವನದ ಕಥೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. "ತಾಯಿ ತನ್ನ ತಮ್ಮನಿಗೆ ವಿವಾಹವಾಗು ಎಂದು ಬಹಳ ಹಠ ಹಿಡಿದರು. ನನಗೆ ಸಂಬಂಧಗಳ ಜೊತೆ ವಿವಾಹ ಇಷ್ಟವಿರಲಿಲ್ಲ.

ನಾನು ಬೇಡ ಬೇರೆ ಯಾವುದಾದರೂ ಒಂದು ಹೊಸ ಸಂಬಂಧಕ್ಕೆ ವಿವಾಹ ಮಾಡಿಕೊಡಿ ಎಂದು ಗೋಗರೆದು, ಕಾಲುಕಟ್ಟಿದರೂ ನನ್ನ ಮಾತನ್ನು ಯಾರೂ ಕೇಳಲಿಲ್ಲ. ವಿವಾಹ ನಡೆದೇ ಹೋಯಿತು' ಎನ್ನುತ್ತಾರೆ. ಈ ಹೇಳಿಕೆಯನ್ನು ಗಮನಿಸಿದರೆ ಸಂಗಾತಿಯ ಆಯ್ಕೆಯಲ್ಲಿ ಹೆಣ್ಣುಮಕ್ಕಳಿಗೆ ಸಾಮಾಜಿಕ ನೆಲೆಯಲ್ಲಿ ಹಕ್ಕಿಲ್ಲವೆಂಬುದು ಮನದಟ್ಟಾಗುತ್ತದೆ.


ಈಕೆಯ ಗಂಡ ಕಾರು ಡ್ರೈವರ್. ಮಗಳ ಹೆಸರು ಭುವನೇಶ್ವರಿ. ನೋಡಲು ಪದ್ಮರವರು ಬಹಳ ಸುಂದರವಾಗಿದ್ದರು. ಗಂಡನ ಮುಖಾಂತರ ಹೆಚ್.ಐ.ವಿ. ರೋಗಕ್ಕೆ ತುತ್ತಾದೆ ಎಂದು ಗದ್ಗದಿತ ಸ್ವರದಿಂದಲೇ ನುಡಿದರು. ಹೆಚ್.ಐ.ವಿ. 8 ವರ್ಷಗಳಿಂದ ಇದೆ. ಹೆಚ್.ಐ.ವಿ. ಇದೆ ಎಂದು ತಿಳಿದಾಗ ಸಾಯಲು ಹೋಗಿದ್ದೆ ಎಂದು ಕಣ್ಣೀರು ಹಾಕಿಕೊಂಡರು. ಇಷ್ಟೇ ಏಕೆ ಸಂದರ್ಶನ ಮುಗಿಯುವವರೆಗೂ ಕಣ್ಣೀರು ವಿಶ್ರಾಂತಿ ಪಡೆಯಲೇ ಇಲ್ಲ. ಅವರು ಹೇಳುತ್ತಿದ್ದ ವಿಷಯಗಳಲ್ಲಿ ಸ್ವಲ್ಪವಾದರೂ ಪೊಳ್ಳಿದೆ ಎಂದು ನನಗನ್ನಿಸಲಿಲ್ಲ. ಲೀಲಾಜಾಲವಾಗಿ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತಿದ್ದರು. ಕೆಲವು ಪ್ರಶ್ನೆಗಳಿಗೆ ಅವರು ಉತ್ತರಿಸುವುದಿಲ್ಲ ಎಂಬ ನನ್ನ ನಂಬಿಕೆಯನ್ನು (ಕಲ್ಪನೆಗಳನ್ನು) ಪದ್ಮರವರು ಹುಸಿಗೊಳಿಸಿದರು. ಮುಕ್ತವಾಗಿ ತನ್ನ ಸಮಸ್ಯೆಗಳನ್ನೆಲ್ಲಾ, ಮೂಕ ವೇದನೆಗಳನ್ನೆಲ್ಲಾ ಭಾವುಕವಾಗಿಯೇ ಹೇಳಿದರು. ಪದ್ಮರ ಜೀವನದ ಘಟನೆಗಳು ಅವರ ಅಚ್ಚುಕಟ್ಟಾದ ಮಾತಿನಿಂದ ನನ್ನ ಕಣ್ಮುಂದೆ ಹಾದು ಹೋಗುತ್ತಿದ್ದವು. ಅವರ ಕಣ್ಣೀರು ಅವರ ಸೆರಗನ್ನು ಒದ್ದೆ ಮಾಡುತ್ತಲೇ ಇತ್ತು. ಮಗಳು ಬೇಡವೆಂದರೂ ಹಠ ಮಾಡಿ ಪತ್ನಿಯ ತಮ್ಮನಿಗೆ ವಿವಾಹ ಮಾಡಿದ ತಪ್ಪಿನಿಂದಾಗಿ ತಂದೆ ಪಶ್ಚಾತ್ತಾಪ ಅನುಭವಿಸುತ್ತಿದ್ದರು. ತಾಯಿಗೆ ಮಗಳ ಬಗ್ಗೆ ಕನಿಕರವಿರಲಿ ಆಕೆ ತನ್ನ ಮಗಳು ಎಂಬುದನ್ನು ಮರೆತು ಬಿಡಲು ಮನಸ್ಸು ಮಾಡಿ ತವರು ಮನೆಗೆ ಬಂದಾಗ ಇಬ್ಬರು ತಮ್ಮಂದಿರು, ತಾಯಿ ಎಲ್ಲರೂ ಮನೆಗೆ ಸೇರಿಸಲಿಲ್ಲವಂತೆ, "ನಮ್ಮ ಪಾಲಿಗೆ ನೀನು ಸತ್ತಿದ್ದೀಯ, ನಿನ್ನನ್ನು ಮನೆಯಲ್ಲಿರಿಸಿಕೊಂಡರೆ ನಿನ್ನ ತಂಗಿಯ ಮದುವೆಗೆ ತೊಂದರೆ ಯಾಗುತ್ತದೆ. ತಮ್ಮಂದಿರಾದ ತಮಗೂ ಯಾರೂ ಹೆಣ್ಣು ಕೊಡುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು." ಎಂದು ಪದ್ಮ ನೊಂದು ಹೇಳಿದರು. ಈ ಕಾರಣವಾಗಿ ನನ್ನ ತಂದೆ ಒಂದು ನಗರದಲ್ಲಿ ಅವರ ಸ್ನೇಹಿತರ ಮನೆಯಲ್ಲಿ ಇರಿಸಿದ್ದಾರೆ. ಪಾಪ ಅವರು ನನ್ನನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಈಗ ತಂದೆ ಮನೆಗೆ ಕರೆದೊಯ್ಯುತ್ತಿದ್ದಾರೆ. ಆದರೆ ಹೋಗಲು ನನಗೆ ಇಷ್ಟವಿಲ್ಲ. ಕೆಲಸ ಹುಡುಕಲು ಪ್ರಯತ್ನಿಸು ತ್ತಿದ್ದೇನೆ. ಪ್ರೀತಿ ಇಲ್ಲದ ಮನೆಯಲ್ಲಿ ವಾಸ ಮಾಡಲು ನನ್ನ ಮನಸ್ಸು ಒಪ್ಪುತ್ತಿಲ್ಲ, ನನ್ನ ತಂಗಿ ಬೇರೆ ನನ್ನ ಪರಿಸ್ಥಿತಿಯನ್ನು ಕಂಡು ವಿವಾಹವೇ ಬೇಡ ಎಂದು ಹಠ ಮಾಡುತ್ತಿದ್ದಾಳೆ. ತಾಯಿಯಾದವರು ಇದಕ್ಕೆ ಕಾರಣ ನಾನೆಂದು ದೂಷಿಸುತ್ತಿದ್ದಾರೆ.

ಗಂಡ ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಎಂದು ಕೇಳಿದ ಪ್ರಶ್ನೆಗೆ, "ಅವನು ಎಲ್ಲಿದ್ದಾನೋ ಸಾಯಲಿ ಬಿಡಿ. ಅವನಿಗೆ ಸ್ವಲ್ಪ ಹೆಣ್ಣಿನ ಹುಚ್ಚು ಜಾಸ್ತಿ. ಇನ್ನೂ ಅದೆಷ್ಟು ಹೆಣ್ಣುಮಕ್ಕಳಿಗೆ ಈ ರೋಗ ಅಂಟಿಸ್ತಾನೋ. ಅವರನ್ನು ದೇವರೇ ಕಾಪಾಡಬೇಕು. ಎಷ್ಟೋ ಸಲ ನನ್ನನ್ನು ಬಲವಂತವಾಗಿ ಸೇರಲು ಪ್ರಯತ್ನಪಟ್ಟಿದ್ದಾನೆ. ಅವನನ್ನು ಗಂಡ ಎಂದು ಹೇಳಿಕೊಳ್ಳಲು ನನಗೆ ಬೇಸರವಾಗುತ್ತದೆ. ಮನೆಯವರೂ ಸಹ ಎಲ್ಲ ಕಷ್ಟಗಳಿಗೂ ನಾನೇ ಕಾರಣವೆಂದು ಹೀಯಾಳಿಸುತ್ತಾರೆ. ಗಂಡನ ಅಣ್ಣಂದಿರು ಐದು ಜನ. ಅವರಲ್ಲಿ ಒಬ್ಬರು ಶಿಕ್ಷಕರು. ಈ ಸೋಂಕು ನನಗೆ ಬಂದಮೇಲೆ ಒಂದು ದಿನ ಆ ಶಿಕ್ಷಕರು 'ಅಯ್ಯೋ ಪದ್ಮ ಅವನಿಗೆ ರೋಗ ಇರುವುದು ನಿನಗೆ ತಿಳಿದೇ ವಿವಾಹವಾಗು ತ್ತಿದ್ದೀಯ ಎಂದುಕೊಂಡಿದ್ದೆ. ಹೇಗೂ ತಾಯಿಯ ತಮ್ಮ ಅಲ್ವಾ ಅಂತ' ಎಂದು ಹೇಳಿದರು. ಆಗ ಇಡೀ ಪ್ರಪಂಚ ಕೆಟ್ಟದ್ದು, ಮೋಸದ ಜನರೇ ಹೆಚ್ಚು, ಬೇರೆಯವರ ಅಳುವನನ್ನು ನೋಡಿ ಸಂತೋಷಪಡುತ್ತಾರೆ" ಎಂದು ಪದ್ಮ ಹತಾಶೆಗೊಂಡು ನುಡಿದರು. ಹೆಚ್.ಐ.ವಿ. ರೋಗ ವಿರುವುದು ತಿಳಿದಿದ್ದರೂ ಯಾರೂ ಒಂದು ಮಾತೂ ಹೇಳದೆ ವಿವಾಹಕಾರ್ಯ ನೆರವೇರಿಸಿ ಬಿಟ್ಟಿದ್ದರು. ತನ್ನ ತಾಯಿಗೂ ತನ್ನ ತಮ್ಮನಿಗೆ ಹೆಚ್.ಐ.ವಿ. ಸೋಂಕಿರುವುದು ತಿಳಿದಿತ್ತು ಎನ್ನುವಾಗ ಪದ್ಮರವರ ಮುಖದಲ್ಲಿ ತಾಯಿಯನ್ನು ಕೊಂದುಬಿಡುವಷ್ಟು ರೋಷ ಎದ್ದು ಕಾಣುತ್ತಿತ್ತು. "ಇಂತಹ ತಾಯಿಯನ್ನು ಎಲ್ಲಾದರೂ ನೋಡಲು ಸಾಧ್ಯವೇ ಮೇಡಂ? ತಮ್ಮನ ಹಿತಕ್ಕೋಸ್ಕರ ಮಗಳ ಜೀವನ ನಾಶಮಾಡುವ ತಾಯಿ ಪ್ರಪಂಚದಲ್ಲಿ ಇವಳೊಬ್ಬಳೇ ಇರುವುದು ಎಂದೆನಿಸುತ್ತದೆ" ಎಂದರು.

ಮೊದಲು ಜನನಾಂಗದಲ್ಲಿ ಉರಿ, ಗಂಟುಗಳು ಕಾಣಿಸಿಕೊಂಡಾಗ ಯಾಕೆ ಹೀಗಾಗುತ್ತಿದೆ ಎಂದು ಗಂಡನಿಗೆ ಹೇಳಿದೆ. ಅವರು ಏನೋ ಉಷ್ಣ ಇರಬೇಕು ಬಿಡು ಎಂದು ಬಿಟ್ಟರು. ನಾನೂ ಸಹ ಅದೇ ಇರಬೇಕೆಂದು ಮಜ್ಜಿಗೆ, ನೀರು ಹೆಚ್ಚಾಗಿ ಕುಡಿಯಲು ಪ್ರಾರಂಭಿಸಿದೆ. ಮತ್ತೆ ಮತ್ತೆ ಹಾಗೆನಿಸಿದರೂ ವೈದ್ಯರನ್ನು ಕಾಣುವ ಪ್ರಯತ್ನ ಮಾಡಲಿಲ್ಲ. ಅನಂತರ ಗರ್ಭಿಣಿಯಾದಾಗ ಪರೀಕ್ಷೆಗೆ ಒಳಪಟ್ಟಾಗ ಹೆಚ್.ಐ.ವಿ. ಸೋಂಕಿರುವುದು ತಿಳಿದು ಬಂದಿತು. ಆಗ ನನ್ನ ಅನುಮಾನ ಗಟ್ಟಿಗೊಂಡಿತು. ಮೊದಲೇ ಹೇಗೂ ಗಂಡನಿಗೆ ಹೆಂಗಸರ ಸಹವಾಸ ಇತ್ತು. ಇದೇ ಕಾರಣಕ್ಕೆ ಆತನಿಗೆ ಯಾರೂ ಹೆಣ್ಣು ಕೊಡುತ್ತಿರಲಿಲ್ಲ. ನಾನೊಬ್ಬಳು ಬಿಟ್ಟಿ ಬಿದ್ದಿದ್ನಲ್ಲ ಅದಕ್ಕೆ ನನ್ನ ತಾಯಿ ನನ್ನನ್ನು ಕೊಟ್ಟು ತನ್ನ ತಮ್ಮನಿಗೆ ವಿವಾಹ ಮಾಡಿದರು. ಗರ್ಭಿಣಿಯ ಸಮಯದಲ್ಲಿ ಹೆಚ್.ಐ.ವಿ. ಇರುವುದು ತಿಳಿದಾಗಲೂ ಅವರು ತಮಗೆ ಆ ರೋಗ ಇರುವುದನ್ನು ಒಪ್ಪಿಕೊಳ್ಳಲಿಲ್ಲ. ಬದಲಾಗಿ ನನ್ನ ನೈತಿಕತೆಯನ್ನೇ ಪ್ರಶ್ನೆ ಮಾಡಿದರು. ನನ್ನ ಶೀಲದ ಮೇಲೆಯೇ ಅನುಮಾನಿಸಿದರು. 'ಯಾವನ ಜೊತೆ ಇದ್ದೆ ಹೇಳು' ಎಂದು ಹೊಡೆದರು. 'ನಿನ್ನ ಹೊಟ್ಟೆಯಲ್ಲಿರುವ ಮಗು ಯಾರದ್ದು, ಯಾರಿಗೆ ಹುಟ್ಟುತ್ತಿರುವುದು' ಎಂದೆಲ್ಲಾ ಅವಾಚ್ಯ ಮಾತುಗಳಿಂದ ನನ್ನನ್ನು ದೂಷಿಸಿದರು. ಇದನ್ನೆಲ್ಲಾ ಕೇಳಿಸಿಕೊಂಡು ಇರಲಾರದೆ ಸಾಯುವ ಯೋಚನೆ ಮಾಡಿದ ನನಗೆ ನನ್ನ ತಂದೆ ನೆರವಾದರು. ಬದುಕುವ ಚೈತನ್ಯ ತುಂಬಿದರು. ಈಗಲೂ ನಾನು ಬದುಕಿರುವುದು ನನ್ನ ತಂದೆ ಹಾಗೂ ಮಗಳಿಗಾಗಿ ಅಷ್ಟೇ ಮೇಡಂ" ಎಂದರು.

ಹೆಚ್.ಐ.ವಿ. ಸೋಂಕು ಹೊಂದಿದ ರೋಗಿಗಳು ಧೈರ್ಯ ತೆಗೆದು ಕೊಳ್ಳಬೇಕು. ಎಷ್ಟೋ ಹೆಣ್ಣುಮಕ್ಕಳು ತಮ್ಮದಲ್ಲದ ತಪ್ಪಿಗೆ ಈ ಸೋಂಕನ್ನು ಅಂಟಿಸಿಕೊಂಡು ಬದುಕುತ್ತಿದ್ದಾರೆ. ಅವರೆಲ್ಲರೂ ಸಾಯುವ ಯೋಚನೆ ಮಾಡದೆ ಬದುಕುವ ಚೈತನ್ಯವನ್ನು ತುಂಬಿಕೊಳ್ಳಬೇಕು. ಸೋಂಕು ಹರಡುವವರ ವಿರುದ್ಧ ನಿಂತು ಹೋರಾಟ ಮಾಡಬೇಕು. ಅವರಿಗೆ ತಕ್ಕ ಶಿಕ್ಷೆಯನ್ನು ನಾವೇ ಕೊಡಬೇಕು. ಅವರ ಮುಂದೆ ಹೆಚ್ಚು ಕಾಲ ಆರೋಗ್ಯವಂತರಾಗಿ ಬದುಕಿ ತೋರಿಸಬೇಕು. ಸೋಂಕಿನ ಬಗೆಗೆ ಜಾಗೃತಿ ಮೂಡಿಸಲು ಪ್ರಯತ್ನಪಡಬೇಕು. ತಾಯಿಯಾದವರು ಮಕ್ಕಳ ಭವಿಷ್ಯವನ್ನು ಕಟ್ಟುವವರು. ಆದರೆ ಪದ್ಮರವರ ವಿಷಯದಲ್ಲಿ ಇದು ಸುಳ್ಳಾಗಿದೆ. ಮಗಳನ್ನು ಬೇಕೆಂತಲೇ ತಾಯಿ ಕತ್ತಲೆಗೆ ತಳ್ಳಿದ್ದಾರೆ. ಇಲ್ಲಿ ವಿವಾಹವು ವೈಯಕ್ತಿಕ ಪ್ರಶ್ನೆಯಾಗಿರಲಿಲ್ಲ. ಪದ್ಮಳನ್ನು ಒಂದು ಮಾತೂ ಕೇಳದೆ ತಾಯಿ ತನ್ನ ತಮ್ಮನಿಗೆ ವಿವಾಹ ಮಾಡಿದರು. ವಿವಾಹದ ವಿಷಯ ಬಂದಾಗ ಹೆಣ್ಣಿಗೆ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವೂ ಇಲ್ಲದಿರುವುದು ಈ ಪ್ರಕರಣದಿಂದ ತಿಳಿದುಬರುತ್ತದೆ.

(ಮುಂದುವರಿಯುವುದು)



ಜೆಂಡರ್ ಅಸಮಾನತೆಯ ಬಹುಮುಖಗಳು

■ ಡಾ. ಬಿ.ಎಸ್. ಸುಮಿತ್ರಾಬಾಯಿ

ನೊಬೆಲ್ ಪ್ರಶಸ್ತಿ ವಿಜೇತ ಡಾ. ಅಮರ್ತ್ಯಸೇನ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನೀಡಿದ ಒಂದು ಉಪನ್ಯಾಸವನ್ನು ಆಧರಿಸಿ ಶಂಕರ್‌ಚಕ್ರವರ್ತಿಯವರು Frontline ಪತ್ರಿಕೆಗೆ (Vol. 18, issue 22, ಅಕ್ಟೋಬರ್ 27, ನವೆಂಬರ್ 9, 2001) ಬರೆದಂಥ ಲೇಖನದ ಸಾರಾನುವಾದ ಇದು. ಅಭಿವೃದ್ಧಿಯ ಇಡೀ ಪ್ರಕ್ರಿಯೆಯಲ್ಲಿ ಇರುವ ಮಹಿಳೆಯರ ವಿರುದ್ಧವಾದ ತಾರತಮ್ಯ, ಸಾಮಾಜಿಕ ತಾರತಮ್ಯದ (ಜಾತಿ, ವರ್ಗ ಮುಂತಾದ) ಪದ್ಧತಿಗಳಲ್ಲಿ ಪುರುಷ–ಸ್ತ್ರೀಯರ ನಡುವಿನ ಅಂತರಗಳು ಹಾಗೂ ಸಾಮಾಜಿಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳಾ ಏಜೆನ್ಸಿಯನ್ನು ಕುರಿತಂತೆ ವಿಶೇಷವಾಗಿ ಅಧ್ಯಯನ, ಸಂಶೋಧನೆಗಳನ್ನು ಅಮರ್ತ್ಯಸೇನ್ ನಡೆಸಿದ್ದಾರೆ. ಅವರು Jean Drze ಎಂಬ ಸಹೋದ್ಯೋಗಿಯ ಸಹಯೋಗದೊಂದಿಗೆ ಪ್ರತಿಪಾದಿಸಿರುವ 'Missing women' ಎಂಬ ಪರಿಕಲ್ಪನೆ ತುಂಬ ಜನಪ್ರಿಯತೆ ಪಡೆದಿದೆ. ಅಮರ್ತ್ಯಸೇನ್ ನಿರ್ವಚನವೆಂದರೆ "ಗೃಹಕುಟುಂಬ ತಾರತಮ್ಯರಹಿತವಾದ ಏಕ ಘಟಕವಲ್ಲ, ಬದಲಾಗಿ ಅದು ಸಹಕಾರ ಮತ್ತು ತಾರತಮ್ಯಗಳಿರುವ ಒಂದು ಘಟಕವಾಗಿದೆ."

1870ರಲ್ಲಿ ರಾಣಿ ವಿಕ್ಟೋರಿಯಾ ಅವರು ಸರ್ ಥಿಯೋಡರ್ ಮಾರ್ಟಿನ್‌ಗೆ ಬರೆದ ಪತ್ರದಲ್ಲಿ 'ಮಹಿಳಾ ಹಕ್ಕುಗಳು' ಎಂಬ ಹುಚ್ಚುತನದ ವಿನಾಶಕಾರಿ ಲಕ್ಷಣವನ್ನು ಪ್ರಸ್ತಾಪಿಸಿದ್ದಳು. ಮಹಿಳೆಯರ ಹಕ್ಕುಗಳನ್ನು ಒಪ್ಪುವುದರಿಂದ ದೊರಕಬಹುದಾದ ಸುರಕ್ಷತೆಗಳ ಯಾವ ಅವಶ್ಯಕತೆಯೂ ಆ ಭಯಂಕರ ಸಾಮ್ರಾಜ್ಞಿಗೆ ಖಂಡಿತವಾಗಿ ಇರಲಿಕ್ಕಿಲ್ಲ. 1899ರಲ್ಲಿ ತನ್ನ 89ನೆಯ ವಯಸ್ಸಿನಲ್ಲೂ ಆಕೆ ಎ.ಜೆ. ಬಾಲ್‌ಫೋರ್‌ನಿಗೆ "(ಮಹಿಳೆಯರ) ಅಂಥ ಸಮಸ್ಯೆಗಳಾವುವೂ ಅಸ್ತಿತ್ವದಲ್ಲೇ ಇಲ್ಲ. ಅದಕ್ಕಾಗಿ ಸೋಲಬಹುದಾದ ಸಾಧ್ಯತೆಗಳಲ್ಲಿ ನಾವು ಆಸಕ್ತಿ ಹೊಂದಿಯೂ ಇಲ್ಲ" ಎಂದೇ ಬರೆದಿದ್ದಂಥವಳು. ಆದರೆ ವಿಕ್ಟೋರಿಯಾ ರಾಣಿಯ ರೀತಿಯಲ್ಲಿ ಎಲ್ಲ ಮಹಿಳೆಯರ ಬದುಕುಗಳೂ ನಡೆಯುವುದಿಲ್ಲ. ನಾನಾ ಬಗೆಯ ಸಂಕಟಗಳು, ದುರವಸ್ಥೆಗಳು ಹೆಜ್ಜೆ ಹೆಜ್ಜೆಗೂ ಅವರನ್ನು ನಿರ್ಜೀವಗೊಳಿಸುತ್ತಿರುತ್ತವೆ, ಸೋಲುವಂತೆ ಮಾಡುತ್ತವೆ. ಒಂದೊಂದು ರಾಷ್ಟ್ರೀಯತೆ, ವರ್ಗದ ಒಳಗೂ ಕಷ್ಟಗಳ ಹೊರೆಗಳು ವಿಪರೀತ ಪ್ರಮಾಣದಲ್ಲಿ ಮಹಿಳೆಯರ ಮೇಲೇ ಹೊರಿಸಲ್ಪಡುತ್ತವೆ. ನಾವು ಬದುಕಿರುವ ಈ ದುಃಖ ತುಂಬಿದ ಜಗತ್ತಿನಲ್ಲಿ ಕಷ್ಟ ಮತ್ತು ತೊಂದರೆಗಳ ಹೊರೆಯನ್ನು ಹೆಣ್ಣು–ಗಂಡುಗಳ ನಡುವೆ ಗಾಢವಾದ ಅಸಮಾನತೆಯೊಂದಿಗೆ ಹಂಚಿರುವುದೇ ಪ್ರಮುಖ ಲಕ್ಷಣವಾಗಿದೆ. ಜೆಂಡರ್ ಅಸಮಾನತೆ ಜಗತ್ತಿನ ಬಹುತೇಕ ಭೂಭಾಗಗಳಲ್ಲಿದೆ – ಜಪಾನಿನಿಂದ ಮೊರಾಕ್ಕೋವರೆಗೆ, ಉಜ್‌ಬೆಕಿಸ್ತಾನದಿಂದ ಅಮೆರಿಕಾ ಸಂಯುಕ್ತ ಸಂಸ್ಥಾನಗಳವರೆಗೆ, ಆದರೆ ಮಹಿಳೆಯರು ಮತ್ತು ಪುರುಷರ ನಡುವಿನ ಅಸಮಾನತೆಗಳು ತುಂಬ ವೈವಿಧ್ಯಮಯ ರೂಪಗಳನ್ನು ಧರಿಸಿರಬಲ್ಲವು. ಆದ್ದರಿಂದ ಜೆಂಡರ್ ಅಸಮಾನತೆ ಎಂಬುದು ಎಲ್ಲಾ ಕಡೆಯೂ ಒಂದೇ ರೂಪದ್ದಾದ ವಿದ್ಯಮಾನವಲ್ಲ. ಬದಲಾಗಿ, ಅದು ತೀರಾ ಬೇರೆ ಬೇರೆಯಾಗಿದ್ದರೂ ಒಳಕೊಂಡಿಗಳುಳ್ಳ ಸಮಸ್ಯೆಗಳ ಒಂದು ಸಂಕಲನವಾಗಿರುತ್ತದೆ.

ಈ ಬಹುರೂಪದ ಜೆಂಡರ್ ಅಸಮಾನತೆಗಳನ್ನು ಏಳು ವಿಭಾಗಗಳ ಅಡಿಯಲ್ಲಿ ಈ ಕೆಳಕಂಡಂತೆ ವಿಭಜಿಸಬಹುದು:

1. ಮರಣ ಸಂಖ್ಯಾ ಪ್ರಮಾಣದ ಅಸಮತೆ, 2. ಜನನ ಸಂಖ್ಯಾ ಪ್ರಮಾಣದ ಅಸಮಾನತೆ, 3. ಮೂಲ ಸೌಕರ್ಯಗಳಲ್ಲಿರುವ ಅಸಮಾನತೆ, 4. ವಿಶೇಷ ಅವಕಾಶಗಳ ಅಸಮಾನತೆ, 5. ವೃತ್ತಿ ಸಂಬಂಧಿತ ಅಸಮಾನತೆ, 6. ಒಡೆತನದಲ್ಲಿರುವ ಅಸಮಾನತೆ ಮತ್ತು 7. ಕುಟುಂಬವಾಳ್ತೆಯ ಅಸಮಾನತೆ.

ಈ ಅಸಮಾನತೆಗಳ ವಿವಿಧ ಸ್ವರೂಪಗಳನ್ನು ವಿವರವಾಗಿ ಪರಿಶೀಲಿಸಬಹುದು.

1. ಮರಣಸಂಖ್ಯಾ ಪ್ರಮಾಣದ ಅಸಮಾನತೆ : ಮರಣ ಸಂಖ್ಯೆಯ ಪ್ರಮಾಣದಲ್ಲಿ ಪುರುಷರದಕ್ಕಿಂತ ಮಹಿಳೆಯರದೇ ಹೆಚ್ಚಾಗಿ ಇರುವ ಪಶುತ್ವದ ಕ್ರೌರ್ಯದ ಸ್ಥಿತಿ ಜಗತ್ತಿನ ಅನೇಕ ಭೂಭಾಗಗಳಲ್ಲಿದೆ. ಹೀಗಾಗಿ ಅಂಥ ಕಡೆಗಳಲ್ಲಿ ಪುರುಷರ ಜನಸಂಖ್ಯೆಯೇ ದೊಡ್ಡ ಪ್ರಮಾಣದಲ್ಲಿರುತ್ತದೆ. ಲಿಂಗತಾರತಮ್ಯದ ಸುಳಿವೇ ಇಲ್ಲದಂಥ ಸಮಾಜಗಳಲ್ಲಿ ಮಾತ್ರ ಹೀಗೆ ಮರಣ ಸಂಖ್ಯಾ ಪ್ರಮಾಣದಲ್ಲಿ ಅಂತರವಿರುವುದಿಲ್ಲ. ಆರೋಗ್ಯರಕ್ಷಣೆ ಬಗ್ಗೆ ನಿರ್ಲಕ್ಷ್ಯ, ಪೌಷ್ಠಿಕಾಂಶಗಳ ಅಭಾವಗಳಿಂದ ಮರಣ ಸಂಭವಿಸುವ ರೀತಿಯ ಜೆಂಡರ್ ಅಸಮಾನತೆಗಳು ಉತ್ತರ ಆಫ್ರಿಕಾ ಪೂರ್ವ ಏಷ್ಯಾ, ಚೈನಾ ಮತ್ತು ದಕ್ಷಿಣಏಷ್ಯಾದ ದೇಶಗಳಲ್ಲಿ ಅತಿ ಹೆಚ್ಚಾಗಿವೆ.

2. ಜನನ ಸಂಖ್ಯಾ ಪ್ರಮಾಣದ ಅಸಮಾನತೆ : ಹುಟ್ಟು ಮಗು ಯಾವುದಿರಬೇಕು ಎಂಬ ಆಯ್ಕೆಗೆ ಅವಕಾಶವಿರುವಾಗ ಪುರುಷ ಪ್ರಧಾನ ಸಮಾಜಗಳಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೆ ಆದ್ಯತೆ ಇರುತ್ತದೆ. ಹಿಂದೊಂದು ಕಾಲದಲ್ಲಿ ಇದು ಬರಿಯ ಅಪೇಕ್ಷೆಯ ಮಟ್ಟದಲ್ಲಿ (ಕನಸು ಹಳವಂಡದ ರೀತಿಯಲ್ಲಿ) ಇತ್ತು. ಆದರೆ ಆಧುನಿಕ ತಂತ್ರಜ್ಞಾನದ ನೆರವಿನಿಂದ ಭ್ರೂಣದ ಲಿಂಗಪರೀಕ್ಷೆ ಸಾಧ್ಯವಾದ ಬಳಿಕ, ಲಿಂಗದ ಆಯ್ಕೆಗಾಗಿ ಗರ್ಭಪಾತ ನಡೆಸುವುದು ಅನೇಕ ದೇಶಗಳಲ್ಲಿ ತೀರಾ ಸಾಮಾನ್ಯವಾಗಿದೆ. ಪೂರ್ವ ಏಷ್ಯಾದಲ್ಲಿ, ಚೈನಾ ಮತ್ತು ದಕ್ಷಿಣ ಕೊರಿಯಾಗಳಲ್ಲಿ ಈ ಬಗೆಯ ಕ್ರೌರ್ಯ ತೀವ್ರಪ್ರಮಾಣದಲ್ಲಿ ಆಚರಣೆಯಲ್ಲಿದೆ. ಸಿಂಗಾಪುರ, ತೈವಾನ್‌ಗಳಲ್ಲೂ ಹೆಣ್ಣು–ಭ್ರೂಣ ಗರ್ಭಪಾತದ ಅಂಕಿ ಅಂಶಗಳು ಎದ್ದು ಕಾಣುವಷ್ಟು ಪ್ರಮಾಣದಲ್ಲಿವೆ. ಭಾರತ ಹಾಗೂ ದಕ್ಷಿಣ ಏಷ್ಯಾ ದೇಶಗಳಲ್ಲಿ ಇದೀಗ ತೀವ್ರತೆ ಪಡೆಯುತ್ತಿದ್ದು ಇದನ್ನು 'High tech sexism' ಎನ್ನಬಹುದು.

3. ಮೂಲ ಸೌಕರ್ಯಗಳ ಸಂಬಂಧದ ಅಸಮಾನತೆ : ಶಿಶುಗಳ ಜನನ–ಮರಣ ಸಂಖ್ಯೆಗಳಲ್ಲಿ ಗಣನೀಯವಾದ ಲಿಂಗಪಕ್ಷಪಾತವು ಕಂಡುಬರದಿದ್ದಾಗಲೂ ಮಹಿಳೆಯರ ವಿಷಯದಲ್ಲಿ ತಾರತಮ್ಯವನ್ನು ಆಚರಿಸುವ ಹಲವಾರು ವಿಧಾನಗಳಿರುತ್ತವೆ. ಇಡೀ ಪ್ರಪಂಚದಲ್ಲಿ ಆಫ್‌ಘಾನಿಸ್ತಾನವೊಂದೇ ಹುಡುಗಿಯರನ್ನು ಶಾಲೆಗೆ ಕಳುಹಿಸಲೇಬಾರದು ಎಂದು ಕಡ್ಡಾಯಶಾಸನ ಮಾಡಿರುವ ದೇಶವಾಗಿದೆ. ಬೃಹತ್ ಪ್ರಮಾಣದ ಜೆಂಡರ್ ಅಸಮಾನತೆಯ ಒಳಕ್ಕೇ ಇದೂ ಸೇರುತ್ತದೆ. ಏಷ್ಯಾ ಹಾಗೂ ಆಫ್ರಿಕಾ ಖಂಡಗಳ ಅನೇಕ ದೇಶಗಳಲ್ಲೂ ಲ್ಯಾಟಿನ್ ಅಮೆರಿಕಾದಲ್ಲೂ ಹೆಣ್ಣುಮಕ್ಕಳಿಗೆ ಶಾಲಾಶಿಕ್ಷಣಕ್ಕೆ ಅವಕಾಶಗಳು ಹುಡುಗರಿಗೆ ಇರುವುದಕ್ಕಿಂತಲೂ ಕಡಿಮೆಯಿರುವುದರ ಹೇರಳ ನಿದರ್ಶನಗಳು ದೊರೆಯುತ್ತವೆ. ಮಹಿಳೆಯರಿಗೆ ದೊರಕಬೇಕಾದ ಇನ್ನಿತರ ಮೂಲ ಸೌಕರ್ಯಗಳಲ್ಲೂ ಕೊರತೆಯಿದ್ದು, ಅವರು ತಮ್ಮ ಸ್ವಂತ, ಸಹಜ ಪ್ರತಿಭೆಯನ್ನು ಬೆಳೆಸಿಕೊಳ್ಳಲು ನೀಡುವ ಪ್ರೋತ್ಸಾಹದಿಂದ ಹಿಡಿದು ಸಮುದಾಯದ ಸಾಮಾಜಿಕವಾದ ಪಾಲ್ಗೊಳ್ಳುವಿಕೆಗಾಗಿ ಪ್ರಶಸ್ತಿ, ಪುರಸ್ಕಾರ, ನೀಡುವವರೆಗೂ ಈ ಬಗೆಯ ಲಿಂಗತಾರತಮ್ಯಗಳು ಹರಡಿಕೊಂಡಿರುತ್ತವೆ.

4. ವಿಶೇಷಾವಕಾಶಗಳಲ್ಲಿರುವ ಅಸಮಾನತೆ : ಶಾಲೆಗೆ ಕಳುಹಿಸುವುದರ ರೀತಿಯ ಮೂಲ–ಸೌಕರ್ಯಗಳಲ್ಲಿ ಹೆಚ್ಚು ಅಂತರ ಇಲ್ಲದಿರುವ ಸಮಾಜಗಳಲ್ಲೂ ಉನ್ನತ ಶಿಕ್ಷಣಕ್ಕೆ ಅವಕಾಶ ದೊರಕುವುದು ಕೇವಲ ಯುವಕರಿಗೇ ಹೆಚ್ಚಿರುವುದೇ ಹೊರತು ಯುವತಿಯರಿಗಲ್ಲ. ಉನ್ನತ ಶಿಕ್ಷಣ ಮತ್ತು ವೃತ್ತಿ ತರಬೇತಿಗಳ ಕ್ಷೇತ್ರಗಳಲ್ಲಿ ಜೆಂಡರ್ ಪಕ್ಷಪಾತ ಇರುವುದನ್ನು ಜಗತ್ತಿನ ಅತಿ ಶ್ರೀಮಂತ ದೇಶಗಳುಳ್ಳ ಯುರೋಪು ಹಾಗೂ ಉತ್ತರ ಅಮೆರಿಕಾ ಖಂಡಗಳಲ್ಲೂ ಕಾಣಬಹುದು.

ಪುರುಷರ 'ಕ್ಷೇತ್ರ' ಮತ್ತು ಮಹಿಳೆಯರ 'ಕ್ಷೇತ್ರ'ಗಳು ಬೇರೆ ಬೇರೆ ಎಂಬ ಅತ್ಯಂತ ಅಸಮಂಜಸ ಪೂರ್ವಗ್ರಹವು ಈ ವಿಶೇಷ ಸೌಕರ್ಯಗಳಲ್ಲಿನ ಅಸಮಾನತೆಗೆ ಮೂಲವಾಗಿರುತ್ತದೆ.

ಮೇರಿ ವಾಲ್‌ಸ್ಟೋನ್ ಕ್ರಾಫ್ಟ್ ತನ್ನ 'A vindication of rights of women' ಎಂಬ ಪ್ರಖ್ಯಾತ ಗ್ರಂಥದಲ್ಲಿ 1766ರಲ್ಲಿ ರೆವರೆಂಡ್ ಜೇಮ್ಸ್ ಫೋರ್ಡ್ಯಾಯೀ ಯುವತಿಯರಿಗೆಂದು ನೀಡಿದ ಉಪದೇಶದ ನುಡಿಗಳಲ್ಲಿ "ನೀವೂ ಬಂದು ನಮ್ಮ ಪುರುಷರ ಕ್ಷೇತ್ರವನ್ನು ಆಕ್ರಮಿಸುವುದರ ಪರವಾಗಿ ವಾದ ಹೂಡುವ ರೀತಿಯ ಗಂಡುಬೀರಿ ಮಹಿಳೆಯರ ಬಗ್ಗೆ ಎಚ್ಚರವಹಿಸಲು" ಹೇಳಿರುವುದನ್ನು ಉಲ್ಲೇಖಿಸಿರುತ್ತಾಳೆ. ಪುರುಷರ ಕ್ಷೇತ್ರವೆಂದರೆ "ಯುದ್ಧ" ಮಾತ್ರವೇ ಅಲ್ಲ; ವಾಣಿಜ್ಯ, ರಾಜಕೀಯ, ದೇಹಬಲ ಹಾಗೂ ಕೈಚಳಕಗಳ ಬಳಕೆ, ಅಮೂರ್ತ ಚಿಂತನೆಯಾದ ತತ್ತ್ವಶಾಸ್ತ್ರ ಹಾಗೂ ಎಲ್ಲಾ ರೀತಿಯ ವಿಜ್ಞಾನಗಳೂ ಸೇರಿರುತ್ತವೆಂದು ಆ ಬಿಷಪ್ ಸೂಚಿಸುತ್ತಾನೆ. ಗಂಡಸರು ಮತ್ತು ಹೆಂಗಸರ ಕಾರ್ಯಕ್ಷೇತ್ರಗಳ ಭಿನ್ನತೆಯ ಬಗ್ಗೆ ಇಷ್ಟು ಕರಾರುವಕ್ಕಾಗಿ ವಿಭಜನೆ ಇಂದು ಅಪರೂಪದ್ದಾದರೂ ವ್ಯಾಪಕವಾಗಿ ಅಸ್ತಿತ್ವದಲ್ಲಿರುವ ಜೆಂಡರ್ ಅಸಮಾನತೆಯನ್ನು ಯುರೋಪು ಹಾಗೂ ಉತ್ತರ ಅಮೇರಿಕಾಗಳಲ್ಲಿ ಶಿಕ್ಷಣ, ತರಬೇತಿ, ವೃತ್ತಿ ಸಂಬಂಧಿತ ಕ್ಷೇತ್ರಗಳಲ್ಲಿ ಇಂದಿಗೂ ಸ್ಪಷ್ಟವಾಗಿ ಕಾಣಬಹುದಾಗಿದೆ.

5. ಉದ್ಯೋಗ/ವೃತ್ತಿ ಸಂಬಂಧಿತ ಅಸಮಾನತೆ : ಉದ್ಯೋಗ ಹಾಗೂ ಮುಂಬಡ್ತಿ, ವೃತ್ತಿಗಳ ಸಂಬಂಧದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಪ್ರತಿಬಂಧಕಗಳನ್ನು ಅನುಭವಿಸುತ್ತಾರೆ. ಜಪಾನಿನಂಥ ದೇಶದಲ್ಲಿ ಮರಣ ಸಂಖ್ಯಾ ಪ್ರಮಾಣ ಮತ್ತು ಮೂಲ ಸೌಕರ್ಯಗಳ ವಿಷಯದಲ್ಲಿ ಸಾಕಷ್ಟು ಸಮಾನತೆಯನ್ನು ಸಾಧಿಸಿದ್ದರೂ ಉನ್ನತ ಶಿಕ್ಷಣದಲ್ಲಿ ಅದಕ್ಕಿಂತ ಹೆಚ್ಚಾಗಿ ಉನ್ನತ ಔದ್ಯೋಗಿಕ ಸ್ಥಾನಮಾನಗಳಲ್ಲಿ ಅಂತಹ ಪ್ರತಿಷ್ಠಿತ ವೃತ್ತಿಗಳೆಲ್ಲ ಮಹಿಳೆಯರಿಗೆ ಸಮಸ್ಯಾತ್ಮಕವೇ ಆಗಿರುತ್ತವೆ.

ಬಿ.ಬಿ.ಸಿ. ದೂರದರ್ಶನದ ಜನಪ್ರಿಯ ಧಾರಾವಾಹಿಯಾದ 'Yes Minister' ನಲ್ಲಿ ಮಂತ್ರಿಯು ಸಮಾಜ ಸುಧಾರಕ ಉತ್ಸಾಹದಿಂದ ತನಗೆ ಶಾಶ್ವತವಾದ ಮಹಿಳಾ ಕಾರ್ಯದರ್ಶಿ ಒಬ್ಬಳನ್ನು ಹುಡುಕಲು ಯತ್ನಿಸುತ್ತಾನೆ. ಸರ್ ಹಂಫ್ರೆಯ ಬಳಿ 'ಎಷ್ಟು ಮಂದಿ ಮಹಿಳೆಯರು ಬ್ರಿಟಿಷ್ ನಾಗರಿಕಸೇವೆಯ ಉನ್ನತ ಹುದ್ದೆಗಳಲ್ಲಿ ಇದ್ದಾರೆ? ಎಂದು ಪ್ರಶ್ನಿಸುತ್ತಾನೆ. ಸರ್ ಹಂಫ್ರಿ ಖಚಿತವಾದ ಅಂಕಿ ಅಂಶ ಹೇಳಲು ತುಂಬ ಕಷ್ಟಪಡುತ್ತಾನೆ. ಏಕೆಂದರೆ ಅದಕ್ಕಾಗಿ ದೊಡ್ಡ ತನಿಖೆ ಅವಶ್ಯಕವಿರುತ್ತದೆ. ಆದರೂ ಬಿಡದೆ ಮಂತ್ರಿಯು ಒತ್ತಾಯಿಸುತ್ತಾ ಸುಮಾರು ಎಷ್ಟು ಸ್ತ್ರೀಯರು ಹಿರಿಯ ಹುದ್ದೆಗಳಲ್ಲಿದ್ದಾರೆ ಎಂದು ತಿಳಿಯಲು ಅಪೇಕ್ಷಿಸುತ್ತಾನೆ. ಸರ್ ಹಂಫ್ರಿ ಹೇಳುವ ಉತ್ತರ "ಸರಿಸುಮಾರಾಗಿ ಒಬ್ಬರೂ ಇಲ್ಲ" ಎಂಬುದು!

6. ಒಡೆತನದ ಅಸಮಾನತೆ : ಅನೇಕ ಸಮಾಜಗಳಲ್ಲಿ ಆಸ್ತಿ ಒಡೆತನವೂ ತುಂಬ ತಾರತಮ್ಯದ್ದಾಗಿರುತ್ತದೆ. ಮೂಲ ಅವಶ್ಯಕತೆಗಳಾದ ಆಸ್ತಿಗಳು, ಮನೆ, ಭೂಮಿ ಮುಂತಾದವುಗಳ ಹಂಚಿಕೆ ಪುರುಷ-ಮಹಿಳೆಯರ ನಡುವೆ ಅಸಮ ರೀತಿಯದೇ ಆಗಿರುತ್ತದೆ. ಆಸ್ತಿ ಒಡೆತನದ ಹಕ್ಕೊತ್ತಾಯದ ಅಭಾವವು ಮಹಿಳೆಯರನ್ನು ಧ್ವನಿ ಎತ್ತದಂತೆ ಮಾಡಬಲ್ಲುದು. ಆಸ್ತಿ ಒಡೆತನವಿಲ್ಲದ್ದರಿಂದ ವಾಣಿಜ್ಯ, ಆರ್ಥಿಕ ಹಾಗೂ ಹಲವು ರೀತಿಯ ಸಾಮಾಜಿಕ ಕಾರ್ಯಕ್ಷೇತ್ರಗಳಿಗೆ ಪ್ರವೇಶಿಸಲು, ಅಲ್ಲಿ ಲಾಭ-ಸಮೃದ್ಧಿಯನ್ನು ಗಳಿಸಿಕೊಳ್ಳಲು ಮಹಿಳೆಯರಿಗೆ ಕಷ್ಟವಿರುತ್ತದೆ. ಜಗತ್ತಿನ ಅನೇಕ ದೇಶಗಳಲ್ಲಿ ಇಂಥ ಅಸಮಾನತೆಗಳಿದ್ದು ಸ್ಥಳೀಯವಾಗಿ ಈ ಅಸಮಾನತೆಗಳ ಸ್ವರೂಪಗಳಲ್ಲಿ ವಿವಿಧ ರೀತಿಯ ವ್ಯತ್ಯಾಸಗಳಿರುತ್ತವೆ. ಉದಾ: ಭಾರತದಲ್ಲಿ ದೊಡ್ಡ ಪ್ರಮಾಣದ ಆಸ್ತಿ ಹಕ್ಕೆಲ್ಲ ಗಂಡಸರದೇ ಎಂದು ಪರಂಪರಾಗತವಾಗಿ ಒಪ್ಪಿದ್ದರೂ, ಕೇರಳರಾಜ್ಯದಲ್ಲಿ ಬಹುದೀರ್ಘಕಾಲದಿಂದಲೂ ಮಾತೃಮೂಲೀಯ ಆಸ್ತಿ ಉತ್ತರಾಧಿಕಾರವನ್ನು ಒಪ್ಪಿ ಪಾಲಿಸುತ್ತಿರುವ ಪ್ರಭಾವಶಾಲಿ ನಾಯರ್‌ಗಳ ಸಮುದಾಯವೂ ಇದೆ ಎಂಬುದನ್ನು ಗಮನಿಸಬೇಕು.

7. ಕೌಟುಂಬಿಕವಾದ ಅಸಮಾನತೆಗಳು : ಕೌಟುಂಬಿಕವಾಗಿ ಜೆಂಡರ್ ಸಂಬಂಧಗಳಲ್ಲಿ ಆಂತರಿಕ ಅಸಮಾನತೆಗಳು ಬೇರೂರಿರುತ್ತವೆ. ಅವು ಹಲವಾರು ರೂಪಗಳನ್ನು ತಳೆಯಬಲ್ಲವು. ಸ್ಪಷ್ಟವಾದ ಸ್ತ್ರೀವಿರೋಧ ಕಾಣಬರದ ಜಾಗಗಳಲ್ಲೂ ಶಿಕ್ಷಣದಲ್ಲಿ ಆದ್ಯತೆಯಿಂದ ಹಿಡಿದು ಉನ್ನತ ಕಾರ್ಯನಿರ್ವಾಹಕ ಸ್ಥಾನಗಳವರೆಗೂ ಅಸಮಾನತೆ ಇರಬಲ್ಲದು. ಬದುಕುಳಿಯುವುದಕ್ಕಾಗಿಯೇ ಹೋರಾಟ, ಗಂಡು ಸಂತಾನದ ಹಂಬಲ, ಗಂಡುಮಕ್ಕಳಿಗೇ ಶಿಕ್ಷಣ, ಮನೆಯ ಜವಾಬ್ದಾರಿಯುತ ಕಾರ್ಯನಿರ್ವಹಣೆಯ ಹಕ್ಕು, ಮನೆಗೆಲಸ ಮತ್ತಿತರ ಶ್ರಮಬೇಡುವ ಹೊಣೆಗಳ ಹೊರೆ ಹಂಚಿಕೆಯ ಬಗ್ಗೆ ಮಕ್ಕಳಪಾಲನೆ, ಪೋಷಣೆಯ ಜವಾಬ್ದಾರಿ ಇವೆಲ್ಲದರಲ್ಲೂ ಜೆಂಡರ್ ಅಸಮಾನತೆ ಸದಾ ಕೆಲಸಮಾಡುತ್ತಿರುತ್ತದೆ. ಬಹುತೇಕ ಸಮಾಜಗಳಲ್ಲಿ ಮನೆಯ ಹೊರಗಿನ ಕೆಲಸಗಳನ್ನು ಗಂಡಸರು ನಿರ್ವಹಿಸುವುದೇ ಸಹಜವೆನಿಸಿರುತ್ತದೆ. ಹೆಂಗಸರು ಅವುಗಳನ್ನು ಮಾಡಲು ಬಯಸಿದರೂ, ಮನೆಯೊಳಗಿನ ಅನಿವಾರ್ಯ ಗೃಹಕೃತ್ಯಗಳನ್ನು ನಿರ್ವಹಿಸುವುದರ ಜೊತೆಗೇ ಹೊರಗೆಲಸದ ಹೊಣೆಯನ್ನೂ ಹೊರಲು ಸಿದ್ಧರಾದರೆ ಮಾತ್ರ ಹೊರಗೆಲಸ ಮಾಡಲಿಕ್ಕೆ ಅವರೂ ಯತ್ನಿಸಬಹುದೆಂಬ ನಂಬಿಕೆಯೇ ಬಲವಾಗಿರುತ್ತದೆ. ಅಸಮಾನ ಹಂಚಿಕೆಯುಳ್ಳ ಗೃಹಕೃತ್ಯದ ದುಡಿಮೆಯ ಜೊತೆಗೇ ಹೇರಿಸಿದ ಹೆಚ್ಚುವರಿ ಹೊರೆ ಎಂದು ಸ್ತ್ರೀಯರು ಗೊಣಗಾಡದೆ ಗೃಹಕಾರ್ಯದ ದುಡಿಮೆಯನ್ನು ನೈಸರ್ಗಿಕವೆಂದು ನಿಭಾಯಿಸಿದರೆ ಮಾತ್ರವೇ ಅವರ ಹೊರದುಡಿಮೆ ಕ್ಷಮ್ಯವೆನಿಸುತ್ತದೆ!

ಶ್ರಮವಿಭಜನೆಯ ಈ ಜೆಂಡರ್ ಆಧರಿತ ವ್ಯವಸ್ಥೆಯು ವೃತ್ತಿಜೀವನದ ವಿವಿಧ ವರ್ತುಲಗಳ ಬಗೆಗಿನ ಜ್ಞಾನ, ಅನುಭವ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯದ ಮೇಲೆ ದೂರಗಾಮಿ ಪರಿಣಾಮಬೀರಿರುತ್ತದೆ. 1970ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಪೌಷ್ಟಿಕತೆಯನ್ನು ಕುರಿತಂಥ ಒಂದು ಗ್ರಂಥವನ್ನು ಪ್ರಕಟಿಸಲು ಮುಂದಾಗಿತ್ತು. ಆ ಪುಸ್ತಕದಲ್ಲಿ ಯಾವ ಯಾವ ವೃತ್ತಿನಿರ್ವಹಣೆಗೆ ಎಷ್ಟೆಷ್ಟು ಕ್ಯಾಲರಿ ಶಕ್ತಿ ಅವಶ್ಯಕ ಎಂಬುದನ್ನು ಹೇಳುವಾಗ 'ಗೃಹಕೃತ್ಯ' ಎಂಬುದನ್ನು ಕುಳಿತೇ ನಿರ್ವಹಿಸುವ ದೇಹಶ್ರಮ ಹೆಚ್ಚು ಬೇಕಿಲ್ಲದ ಚಟುವಟಿಕೆ ಎಂದು ಪರಿಗಣಿಸಿತ್ತು. ಮನೆಗೆಲಸಗಳಿಗೆ ಅತ್ಯಂತ ಅಲ್ಪಶಕ್ತಿಯ ವ್ಯಯವಾಗುವುದೆಂದು WHO ಭಾವಿಸಿದ್ದುದು ಅತ್ಯಂತ ಆಶ್ಚರ್ಯದ ವಿಷಯವೇ ಸರಿ. ಸಮಾಜದ ಶ್ರೀಮಂತ ಮಂದಿ ಎಲ್ಲಿಂದ ಮತ್ತು ಹೇಗೆ ಇಂತಹ ಮಾಹಿತಿಯನ್ನು ಸಂಗ್ರಹಿಸಿದ್ದರೆಂಬುದನ್ನು ನಿರ್ಧರಿಸುವುದು ಸಾಧ್ಯವಾಗದು.

ದಕ್ಷಿಣ ಏಷ್ಯಾದತ್ತ ಕೇಂದ್ರೀಕರಿಸಿದಾಗ ಗಮನಿಸಬೇಕಾದ ಪ್ರಮುಖ ಸಂಗತಿಗಳು :

1. ಲಿಂಗತಾರತಮ್ಯ ಧರಿಸುವ ವೈವಿಧ್ಯಮಯ ರೂಪಗಳನ್ನು ಮುಖ್ಯವಾಗಿ ಗಮನಿಸಬೇಕು. ಸ್ತ್ರೀ ಪುರುಷರ ನಡುವಿನ ಅಸಮಾನತೆಗಳ ಮುಖಾಮುಖಿ ಹೋರಾಟ ಅಸಾಧ್ಯ. ಹಾಗೆ ಹೋರಾಟ ನಡೆಸಿ ಅಂಥ ಎಲ್ಲ ಅಸಮಾನತೆಗಳಿಗೂ ಹೊಂದಬಲ್ಲಂಥ ಪರಿಹಾರೋಪಾಯವನ್ನು ಕಂಡುಹಿಡಿಯುವುದೂ ಸಾಧ್ಯವಿಲ್ಲ.

2. ಒಂದೇ ದೇಶವು ಕಾಲದ ಬದಲಾವಣೆಯೊಂದಿಗೆ ಒಂದು ರೀತಿಯ ಜೆಂಡರ್ ಅಸಮಾನತೆಯಿಂದ ಬೇರೊಂದು ರೀತಿಯ ಅಸಮಾನತೆಯ ಕಡೆಗೆ ಹೊರಳಬಹುದು. ಪ್ರಸ್ತುತ ಭಾರತದಲ್ಲೇ ಇಂಥ ತೀವ್ರರೂಪದ ಜೆಂಡರ್ ಅಸಮಾನತೆಯ ಪರಿವರ್ತನೆ ಕಂಡುಬರುತ್ತಿದೆ.

3. ಜೆಂಡರ್ ಅಸಮಾನತೆಯ ಹಲವು ರೂಪಗಳು ಮಹಿಳೆಯರು ಬಾಲಕಿಯರ ಕಷ್ಟಗಳಲ್ಲದೆ ಪುರುಷರ ಮತ್ತು ಬಾಲಕರ ಬದುಕುಗಳ ಮೇಲೂ ದುಷ್ಪರಿಣಾಮ ಬೀರುತ್ತಿರುತ್ತವೆ ಎಂಬುದನ್ನೂ ಪರಿಗಣನೆಗೆ ತೆಗೆದುಕೊಳ್ಳುವುದು ಅವಶ್ಯಕ. ಜೆಂಡರ್ ಅಸಮಾನತೆಯ ವಿವಿಧ ಕ್ರೂರಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ನಾವು ಮಹಿಳೆಯರ 'ವಿಧಿ' ಎಂಬುದಷ್ಟನ್ನೇ ಗುರಿಯಾಗಿ ಇಟ್ಟುಕೊಳ್ಳದೆ, ಅದರ ಆಚೆಗೂ ಸ್ತ್ರೀಯರ ನಡುವೆಯೇ ಅಸಮಾನತೆ ನೆಲೆಗಳು ರೂಢಿಸಿರುವುದನ್ನೂ ಅವು, ಪುರುಷರ ಬದುಕಿನ ಮೇಲೆ ಬೀರುವ ದುಷ್ಪರಿಣಾಮಗಳನ್ನೂ ನೋಡಬೇಕು.

4. ಸಮಾಜದಲ್ಲಿರುವ ಇನ್ನಿತರ ಅಸಮಾನತೆಗಳೂ (ವರ್ಗ, ಜಾತಿ ಇತ್ಯಾದಿ) ಜೆಂಡರ್ ಅಸಮಾನತೆಗಳೂ ಪರಸ್ಪರ ಪೂರಕವಾಗಿ ಪೋಷಕವಾಗಿಯೂ ಕೆಲಸ ಮಾಡುತ್ತಿರುತ್ತವೆ. ಅವುಗಳ ಅಂತರ್ ಸಂಬಂಧಗಳತ್ತಲೂ ನಾವು ಗಮನ ಹರಿಸಬೇಕಿರುತ್ತದೆ.

ದಕ್ಷಿಣ ಏಷ್ಯಾದ ದೇಶಗಳಲ್ಲಿ ಮರಣಸಂಖ್ಯಾ ಪ್ರಮಾಣ ಮತ್ತು ಜನನ ಸಂಖ್ಯಾ ಪ್ರಮಾಣಗಳ ಅಸಮಾನತೆಗಳು ಅತ್ಯಂತ ತುರ್ತಾಗಿ ಗಮನಹರಿಸಲೇ ಬೇಕಾದ ಅಸಮಾನತೆಗಳು. ಭಾರತ ಉಪಖಂಡದಲ್ಲೇ ಇವು ವಿಶೇಷವಾಗಿರುತ್ತವೆ ನಿಜ. ಆದರೂ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲೂ ಪಶ್ಚಿಮ ಐರೋಪ್ಯ ದೇಶಗಳಲ್ಲೂ ಇಂಥ ಅಸಮಾನತೆಗಳಿಂದ ತಾವು ಮುಕ್ತರಾದವರೆಂಬ ಒದುಕುಳಿ ಸ್ವಸಂತೃಪ್ತತೆ ಬಗ್ಗೆ ನಾವು ಜಾಗರೂಕತೆಯಿಂದ ನೋಡಬೇಕು. ಆ ದೇಶಗಳ ಅನುಭವ ದಾಖಲಾತಿಗಳನ್ನು ಸಾಧಾರಣೀಕರಿಸಿಬಿಡುವುದರಿಂದಾಗಿ ನಮ್ಮ ಉಪಖಂಡಕ್ಕೆ ಅನ್ವಯಿಸಬಹುದಾದಂಥದ್ದು ಅಲ್ಲಿಗೆ ಅನ್ವಯಿಸಲಾರದು ಎಂದು ಭಾವಿಸುವಂತಾಗಿದೆ. ಆದರೆ ಜೆಂಡರ್ ಅಸಮಾನತೆ ಎಷ್ಟು ಬಹುರೂಪದ್ದಾಗಿದೆ ಎಂದರೆ ನಾವು ಅದರ ಯಾವ ಮುಖವನ್ನು ಕಾಣುತ್ತೇವೆ ಎಂಬುದರ ಮೇಲೆ ಅದರ ಬಗೆಗಿನ ನಮ್ಮ ತೀರ್ಮಾನಗಳು ಅವಲಂಬಿಸಿರುತ್ತವೆ.

ಉದಾಹರಣೆಗೆ : ಭಾರತ, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಶ್ರೀಲಂಕಾಗಳಲ್ಲಿ ಸರ್ಕಾರಗಳು ಮಹಿಳೆಯರ ನಾಯಕತ್ವದಲ್ಲೇ ನಡೆದಿರುವ ಚರಿತ್ರೆಯಿದೆ. ಅಮೇರಿಕಾ ಇಲ್ಲವೆ ಜಪಾನುಗಳು ಇನ್ನೂ ಈ ಸಾಧ್ಯತೆಯನ್ನು ತಲುಪಿಲ್ಲ. ಹತ್ತಿರದ ಭವಿಷ್ಯದಲ್ಲಿ ಅಂತಹ ಸಾಧ್ಯತೆಗಳೂ ಅಲ್ಲಿ ಕಂಡುಬರುವುದಿಲ್ಲ. ಪ್ರಧಾನಮಂತ್ರಿ ಹಾಗೂ ವಿರೋಧಪಕ್ಷದ

ನಾಯಕತ್ವಕೂಡ ಮಹಿಳೆಯರೇ ನಿರ್ವಹಿಸಿದ ಮಾದರಿಯುಳ್ಳ ಬಾಂಗ್ಲಾದೇಶ ಜಗತ್ತಿಗೇ ಈ ವಿಷಯದಲ್ಲಿ ಒಂದು ಆಶ್ಚರ್ಯ. ದೆಹಲಿ ವಿಶ್ವವಿದ್ಯಾಲಯಕ್ಕೆ 1960ರಷ್ಟು ಹಿಂದೆಯೇ ಒಬ್ಬ ಮಹಿಳೆ ಕುಲಪತಿಯಾದರು. ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ 1990ರಲ್ಲಿ ಅಂಥ ನೇಮಕಾತಿ ಸಾಧ್ಯವಾಗಿದ್ದರೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಅದು ಇನ್ನೂ ಈಚೆಗಿನ ವಿದ್ಯಮಾನವಷ್ಟೆ.

ಧನಸಂಪತ್ತು, ಆದಾಯ ಮತ್ತು ಉಪಕರಣಗಳು ಉಪಾಧಿ ಕಾರಣಗಳಷ್ಟೆ. ಅವುಗಳಿಗೂ ಮಾನವ ಬದುಕಿನ ಆಂತರಿಕ ಮೌಲ್ಯಕ್ಕೂ ಇರುವ ವೈರುಧ್ಯಗಳನ್ನು ತುಲನೆ ಮಾಡಿ ನೋಡಬೇಕು ಎಂಬುದಾಗಿ ಕ್ರಿ. ಪೂ. 8ನೆಯ ಶತಮಾನಕ್ಕೆ ಸೇರಿದ ಉಪನಿಷತ್ತುಗಳಲ್ಲಿ ಉಲ್ಲೇಖಗೊಂಡಿರುವ ಮೈತ್ರೇಯಿಯೆಂಬ ಬ್ರಹ್ಮಜ್ಞಾನಿ ಮಹಿಳೆಯು ಹೇಳಿರುತ್ತಾಳೆ. ಅದಾದ ನಾಲ್ಕು ಶತಮಾನಗಳ ಬಳಿಕ ಅರಿಸ್ಟಾಟಲ್‌ನ ವಿಚಾರಗಳಲ್ಲಿ ನಿಕೊಮಚೆನ್ ನೀತಿಪಾಠಗಳಲ್ಲಿ ಇಂಥದೊಂದು ವಿಚಾರ ಕಂಡುಬರುತ್ತದೆ. ಮಹಿಳೆಯರ ಮತ್ತು ಪುರುಷ ಜೀವನ ವಮೌಲ್ಯಗಳು ಮೊದಲು ಸೂತ್ರೀಕರಣಗೊಂಡದ್ದು (ಮೈತ್ರೇಯಿಯಂಥ) ಒಬ್ಬ ತತ್ತ್ವ ಚಿಂತಕಳಿಂದ. ಆದರೂ ಆ ಚಿಂತನೆ ಹುಟ್ಟಿ ಮೂರುಸಾವಿರ ವರ್ಷಗಳಾದ ಮೇಲೂ ಭಾರತದಲ್ಲಿ ಸ್ತ್ರೀಭ್ರೂಣಹತ್ಯೆ, ಸ್ತ್ರೀ ಶಿಶು ಮರಣದ ವಿನ್ಯಾಸಗಳಿಂದ ಪಾರಾಗದೆ ಉಳಿದಿರುವ ಸಮಾಜದಿಂದ ಇಂಥದೊಂದು ವಿಚಾರ ಹೊಮ್ಮಿಬಂದಿತ್ತೆಂಬುದೂ ಕುತೂಹಲಕರ ಸಂಗತಿ.

ದಕ್ಷಿಣ ಏಷ್ಯಾದಲ್ಲಿ ಶ್ರೀಲಂಕಾ ಮತ್ತು ಕೇರಳ ರಾಜ್ಯದಂಥ ಅಪವಾದಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಹೆಣ್ಣು ಶಿಶುಗಳ ಮರಣ ಸಂಖ್ಯೆ ಗಂಡುಶಿಶುಗಳಿಗಿಂತ ಗಮನಾರ್ಹವಾಗಿ ಹೆಚ್ಚಾಗಿಯೇ ಇದೆ. ಇದು ಪ್ರಜ್ಞಾಪೂರ್ವಕ ಜೀವಘಾತಕ ತನವಲ್ಲ. ಈ ಬೃಹತ್ ಪ್ರಮಾಣದ ವಿದ್ಯಮಾನವನ್ನು ಚೈನಾ ಅಥವಾ ಇಂಡಿಯಾದಲ್ಲಿ ಸಾಂದರ್ಭಿಕವಾಗಿ ನಡೆಸುವ ಸ್ತ್ರೀ ಶಿಶುಹತ್ಯೆಯ ರೀತಿಯದೇ ಎಂದು ವಿವರಿಸಿಬಿಡುವುದು ಸಾಧ್ಯವಿಲ್ಲ. ಮಹಿಳೆಯರ ಮರಣಸಂಖ್ಯೆಯ ಈ ಅನಾನುಕೂಲ ಸ್ಥಿತಿ ಸ್ತ್ರೀಯರ ಆರೋಗ್ಯ, ಪೌಷ್ಟಿಕತೆ ಮತ್ತಿತರ ಹಿತಾಸಕ್ತಿಗಳ ಬಗೆಗಿನ ತೀವ್ರರೂಪದ ವ್ಯಾಪಕವಾದ ನಿರ್ಲಕ್ಷ್ಯದಿಂದಲೇ ಉಂಟಾದಂಥದು.

ಯುರೋಪ್ ಮತ್ತು ಯು.ಎಸ್.ಎ.ಗಳಲ್ಲಿ ಹೆಣ್ಣು–ಗಂಡಿನ ಜನನ ಸಂಖ್ಯೆಯ ಅನುಪಾತ 1.05 ರಷ್ಟಿದ್ದು ಸರಾಸರಿ 100 ಪುರುಷರಿಗೆ 105 ಸ್ತ್ರೀಯರಿದ್ದಾರೆ. ಇದನ್ನೇ ಎಲ್ಲಾ ಕಡೆಗೂ ಅನ್ವಯಿಸಿ ಜಾಗತಿಕವಾಗಿಯೂ ಗಂಡಸರಿಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚು ಎಂಬ ಸುಳ್ಳು ಪ್ರತೀತಿ ಉಂಟಾಗಿದೆ. ವಾಸ್ತವದಲ್ಲಿ ಇಡೀ ಜಗತ್ತಿನಲ್ಲಿ ಸರಾಸರಿ 100 ಗಂಡಸರಿಗೆ 98 ಹೆಂಗಸರಿರುತ್ತಾರೆ. ಈ ಕೊರತೆಯು ತೀವ್ರ ರೂಪದಲ್ಲಿರುವುದು ಏಷ್ಯಾ ಹಾಗೂ ಉತ್ತರ ಆಫ್ರಿಕಾ ಖಂಡಗಳಲ್ಲಿ. ಉದಾಹರಣೆಗೆ, ಇರಾನ್ ಮತ್ತು ಈಜಿಪ್ಟ್‌ನಲ್ಲಿ ಪ್ರತಿಶತ ಪುರುಷರಿಗೆ 97 ಮಹಿಳೆಯರಿದ್ದರೆ, ಬಾಂಗ್ಲಾ ಮತ್ತು ಟರ್ಕಿಗಳಲ್ಲಿ ಅಂದು 100:95 ಹಾಗೂ ಚೀನಾದಲ್ಲಿ 100:94; ಇಂಡಿಯಾ ಮತ್ತು ಪಾಕಿಸ್ತಾನಗಳಲ್ಲಿ 100:93; ಸೌದಿ ಅರೇಬಿಯಾದಲ್ಲಿ 100:84; ಪ್ರಮಾಣದಲ್ಲಿದೆ. ಸೌದಿ ಅರೇಬಿಯಾಕ್ಕೆ ಬೇರೆಕಡೆಯಿಂದ ವಲಸೆಬಂದ ಪುರುಷ ಶ್ರಮಗಾರರಿಂದಲೂ ಅಲ್ಲಿನ ಸ್ತ್ರೀ ಅನುಪಾತ ಕುಸಿತ ಆಗಿದೆ. ಆದರೂ ಈ ಸ್ಥಿತಿ ತೀರಾ ಆತಂಕಕಾರಿ. ಆರೋಗ್ಯರಕ್ಷಣೆ ಮತ್ತು ಪೋಷಕಾಂಶಗಳ ಸಮಾನ ಸವಲತ್ತು ದೊರೆತ ಪಕ್ಷದಲ್ಲಿ ಮಹಿಳೆಯರ ವಯೋನಿರ್ದಿಷ್ಟ ಸಾವಿನ ಸಂಖ್ಯೆ ಪುರುಷರದಕ್ಕಿಂತ ಸಾಕಷ್ಟು ಕಡಿಮೆ ಕಂಡುಬಂದಿದೆ. ಸ್ತ್ರೀಭ್ರೂಣಗಳು ಗರ್ಭಪಾತವಾಗುವುದೂ ಪುಂ ಶಿಶುಗಳಿಗಿಂತ ಕಡಿಮೆಯೇ. ಜನನ ಮತ್ತು ಗರ್ಭಸ್ಥ ಸ್ಥಿತಿಯಲ್ಲಿ ಜಾಗತಿಕವಾಗಿ ಗಂಡುಶಿಶುಗಳ ಸಂಖ್ಯೆಯೇ ಹೆಚ್ಚಾಗಿದೆ. ಆದರೆ ವಯಸ್ಸಾಗುತ್ತಾ ಬಂದಂತೆ ಬದುಕುಳಿವ ಪುರುಷರ ಸಂಖ್ಯೆ ಕುಸಿಯುತ್ತದೆ. ಯುರೋಪು ಹಾಗೂ ಉತ್ತರ ಅಮೆರಿಕಾಗಳಲ್ಲಿ ಸ್ತ್ರೀ ಸಂಖ್ಯೆ ಪುರುಷರದಕ್ಕಿಂತ ಹೆಚ್ಚು ಎಂಬಂತೆ ಕಾಣಿಸುವುದಕ್ಕೆ ಹೀಗೆ ದೀರ್ಘಾವಧಿ ಬದುಕುಳಿವ ವಿವಿಧ ವಯೋಮಾನದ ಸ್ತ್ರೀಯರಿರುವುದೇ ಕಾರಣ.

ಆದರೆ ಜಗತ್ತಿನ ಅನೇಕ ಕಡೆಗಳಲ್ಲಿ ಆರೋಗ್ಯ ಮತ್ತು ಪೋಷಕಾಂಶಗಳ ವಿಷಯದಲ್ಲಿ ಗಂಡಸರಿಗಿಂತ ಹೆಂಗಸರಿಗೆ ಕಡಿಮೆ ಗಮನಕೊಡಲಾಗುತ್ತದೆ. ಅದರಲ್ಲೂ ಬಾಲಕರಿಗಿಂತ ಬಾಲಕಿಯರಿಗೆ ಈ ಬಗ್ಗೆ ಮನೆಯಲ್ಲಿ ಬೆಂಬಲ ಇರುವುದಿಲ್ಲ. ಇಂಥ ಜೆಂಡರ್ ಪಕ್ಷಪಾತದಿಂದಾಗಿ ಇಂಥ ಅನೇಕ ದೇಶಗಳಲ್ಲಿ ಸ್ತ್ರೀಯರ ಮರಣ ಸಂಖ್ಯಾ ಪ್ರಮಾಣ ಪುರುಷರದಕ್ಕಿಂತ ಹೆಚ್ಚಿರುತ್ತದೆ.

"ಅದೃಶ್ಯವಾಗುವ ಮಹಿಳೆಯರು" (Missing Women) ಎಂಬ ಪರಿಕಲ್ಪನೆ ಮಹಿಳೆಯರ ಮರಣ ಸಂಖ್ಯಾ ಪ್ರಮಾಣದ ಆಘಾತಕರ ಹೆಚ್ಚಳದ ವಿದ್ಯಮಾನದ ಕಡೆಗೆ ವಿಚಾರ ಬೆಳೆಸುವ ಸಲುವಾಗಿಯೇ ಕಲ್ಪಿತವಾದದ್ದು.

ಜೆಂಡರ್ ಪಕ್ಷಪಾತವುಳ್ಳ ದೇಶಗಳ ಮಹಿಳೆಯರ ನಿಜವಾದ ಜನಸಂಖ್ಯೆಯನ್ನು ಅಂಥ ಸ್ತ್ರೀವಿರೋಧಿ ಲಿಂಗ ಪಕ್ಷಪಾತ ಇಲ್ಲದಿರುವ ದೇಶಗಳ ಮರಣಸಂಖ್ಯೆಯ ಜೆಂಡರ್ ಪ್ಯಾಟರ್ನ್ ಜೊತೆಯಲ್ಲಿ ತುಲನೆ ಮಾಡುವ ಮೂಲಕ ಈ ಎರಡೂ ಸ್ಥಿತಿಗಳ ನಡುವಿನ ಅಂತರಗಳ ಸ್ಥೂಲವಾದ ತಿಳಿವಳಿಕೆಯನ್ನು ಪಡೆಯಲು, ಅಸ್ತಿತ್ವದಲ್ಲಿ ಉಳಿದಿರದ ಮಹಿಳೆಯರಮೇಲೆ ಫೋಕಸ್ ಮಾಡುವಂಥ ಅಧ್ಯಯನ ಇದಾಗಿದೆ.

ಉದಾಹರಣೆಗೆ, ಸಹಾರಾಸಮೀಪದ ಆಫ್ರಿಕಾದೇಶದ ಸ್ತ್ರೀ–ಪುರುಷ ಸಂಖ್ಯಾ ಅನುಪಾತವನ್ನು ಒಂದು ಮಾನದಂಡ ಎಂದು ತೆಗೆದುಕೊಳ್ಳೋಣ (ಏಕೆಂದರೆ ಅಲ್ಲಿ ಆರೋಗ್ಯ, ಸಾಮಾಜಿಕ ಸ್ಥಾನ ಹಾಗೂ ಮರಣದ ಸಂಖ್ಯಾ ಪ್ರಮಾಣದ ವಿಷಯಗಳಲ್ಲಿ ಸ್ತ್ರೀವಿರುದ್ಧವಾದ ಪಕ್ಷಪಾತ ಸಾಪೇಕ್ಷವಾಗಿ ಕಡಿಮೆಯಿದೆ) ಅಲ್ಲಿ ಸ್ತ್ರೀ–ಪುರುಷರ ಅನುಪಾತ 1.022 ಇದೆ. ಈ ಮಾನದಂಡದಿಂದ ಮಹಿಳೆಯರ ಸಂಖ್ಯೆಯ ಕೊರತೆ ಉಂಟಾಗಿರುವ ದೇಶಗಳಲ್ಲಿ ಎಷ್ಟು ಜನ ಮಹಿಳೆಯರು ಅದೃಶ್ಯರಾಗಿದ್ದಾರೆ ಎನ್ನುವುದನ್ನು ಲೆಕ್ಕ ಮಾಡಲು ಸಾಧ್ಯ. ಉದಾಹರಣೆಗೆ, ಇಂಡಿಯಾದಲ್ಲಿ ಸ್ತ್ರೀ–ಪುರುಷ ಅನುಪಾತವು 0.93 ಇದ್ದು ಪುರುಷರ ಹಾಗೂ ಮಹಿಳೆಯರ ಸಂಖ್ಯೆಯಲ್ಲಿ 9% ಅಂತರವಿದೆ. ಇದನ್ನು ಸಹಾರಾ ಉಪಾಂತ್ಯದ ಆಫ್ರಿಕಾದ ಅನುಪಾತದೊಂದಿಗೆ ಹೋಲಿಸಿದಾಗ 1986ರಷ್ಟು ಹಿಂದೆಯೇ 37 ಮಿಲಿಯನ್ ಮಹಿಳೆಯರು ಅದೃಶ್ಯವಾದದ್ದು ಕಂಡುಬಂದಿತು. ಅದೇ ಸಹಾರಾ ಉಪಾಂತ್ಯ ಆಫ್ರಿಕಾ ಮಾನದಂಡ ಬಳಸಿಕೊಂಡು ಪರಿಶೀಲಿಸಿದಾಗ ಚೈನಾದಲ್ಲಿ 44 ಮಿಲಿಯನ್ ಮಹಿಳೆಯರು ಅದೃಶ್ಯರಾದದ್ದು ಕಂಡುಬಂದಿತು. ಇಡೀ ಜಗತ್ತಿನ ಜನಸಂಖ್ಯಾ ಅನುಪಾತವನ್ನು ಹೀಗೆಯೇ ಹೋಲಿಸಿ ಲೆಕ್ಕ ಮಾಡಿದ್ದಾದರೆ ಸ್ತ್ರೀಯರ ಸಂಖ್ಯೆಯ ಕೊರತೆ 100 ಮಿಲಿಯನ್ ಮೀರಬಲ್ಲದು.

ಸ್ತ್ರೀಯರ ಮರಣಸಂಖ್ಯೆಯು ಇಷ್ಟು ಭೀಕರವಾಗಿ ಹೆಚ್ಚುತ್ತಿರುವುದನ್ನು ನಿಯಂತ್ರಿಸುವುದು ಹೇಗೆ? ಅನೇಕ ಆರ್ಥಿಕ ಅಧ್ಯಯನ ಮಾದರಿಗಳು ಸ್ತ್ರೀಯರಿಗೆ ಆರ್ಥಿಕ ಸಬಲೀಕರಣ ದೊರಕದಿರುವುದೇ ಅವರ ಬಗೆಗಿನ ನಿರ್ಲಕ್ಷ್ಯ ಹೆಚ್ಚಲು ಕಾರಣ ಎಂಬುದನ್ನು ತೋರಿಸಲು ಯತ್ನಿಸಿವೆ. Ester Boserup ಎಂಬಾಕೆ ಮೊದಲಹಂತದ ಸ್ತ್ರೀವಾದಿ ಅರ್ಥಶಾಸ್ತ್ರಜ್ಞೆ, ಲಾಭಕರ ಉದ್ಯೋಗದಿಂದ ದೊರಕುವ ಆರ್ಥಿಕ ಸ್ವಾತಂತ್ರ್ಯದ ಮೂಲಕ ಮಹಿಳೆಯರ ಸ್ಥಾನಮಾನ ಹಾಗೂ ಪರಿಸ್ಥಿತಿಗಳಲ್ಲಿ ಎಂಥ ಹೆಚ್ಚಳ ಸಾಧ್ಯವಾಗುತ್ತದೆ ಎಂಬುದನ್ನು ಚರ್ಚೆಗೆ ತಂದಿದ್ದಾರೆ. ಕೌಟುಂಬಿಕ ಆದಾಯ ಗಳಿಕೆಯಲ್ಲಿ ಗಂಡಸರ ದೇಣಿಗೆ ಹೆಂಗಸರಿಗಿಂತ ಹೆಚ್ಚಾಗಿರುವುದು ಹೆಣ್ಣುಮಕ್ಕಳನ್ನು (ಒಂದು ಹೊರೆ ಎಂಬಂತೆ) ನಿರ್ಲಕ್ಷಿಸುವುದಕ್ಕೆ ಕಾರಣವೆಂದು ಬೇರೆಯವರೂ ತೋರಿಸಲು ಯತ್ನಿಸಿದ್ದಾರೆ. ಹೆಣ್ಣು–ಗಂಡು ಮಕ್ಕಳನ್ನು ಸಾಕಿ ಬೆಳೆಸುವುದರಲ್ಲಿ ಕಠೋರವಾದ ವ್ಯಾವಹಾರಿಕ ಲೆಕ್ಕಾಚಾರ ಇರುತ್ತದೆ ಎನ್ನುವುದಕ್ಕಿಂತ ಸಾಮಾಜಿಕ ಪರಿಸ್ಥಿತಿಗಳ ಸಮಗ್ರ ಪರಿಗಣನೆ ಇರುವಂಥ ಮೊದಲು ಹೇಳಿದ ಎಸ್ತರ್ ಬೊಸೆರಪ್ ಅವರ ವಿಚಾರಧಾರೆಯೇ ಹೆಚ್ಚು ಸೂಕ್ತವೆನಿಸುತ್ತದೆ. ಮಹಿಳೆಯರು ಲಾಭಕರ ಉದ್ಯೋಗಗಳನ್ನು ಹೊಂದಿರುವಾಗ ನಿಜವಾಗಿ ಮಹಿಳೆಯರು ಮತ್ತು ಬಾಲಕಿಯರನ್ನು ನೋಡುವ ರೀತಿಯಲ್ಲಿ ಸುಧಾರಣೆ ಕಂಡುಬರುತ್ತದೆ. ಆರ್ಥಿಕ ಸ್ವಾತಂತ್ರ್ಯ ನಿಜವಾಗಿ ಪರಿಣಾಮಕಾರಿ ಪಾತ್ರವಹಿಸುತ್ತದೆ ಎಂಬುದು ನಿಶ್ಚಿತ. ಹಾಗೆಯೇ ಮಹಿಳಾ ಸಾಕ್ಷರತೆ ಮತ್ತು ಅಂಥ ಇತರ ಸವಲತ್ತುಗಳೂ ಅವರ ಸಾಮಾಜಿಕ ಸ್ಥಾನವನ್ನು ಉತ್ತಮಗೊಳಿಸಲು, ಕೌಟುಂಬಿಕವಾಗಿ ನಿರ್ಣಯಾಧಿಕಾರದಲ್ಲಿ ಅವರ ಧ್ವನಿಗೂ ಜಾಗ ನೀಡಲು ಸಹಕಾರಿಗಳಾಗಿರುತ್ತವೆ.

ಉದಾಹರಣೆಗೆ, ಭಾರತದ ಕೇರಳರಾಜ್ಯದಲ್ಲಿ ಇತರ ರಾಜ್ಯಗಳಿಗಿಂತ ಸ್ತ್ರೀಪರಿಸ್ಥಿತಿ ತೀವ್ರವಾಗಿ ಭಿನ್ನವಾಗಿದೆ. ಅಲ್ಲಿನ ಸ್ತ್ರೀಪುರುಷ ಅನುಪಾತ 1.06ರಷ್ಟು ಎಂದು 2001ರ ಜನಗಣತಿ ತಿಳಿಸುತ್ತದೆ. ಅಲ್ಲಿ ಆಗ ಒಟ್ಟು 30 ಮಿಲಿಯನ್ ಜನಸಂಖ್ಯೆಯಿದ್ದು ಪುರುಷರು ಹೊರದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಿದ್ದರೂ ಐರೋಪ್ಯ ಹಾಗೂ ಅಮೆರಿಕಾದ ರಾಜ್ಯಗಳಲ್ಲಿನ ಅನುಪಾತಕ್ಕಿಂತ ಕೇರಳದ ಅಂಕಿ ಅಂಶ ಕಡಿಮೆಯೇನೂ ಅಲ್ಲ. ಮಹಿಳಾ ಸಬಲೀಕರಣದ ವಿಶಿಷ್ಟ ಲಕ್ಷಣಗಳೂ ಸ್ತ್ರೀಮರಣ ಸಂಖ್ಯೆಯ ವಿಷಯದಲ್ಲಿ ಜೆಂಡರ್ ಪಕ್ಷಪಾತ ಇಲ್ಲದಂತೆ ಅಥವಾ ಇದ್ದರೂ ತೀರಾ ಗೌಣವೆನಿಸುವಂತೆ ಮಾಡಿರಬಹುದು. ಸ್ತ್ರೀ ಸಾಕ್ಷರತೆ ಇಂಡಿಯಾದ ಬೇರೆಲ್ಲಾ ರಾಜ್ಯಗಳಿಗಿಂತಲೂ ಕೇರಳದಲ್ಲಿ ಹೆಚ್ಚಾಗಿದೆ. ಮಹಿಳೆಯರು ಒಳ್ಳೆಯ ವೇತನವುಳ್ಳ ಗೌರವಾರ್ಹವಾದ ಉನ್ನತ ಹುದ್ದೆಗಳನ್ನು ಹೊಂದಿರುವುದಕ್ಕೆ ಒಪ್ಪಿತವಾದ ವಾತಾವರಣ ಅಲ್ಲಿದೆ. ಸ್ತ್ರೀಸಬಲೀಕರಣದ ಇನ್ನೊಂದು ಪರಿಣಾಮವೆಂದರೆ ಸ್ತ್ರೀ ಫಲವಂತಿಕೆಯ ಸಂಖ್ಯೆ ಕುಸಿದಿರುವುದು. ಸಂತಾನ ನಿಯಂತ್ರಣಕ್ಕಾಗಿ ತೀಕ್ಷ್ಣ ವಿಧಾನಗಳನ್ನು ಕಡ್ಡಾಯವಾಗಿ ಜಾರಿಗೊಳಿಸಿದಂಥ ಚೈನಾದಲ್ಲಿ ಸ್ತ್ರೀಯರ ಫಲವಂತಿಕೆಯಲ್ಲಿ ಆಗಿರುವ ಕುಸಿತಕ್ಕಿಂತ ಹೆಚ್ಚು ವೇಗವಾಗಿ ಕೇರಳದ ಸ್ತ್ರೀಯರ ಫಲವಂತಿಕೆಯು ಕ್ಷೀಣಿಸಿದೆ.

ಸಂಪತ್ತಿನ ಅಭಿವೃದ್ಧಿ ಹೊಂದಿದ/ಹೊಂದುತ್ತಿರುವ ರಾಜ್ಯಗಳ ಜೆಂಡರ್ ಅಸಮಾನತೆ?

2001ರ ಜನಗಣತಿಯ ಅಂಕಿಸಂಖ್ಯೆಗಳ ಪ್ರಕಾರ ಇಡೀ ಭಾರತದಲ್ಲಿ ಸ್ತ್ರೀಪುರುಷರ ಅನುಪಾತದಲ್ಲಿ ಸ್ವಲ್ಪ ಸುಧಾರಣೆ ಆಗಿದ್ದರೂ ಹೆಣ್ಣು-ಗಂಡು ಮಕ್ಕಳ ಸಂಖ್ಯಾ ಅನುಪಾತದಲ್ಲಿ ಬಾಲಕಿಯರ ಸಂಖ್ಯೆ ಕುಸಿದಿದೆ. 6 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಬಾಲಕರ ಮತ್ತು ಬಾಲಕಿಯರ ಸಂಖ್ಯಾ ಅನುಪಾತವು ನೂರು ಬಾಲಕರಿಗೆ 94.5 ಬಾಲಕಿಯರಿದ್ದದ್ದು 92.7 ಬಾಲಕಿಯರಿರುವಂತೆ ಆಗಿದೆ. ಕೇರಳದಂಥ ರಾಜ್ಯದಲ್ಲಿ ಈ ರೀತಿಯ ಕುಸಿತ ಕಾಣಿಸುವುದಿಲ್ಲ. ಆದರೆ ಪಂಜಾಬ್, ಹರಿಯಾಣ, ಗುಜರಾತ್ ಮತ್ತು ಮಹಾರಾಷ್ಟ್ರಗಳಂಥ ಭಾರತದ ಅತ್ಯಂತ ಶ್ರೀಮಂತ ರಾಜ್ಯಗಳಲ್ಲಿಯೇ ಈ ಬೆಳವಣಿಗೆ ಕಾಣಿಸಿ ಕೊಂಡಿದೆ. ಎಲ್ಲಾ ನಿಟ್ಟಿನ ವಾಸ್ತವಾಂಶಗಳನ್ನು ಪರಿಶೀಲಿಸಿದಲ್ಲಿ ಸ್ತ್ರೀಶಿಶು ಮರಣ ಸಂಖ್ಯಾ ಪ್ರಮಾಣದಲ್ಲಿ ಹೆಚ್ಚು ಏರಿಕೆ ಕಾಣಿಸದಿದ್ದರೂ ಹೆಣ್ಣುಶಿಶು ಜನನ ಸಂಖ್ಯೆಯು ಪ್ರಮಾಣ ಗಂಡುಶಿಶುವಿನದಕ್ಕಿಂತ ಗಮನಾರ್ಹವಾಗಿ ಕಡಿಮೆಯಾಗಿದೆ. ಭ್ರೂಣದ ಲಿಂಗ ಪರೀಕ್ಷಕ ಸೌಕರ್ಯಗಳು ಈ ಪ್ರದೇಶದ ಜನರಿಗೆ ಸುಲಭವಾಗಿ ದೊರಕುತ್ತಿರುವುದು ಈ ಕುಸಿತಕ್ಕೆ ಒಂದು ಪ್ರಮುಖ ನೇರವಾದ ಕಾರಣ. ಲಿಂಗದ ಆಯ್ಕೆಗಾಗಿ ಪರೀಕ್ಷಣೆ ಮತ್ತು ಗರ್ಭಪಾತಗಳು ಭಾರತದಲ್ಲಿ ತೀವ್ರವಾಗಿರುವುದರ ಅರಿವಿನಿಂದಲೇ ನಮ್ಮ ಪಾರ್ಲಿಮೆಂಟು ಕೆಲವು ವರ್ಷಗಳ ಹಿಂದೆಯೇ ಭ್ರೂಣಲಿಂಗ ನಿರ್ಧಾರಕ ತಂತ್ರಜ್ಞಾನದ ಸ್ವಚ್ಛಂದ ಬಳಕೆಯನ್ನು ನಿಷೇಧಿಸಿತು. ವೈದ್ಯಕೀಯ ರೋಗವಿಧಾನದ ಅನಿವಾರ್ಯ ಸಂದರ್ಭಗಳ ಹೊರತಾಗಿ ಈ ತಂತ್ರಜ್ಞಾನವನ್ನು ಬಳಸುವುದನ್ನು ನಿರ್ಬಂಧಿಸಿತು. ಆದರೆ ಈ ಕಾನೂನನ್ನು ಜಾರಿಗೊಳಿಸುವಲ್ಲಿ ತೀವ್ರವಾದ ನಿರ್ಲಕ್ಷ್ಯ ಕಂಡುಬಂದಿದ್ದು ದಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಸಕ್ರಿಯ ಪತ್ರಕರ್ತೆ ಸಿಲಿಯಾ ಡಗ್ಗರ್ ಅವರು ಈ ಬಗ್ಗೆ ಪ್ರಶ್ನಿಸಿದಾಗ ಪೊಲೀಸ್ ಅಧಿಕಾರಿಗಳು ಇಂಥ ಕೇಸುಗಳ ತನಿಖೆ ಮಾಡುವುದೂ, ತಪ್ಪಿತಸ್ಥರನ್ನು ದಂಡಿಸುವುದೂ ಕಷ್ಟಕರವೆಂದೂ, ಈ ತಂತ್ರದ ಬಳಕೆ ಬಗ್ಗೆ ಮಾಹಿತಿ ನೀಡಲು ನಿರಾಕರಿಸುವಂಥ ತಾಯಂದಿರಿಗೆ ಧನ್ಯವಾದ ಹೇಳುತ್ತೇವೆಂದೂ ಉತ್ತರಿಸಿದ್ದರು.

ಜೆಂಡರ್ ಅಸಮಾನತೆಯನ್ನು ನಿವಾರಿಸಲು ಅನುಸರಿಸಲಾಗುತ್ತಿರುವ ಸಾಂಪ್ರದಾಯಿಕ ವಿಧಾನಗಳೆಂದರೆ ಮಹಿಳಾ ಶಿಕ್ಷಣ ಹಾಗೂ ಸ್ತ್ರೀಯರ ಆರ್ಥಿಕ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು. ಆದರೆ ಸ್ತ್ರೀ ಶಿಕ್ಷಣ ಮತ್ತು ಅವರ ಆರ್ಥಿಕ ಪಾಲ್ಗೊಳ್ಳುವಿಕೆಗಳಲ್ಲಿ ಉನ್ನತ ಸಾಧನೆ ಹೊಂದಿರುವಂಥ ಸಿಂಗಾಪುರ, ತೈವಾನ್‌ಗಳಲ್ಲಿ ಪ್ರತಿ 100 ಬಾಲಕರಿಗೆ 92 ಬಾಲಕಿಯರು, ದಕ್ಷಿಣ ಕೊರಿಯಾದಲ್ಲಿ 88 ಬಾಲಕಿಯರೂ, ಚೈನಾದಲ್ಲಿ 86 ಬಾಲಕಿಯರೂ ಇರುವಂಥ ಕುಸಿತ ಏಕಾಗಿದೆ ಎಂಬುದನ್ನು ಗಮನಿಸಬೇಕು. ದಕ್ಷಿಣ ಕೊರಿಯಾದಲ್ಲಿ ಒಟ್ಟಾರೆ ಮಕ್ಕಳ ಹೆಣ್ಣು-ಗಂಡು ಅನುಪಾತದಲ್ಲಿ ನೂರು ಬಾಲಕರಿಗೆ 44 ಬಾಲಕಿಯರಿದ್ದರೆ, ಚೈನಾದಲ್ಲಿ ಕೇವಲ 85 ಬಾಲಕಿಯರು. ಇವುಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ 100:92.7 ಎಂಬ ಬಾಲಕ: ಬಾಲಕಿಯರ ಸಂಖ್ಯಾ ಪ್ರಮಾಣ ಪೂರ್ವ ಏಷ್ಯಾ ದೇಶಗಳಿಗಿಂತ ವಾಸಿಯೆಂದೇ ಕಾಣಬಹುದು.

ಭಾರತದ ಈಗಿನ ಸರಾಸರಿ ಸಂಖ್ಯೆ ಸೂಚಿಸುವುದಕ್ಕಿಂತಲೂ ಹೆಚ್ಚಿನ ಆತಂಕಕಾರಿ ಸಂಗತಿಗಳಿವೆ. ಅವು ಇಡೀ ದೇಶವನ್ನು ಎರಡು ಹೋಳುಗಳಾಗಿ ವಿಭಜಿಸುವ ರೀತಿಯ ಬೆಳವಣಿಗೆಗಳು ಕಾಣಿಸುತ್ತವೆ. ಸ್ತ್ರೀಯರ ಗರ್ಭಧಾರಣೆ ಮತ್ತು ಪ್ರಸೂತಿಯ ಅನಂತರದಲ್ಲಿ ಮರಣಿಸುವ ಶಿಶುಗಳ ಸಂಖ್ಯೆಯಲ್ಲಿ ಬಲವಾದ ಸ್ತ್ರೀವಿರೋಧಿ ಲಕ್ಷಣಗಳು ಕೆಲಸ ಮಾಡುತ್ತಿದ್ದು, ಈ ವಿಷಯದಲ್ಲಿ ಭಾರತವು ಎರಡು ಸ್ಪಷ್ಟ ವಿಭಾಗಗಳತ್ತ ಬೆಳೆಯುತ್ತಿದೆ. ಪ್ರಪಂಚದ ಎಲ್ಲಾ ಕಡೆಗಳಲ್ಲೂ ಬಾಲಕಿಯರಿಗಿಂತ ಬಾಲಕರೇ ಹೆಚ್ಚಿನ ಸಂಖ್ಯೆಯಲ್ಲಿ ಜನ್ಮ ತಳೆಯುವವರು. ಲಿಂಗನಿರ್ದಿಷ್ಟ ಗರ್ಭಪಾತಗಳು ಇಲ್ಲದಿರುವ ಕಡೆಯೂ ವಾಸ್ತವಾಂಶ ಹೀಗೆಯೇ ಇದೆ. ಅಭಿವೃದ್ಧಿಗೊಂಡಿರುವ ಕೈಗಾರಿಕಾ ದೇಶಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಂಖ್ಯಾ ಅನುಪಾತ ಏನಿದೆಯೋ ಅದನ್ನು ಈ ದೇಶೀಯ ವರ್ಗೀಕರಣದ ಅಳತೆಯ ರೇಖೆಯೆಂದು ಪರಿಗಣಿಸಬಹುದು. 5 ವರ್ಷ ವಯಸ್ಸಿನ ಮಕ್ಕಳಲ್ಲಿ 100 ಬಾಲಕರಿಗೆ ಜರ್ಮನಿಯಲ್ಲಿ 94.8 ಬಾಲಕಿಯರು, ಬ್ರಿಟನ್ನಿನಲ್ಲಿ 95.0 ಬಾಲಕಿಯರು, ಉತ್ತರ ಅಮೇರಿಕಾದಲ್ಲಿ 95.7 ಬಾಲಕಿಯರೂ ಕಂಡುಬರುತ್ತಾರೆ. ಜರ್ಮನಿಯ ಅನುಪಾತ 94.8-100 ಎಂಬುದನ್ನು ತಡೆಬಿಂದು ಎಂದು ಇಟ್ಟುಕೊಂಡಲ್ಲಿ ಸ್ತ್ರೀವಿರೋಧವು ಅಡ್ಡಬರುವ ಪ್ರಮಾಣವೆಷ್ಟು ಎಂಬುದನ್ನು ಊಹಿಸಲು ಸಾಧ್ಯವಿದೆ.

ಈ ಅಳತೆಗೋಲಿನಿಂದ ಭಾರತವು ಭೌಗೋಳಿಕವಾಗಿ ಎರಡು ಹೋಳಾಗಿರುವುದು ಗಮನಾರ್ಹ ಸಂಗತಿ. ಉತ್ತರ ಮತ್ತು ಪಶ್ಚಿಮ ಭಾರತದ ರಾಜ್ಯಗಳಲ್ಲಿ ಗಂಡು-ಹೆಣ್ಣು ಮಕ್ಕಳ ಅನುಪಾತ ಮೇಲೆಹೇಳಿದ ತಡೆಬಿಂದುವಿಗಿಂತ ಕೆಳಗಿದೆ. ಪಂಜಾಬ್, ಹರಿಯಾಣಾ, ದೆಹಲಿ, ಉತ್ತರಪ್ರದೇಶ, ಗುಜರಾತು, ಮಹಾರಾಷ್ಟ್ರ, ಜಮ್ಮು-ಕಾಶ್ಮೀರ ಮತ್ತು ಬಿಹಾರಗಳು ಒಂದು ಗುಂಪಾದರೆ ಪೂರ್ವ ಹಾಗೂ ದಕ್ಷಿಣ ಭಾರತದ ರಾಜ್ಯಗಳು-ಕೇರಳ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ, ಕರ್ನಾಟಕ ಮತ್ತು ಈಶಾನ್ಯ ರಾಜ್ಯಗಳಾದ ಮೇಘಾಲಯ, ಮಿಝೋರಾಂ, ಮಣಿಪುರ, ನಾಗಾಲ್ಯಾಂಡ್ ಹಾಗೂ ಅರುಣಾಚಲ ಪ್ರದೇಶಗಳು ಇನ್ನೊಂದು ಗುಂಪಾಗಿವೆ. ಮೊದಲನೆಯ ಗುಂಪಿನ ರಾಜ್ಯಗಳು 100-94.8 ಎಂಬ ಬೆಂಚ್‌ಮಾರ್ಕಿಗಿಂತ ಕೆಳಗಿದ್ದರೆ ಎರಡನೆಯ ಗುಂಪಿನ ರಾಜ್ಯಗಳು ಅದಕ್ಕಿಂತ ಮೇಲಿವೆ.

ಈ ವಿಭಜನಾತ್ಮಕ ಲಕ್ಷಣಕ್ಕೆ ಒಂದು ಅಪವಾದ ಎಂದರೆ ತಮಿಳುನಾಡಿನದು. ಮಹಿಳಾ ಸಂಖ್ಯೆಯ ಕೊರತೆಯ ಪಟ್ಟಿಗೆ ಸೇರಿರುವ (ಉತ್ತರ-ಪಶ್ಚಿಮದ) ಎಲ್ಲಾ ರಾಜ್ಯಗಳಿಗಿಂತಲೂ ಅತಿ ಕಡಿಮೆ ಸಂಖ್ಯೆಯ ಸ್ತ್ರೀಯರುಳ್ಳ ರಾಜ್ಯ ತಮಿಳುನಾಡು! 100 ಬಾಲಕರಿಗೆ 94ಕ್ಕಿಂತ ಕಡಿಮೆ ಬಾಲಕಿಯರು ಇರುವ ರಾಜ್ಯ ಅದು. ತಡೆ ಬಿಂದುವಾದ 94.8ಕ್ಕಿಂತಲೂ ಕೆಳಗಿದೆ.

ಒಂದು ರಾಜ್ಯ ಮಾತ್ರ ಹೀಗೆ ಅಂಚಿನಲ್ಲಿ ಹೊಂದಿಕೊಳ್ಳದೆ ಉಳಿದಿರುವುದು ಗಾಬರಿ ಹುಟ್ಟಿಸುವ ಸಂಗತಿ. ಆದರೆ ಇಂಡಿಯಾದ ಬಹಳಷ್ಟು ರಾಜ್ಯಗಳು ಹೇಗೆ ಈ ಎರಡು ಗುಂಪುಗಳ ಅಡಿಯಲ್ಲಿ ನಿರ್ದಯವಾಗಿ ಬಂದು ನಿಲ್ಲುತ್ತವೆಂಬುದು ಇನ್ನೂ ಹೆಚ್ಚು ಆತಂಕ ಹುಟ್ಟಿಸುವಂಥದ್ದು. ಭಾರತದ ಉತ್ತರ-ಪಶ್ಚಿಮ ರಾಜ್ಯಗಳದು ಒಂದು ಗೋಳವಾದರೆ ದಕ್ಷಿಣ-ಪೂರ್ವ ರಾಜ್ಯಗಳದು ಇನ್ನೊಂದು ಗೋಳ. ಕೇಂದ್ರಾಡಳಿತದ ಪ್ರಾಂತಗಳಾದ ದಾದ್ರ, ನಾಗರ್‌ಹವೇಲಿಗಳು ತೀರಾ ಚಿಕ್ಕ ಅಪವಾದಗಳು. ತಮಿಳುನಾಡು ಇನ್ನೊಂದು ಭೌಗೋಳಿಕವಾದ ಅಪವಾದ. ಶಿಶುಮರಣಕ್ಕೂ ಅನುಪಾತದಲ್ಲಿನ ಈ ಅಂತರಗಳಿಗೂ ಆಂತರಿಕ ಸಂಬಂಧವಿದೆ. ಪಶ್ಚಿಮ ಬಂಗಾಳದಲ್ಲಿ ಹೆಣ್ಣು ಶಿಶು ಮರಣ 0.91 ನಷ್ಟಿದ್ದರೆ ಕೇರಳದಲ್ಲಿ 0.93 ಇದೆ. ಆದರೆ ಅದೇ ಪಂಜಾಬ್ ಹರಿಯಾಣ, ಉತ್ತರಪ್ರದೇಶಗಳಲ್ಲಿ ಹೆಣ್ಣುಶಿಶು ಮರಣ 1.30 ರಷ್ಟಿದೆ. ಇದೇ ರೀತಿ ಗುಜರಾತ್, ಬಿಹಾರ, ರಾಜಸ್ಥಾನಗಳಲ್ಲೂ ಉತ್ತರ-ಪಶ್ಚಿಮ ರಾಜ್ಯಗಳಲ್ಲೂ ಈ ಸಂಖ್ಯೆ ಹೆಚ್ಚೇ ಇದೆ.

ಕಣ್ಣಿಗೆ ಗೋಚರಿಸದ ಆದರೆ ಸ್ಪಷ್ಟವಾದ ಸ್ತ್ರೀವಿರೋಧದ ಲಕ್ಷಣವೊಂದು ಉತ್ತರ ಮತ್ತು ಪಶ್ಚಿಮ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಅತಿ ಶ್ರೀಮಂತ ರಾಜ್ಯಗಳಾದ ಪಂಜಾಬ್, ಹರಿಯಾಣಗಳು, ಅತಿ ಬಡರಾಜ್ಯಗಳಾದ ಬಿಹಾರ, ಉತ್ತರಪ್ರದೇಶಗಳು, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಗುಜರಾತ, ಮಹಾರಾಷ್ಟ್ರ ರಾಜ್ಯಗಳೂ ಈ ರೀತಿ ಸ್ತ್ರೀವಿರೋಧಿ ಲಕ್ಷಣ ಬೇರೂರಿರುವ ಸ್ಥಳಗಳಾಗಿವೆ. ಲಿಂಗನಿರ್ದಿಷ್ಟ ಗರ್ಭಪಾತಗಳ ಘಟನೆಗಳನ್ನು ಭ್ರೂಣದ ಲಿಂಗ ಪರೀಕ್ಷಕ ವೈದ್ಯಕೀಯ (ಸೌಕರ್ಯ ಸವಲತ್ತು) ಸಂಪನ್ಮೂಲಗಳ ಲಭ್ಯತೆಯ ಕಾರಣದಿಂದಷ್ಟೇ ವಿವರಿಸಿಬಿಡಲು ಸಾಧ್ಯವಿಲ್ಲ, ಕೇರಳ, ಪಶ್ಚಿಮ ಬಂಗಾಳಗಳಂಥ ಕೊರತೆಯ ಪಟ್ಟಿಗೆ ಸೇರದಂಥ ರಾಜ್ಯಗಳಲ್ಲೂ ಮಧ್ಯಪ್ರದೇಶ ಅಥವಾ ರಾಜಸ್ಥಾನಗಳಲ್ಲಿ ಲಭ್ಯವಿರುವಷ್ಟು ಪ್ರಮಾಣದಲ್ಲೇ ಭ್ರೂಣಲಿಂಗ ಪರೀಕ್ಷೆಯ ಸಾಧನ/ಸೌಕರ್ಯ/ತಂತ್ರಜ್ಞಾನ ಲಭ್ಯವಿದೆ. ಲಿಂಗಾಧರಿತ ಗರ್ಭಪಾತದ ವಾಣಿಜ್ಯ ಸೌಕರ್ಯಗಳು ಕೇರಳ, ಪಶ್ಚಿಮಬಂಗಾಳಗಳಲ್ಲಿ ಅತಿಹೆಚ್ಚು ಕಾಣಿಸದೆ ಇದ್ದರೆ, ಅದಕ್ಕೆ ಅಲ್ಲಿ ಹೆಚ್ಚಿನ ಸರಬರಾಜಿನ ಮೇಲೆ ನಿರ್ಬಂಧ ಹೇರಲಾಗಿದೆ ಎಂಬುದಕ್ಕಿಂತಲೂ ಅಂಥ ಸವಲತ್ತುಗಳಿಗೆ ಕಡಿಮೆ ಬೇಡಿಕೆ ಇದೆ ಎಂಬುದೇ ಸಹಜ ಕಾರಣವಾಗಿರುತ್ತದೆ. ಅಂದರೆ ಆರ್ಥಿಕ ಸಂಪನ್ಮೂಲ, ಭೌತಿಕ ಅಭಿವೃದ್ಧಿ, GNP ಬೆಳವಣಿಗೆಗಳನ್ನು ಮಾತ್ರವೇ ಗಮನಿಸುವ ಬದಲಾಗಿ ಸಾಮಾಜಿಕ-ಸಾಂಸ್ಕೃತಿಕ ಪ್ರಭಾವಗಳು ಸ್ತ್ರೀವಿರೋಧಿ ಲಕ್ಷಣಗಳ ಮೂಲಕಾರಣಗಳು ಎಂಬುದರತ್ತಲೂ ನಾವು ಗಮನ ಹರಿಸಬೇಕಿದೆ.

ಸಾಮಾಜಿಕ ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಈ ನಿಟ್ಟಿನಲ್ಲಿ ಹೆಚ್ಚು ಸಂಶೋಧನೆ ಕೈಗೊಳ್ಳಬೇಕಾದ್ದು ಅವಶ್ಯಕವಿದೆ. ಇದಕ್ಕೂ ರಾಜಕೀಯಕ್ಕೂ ಸಂಬಂಧವಿದೆ. ಉತ್ತರ-ಪಶ್ಚಿಮ ರಾಜ್ಯಗಳೆಲ್ಲ ಧಾರ್ಮಿಕತೆ ಆಧರಿಸಿದ ಮತೀಯ ರಾಜಕೀಯದ ಕಡೆಗೇ ಬೆಳೆಯುತ್ತಿವೆ. ಪೂರ್ವ-ದಕ್ಷಿಣ ರಾಜ್ಯಗಳು ಈ ರೀತಿ ಬೆಳೆದಿಲ್ಲ. ಧಾರ್ಮಿಕತೆ ಕೇಂದ್ರಿತ ರಾಜಕೀಯ ಪಕ್ಷಗಳು ಅಲ್ಲಿ ಅಷ್ಟು ಯಶಸ್ವಿಯಾಗಿಲ್ಲ. 1999ರಲ್ಲಿ ಪಾರ್ಲಿಮೆಂಟಿಗೆ ಚುನಾಯಿತರಾದ ಪ್ರತಿನಿಧಿಗಳ ಪೈಕಿ 197 ಜನರು ಭಾರತೀಯ ಜನತಾಪಕ್ಷ, ಶಿವಸೇನೆಗಳಿಂದಲೇ ಆಯ್ಕೆಗೊಂಡಿದ್ದವರು. ಅವರಲ್ಲಿ 169 ಜನ ಪ್ರತಿನಿಧಿಗಳು ಉತ್ತರ ಹಾಗೂ ಪಶ್ಚಿಮ ರಾಜ್ಯಗಳಿಗೇ ಸೇರಿದವರು. ಬಿಹಾರ, ಮಧ್ಯಪ್ರದೇಶ ಮತ್ತು ಈಚೆಗೆ ರಾಜ್ಯಗಳೆನಿಸಿರುವ ಜಾರ್ಖಂಡ, ಛತ್ತೀಸ್‌ಘಡಗಳಂಥ ಪೂರ್ವರಾಜ್ಯಗಳಿಂದ ಆಯ್ಕೆಗೊಂಡವರೂ ಸಾಪೇಕ್ಷವಾಗಿ ಸಂಘ ಪರಿವಾರದ ಪ್ರಾತಿನಿಧ್ಯವನ್ನು ದುರ್ಬಲಗೊಳಿಸಲು ಶಕ್ತರಾಗಿಲ್ಲ. ಈ ರೀತಿಯ ಪ್ರಾದೇಶಿಕ, ಸಾಂಸ್ಕೃತಿಕ ಸಂಬಂಧಗಳು ಎಷ್ಟರಮಟ್ಟಿಗೆ ಜೆಂಡರ್ ಅಸಮಾನತೆಯ ವಿಷಯಕ್ಕೆ ಮುಖ್ಯವಾಗುತ್ತವೆ, ಹೇಗೆ ಇವು ಅದನ್ನು ಹೆಚ್ಚಿಸಬಲ್ಲ ಕಾರಣಗಳಾಗಿ ಪ್ರಭಾವ ಬೀರುತ್ತವೆ ಎಂಬ ಬಗ್ಗೆ ಇನ್ನಷ್ಟು ಸೂಕ್ಷ್ಮವಾಗಿ ಪರೀಕ್ಷಿಸದೆ ತೀರ್ಮಾನಿಸುವುದು ಕಷ್ಟ. ❑


ಸೂಚನೆ : *ಮೇಲೆ ಸೂಚಿಸಿದ ಅಂಕಿ-ಅಂಶಗಳ ಅನಂತರ ಹೊಸ ಅಂಕಿ ಅಂಶಗಳು ಬಂದಿವೆ. ಅನಂತರವೂ ಯಾವ ಸುಧಾರಣೆಯನ್ನೂ ಕಾಣಲು ಸಾಧ್ಯವಾಗಿಲ್ಲ.*

ಸಂಗೀತ ಕ್ಷೇತ್ರದಲ್ಲಿ ಮಹಿಳೆ ನಡೆದು ಬಂದ ದಾರಿ

■ಡಾ. ಮೀರಾ ಆರ್. ಪ್ರಾಣೇಶ್

(ಹಿಂದಿನ ಸಂಚಿಕೆಯಿಂದ)

ಸುಮಾರು 20ನೇ ಶತಮಾನದ ಆದಿಯಲ್ಲಿ ಮಹಿಳೆಯರು ರಂಗಭೂಮಿ ನಟನೆಯನ್ನು ವೃತ್ತಿಯನ್ನಾಗಿ ಆರಿಸಿಕೊಳ್ಳುವುದಕ್ಕೆ ಸಮಾಜ ಪ್ರೋತ್ಸಾಹಿಸುತ್ತಿರಲಿಲ್ಲ. ಹಿಂದೂಸ್ತಾನಿ ಸಂಗೀತಗಾರರಾಗಿದ್ದ ಹೀರಾಬಾಯಿ ಬರೋಡೆಕರ್ (ಕ್ರಿ.ಶ. 1905–1989) ಈ ಸಂಪ್ರದಾಯಗಳನ್ನು ಮುರಿದು, ನಾಟಕಗಳಲ್ಲಿ ಪಾತ್ರವಹಿಸಲು ಪ್ರಾರಂಭಿಸಿದರು. ರಂಗಗೀತೆಗಳನ್ನು ಹಾಡುವುದರಲ್ಲಿ ತನ್ನದೇ ಆದ ಒಂದು ಶೈಲಿಯನ್ನು ಅಳವಡಿಸಿ ಕೊಂಡಿದ್ದರು. ನಾಲ್ಕು ಸಿನಿಮಾಗಳಲ್ಲು ನಾಯಕಿಯಾಗಿ ನಟಿಸಿ, ನಂತರ ಸಂಗೀತ ಕಚೇರಿಗಳನ್ನು ನೀಡುವು ದರಲ್ಲೇ ಹೆಚ್ಚು ತೃಪ್ತಿ ಕಂಡು, ವೇದಿಕೆ ವಿದ್ವಾಂಸರಾಗಿ ಯಶಸ್ಸು ಗಳಿಸಿದರು. ಪಂಡಿತ ಪಾಮರರೆಲ್ಲರೂ ಖುಷಿಯಿಂದ ಆಲಿಸುವಂಥ ರಾಗಗಳನ್ನು, ರಚನೆಗಳನ್ನು ಆರಿಸಿಕೊಂಡು ಹಾಡುತ್ತಿದ್ದರು. ಹೀರಾಬಾಯಿಯವರು ಉತ್ತಮ ಕಚೇರಿ ಯೋಜಕರೆಂದೇ ಹೆಸರುವಾಸಿಯಾಗಿದ್ದರು. ನೂತನ ಸಂಗೀತ ವಿದ್ಯಾಲಯ ಎಂಬ ಸಂಗೀತ ಶಾಲೆಯನ್ನು ಪ್ರಾರಂಭಿಸಿ, ಕುಲೀನ ಮನೆತನದ ಹೆಣ್ಣು ಮಕ್ಕಳಿಗೆ ಸಂಗೀತ ಕಲಿಸುವಂಥ ದಿಟ್ಟ ಹೆಜ್ಜೆಯನ್ನಿಟ್ಟಿದರು.



ವಿದುಷಿ ಸಿದ್ಧೇಶ್ವರ ದೇವಿ

ನೃತ್ಯದಂತೆ ಸಂಗೀತವೂ ಬರೇ ಮನರಂಜನೆ ನೀಡುವ ವರ್ಗದವರಿಗೆ ಅಂದರೆ ದೇವದಾಸಿಯರಿಗೆ ಮಾತ್ರ ಮೀಸಲಾಗಿತ್ತು. ಹೀಗಿರುವಾಗ ಕುಲೀನ ಮನೆತನದ ಸ್ತ್ರೀಯರು ಹೊರಬಂದು ವೇದಿಕೆ ಹತ್ತಿ ಕಚೇರಿ ಮಾಡೋಣವೆಂದರೇನು? ಆಗ ಧೈರ್ಯವಾಗಿ ಸಂಗೀತ ಪ್ರಪಂಚಕ್ಕೆ ಹೆಜ್ಜೆ ಇಟ್ಟವರು ಬ್ರಾಹ್ಮಣ ವರ್ಗಕ್ಕೆ ಸೇರಿದ ಡಿ.ಕೆ. ಪಟ್ಟಮ್ಮಾಳ್‌ರವರು. ವಸಂತಕೋಕಿಲಾ ಬ್ರಾಹ್ಮಣ ಮಹಿಳೆಯಾಗಿದ್ದು, ಪಟ್ಟಮ್ಮಾಳ್‌ಗೆ ಸ್ವಲ್ಪ ಮುಂಚೆ ಬಂದಿದ್ದರೂ, ಚಿಕ್ಕವಯಸ್ಸಿನಲ್ಲಿಯೇ ನಿಧನರಾಗಿದ್ದರು. ಹಾಗಾಗಿ ಪಟ್ಟಮ್ಮಾಳ್ ಬಹಳಷ್ಟು ವಿರೋಧಗಳನ್ನು ಎದುರಿಸಿ, ಮುನ್ನಡೆದು, ಕುಲೀನ ಮನೆತನದ ಸ್ತ್ರೀಯರೂ ಕಚೇರಿಗಳನ್ನು ಮಾಡಬಹುದೆಂದು ತೋರಿಸಿಕೊಟ್ಟವರಲ್ಲಿ ಅಗ್ರಗಣ್ಯರು. ರಾಗ, ತಾನ, ಪಲ್ಲವಿಯನ್ನು ಹಾಡುವುದಕ್ಕೆ ಬುದ್ಧಿವಂತಿಕೆ ಹೆಚ್ಚಿರಬೇಕೆಂದೂ, ಅದು ಮಹಿಳೆಯರಿಗೆ ಹಾಡುವುದಸಾಧ್ಯವೆಂದು ಅವಕಾಶ ನೀಡುತ್ತಿರಲಿಲ್ಲ. ಪೊನ್ನಯ್ಯ ಪಿಳ್ಳೆಯವರಿಂದ ರಾಗ, ತಾನ, ಪಲ್ಲವಿಗಳನ್ನು ಕಲಿತು ಪಟ್ಟಮ್ಮಾಳ್‌ರವರು ಪುರುಷರಿಗಿಂತ ಯಾವ ರೀತಿಯಲ್ಲೂ ಮಹಿಳೆ ಕಡಿಮೆಯಿಲ್ಲವೆಂದು ಹಾಡಿ ತೋರಿಸಿದರು. ಎಂ.ಎಸ್. ಸುಬ್ಬಲಕ್ಷ್ಮಿ, ಎಂ.ಎಲ್. ವಸಂತಕುಮಾರಿ ಮತ್ತು ಡಿ.ಕೆ. ಪಟ್ಟಮ್ಮಾಳ್‌ರವರ ವಿದ್ವತ್ತನ್ನು ಸಂಗೀತಗಾರರು ಮತ್ತು ಸಹೃದಯಿಗಳು ಮೆಚ್ಚಿ, ಕರ್ನಾಟಕ ಸಂಗೀತದ ತ್ರಿಮೂರ್ತಿಗಳೆಂದು ತಿಳಿದು ಎಂದು ಗೌರವಿಸಿದರೋ, ಅಂದಿನಿಂದ ಸಂಗೀತ ಪ್ರಪಂಚದಲ್ಲಿ ಮಹಿಳಾ ಸಂಗೀತಗಾರರ ಸ್ಥಾನ ಭದ್ರವಾಯಿತು. ಈ ಮೂವರು ಕಲಾವಿದರು ಸಂಗೀತಕ್ಕೆ ಯಾವುದೇ ಲಿಂಗಭೇದವಿಲ್ಲ ವೆಂದು ತೋರಿಸಿಕೊಟ್ಟು ನೂರಾರು ಮಹಿಳಾ ಸಂಗೀತಗಾರರು ವೇದಿಕೆ ವಿದ್ವಾಂಸರಾಗಲು ಕಾರಣರಾದರು. ಕಚೇರಿಗಳೇನೋ ಮಾಡು ವಂತಾದರೂ, ಅನೇಕ ಹಿರಿಯ ವಿದ್ವಾಂಸರು ಮಹಿಳೆಯರಿಗೆ ಪಕ್ಕವಾದ್ಯದಲ್ಲಿ ಸಹಕರಿಸಲು ಒಪ್ಪುತ್ತಿರಲಿಲ್ಲ. ಮೈಸೂರಿನ ಸುಪ್ರಸಿದ್ಧ ಪಿಟೀಲು ವಾದಕರಾಗಿದ್ದ ಟಿ. ಚೌಡಯ್ಯನವರು ಎಂ.ಎಸ್. ಸುಬ್ಬಲಕ್ಷ್ಮಿ ಯವರಿಗೆ ಪಿಟೀಲು ಸಹಕಾರ ನೀಡಿದಂದಿನಿಂದ ಆ ತೆರೆ ಕೂಡ ಕಳಚಿತು.


ಹಿಂದೂಸ್ತಾನಿ ಸಂಗೀತದ ಅಂಜನೀಬಾಯಿ ಮಾಲ್‌ಪೇಕರ್ (ಕ್ರಿ.ಶ. 1883–1974)ರವರಂತೂ ಕಚೇರಿಗೆ ವೇದಿಕೆ ಮೇಲೆ ಕೂತರೆಂದರೆ ಆ ಹಾಡುವಿಕೆ, ಪ್ರಸ್ತುತಪಡಿಸುತ್ತಿದ್ದಂಥಾ ಶೈಲಿ ಎಲ್ಲವೂ ಬಹಳ ಆಕರ್ಷಕವಾಗಿರುತ್ತಿದ್ದಿತು. ಖ್ಯಾತ ಚಿತ್ರಗಾರ ರಾಜಾ ರವಿವರ್ಮ ಕಚೇರಿಯಲ್ಲಿ ಇವರು ಹಾಡುವುದರ ಚಿತ್ರವನ್ನು ಬಿಡಿಸುತ್ತೇನೆಂದಾಗ ಅಂಜನೀ ಬಾಯಿಯವರು ಒಪ್ಪಿರಲಿಲ್ಲ. ಆದರೆ ಆತ ಅವರ ಕಚೇರಿಗಳನ್ನು ಕೇಳಲು ಹೋದಾಗ, ಹೇಗೋ ನಿಭಾಯಿಸಿಕೊಂಡು ಇವರು ಹಾಡುವುದರ ಚಿತ್ರವನ್ನು ಬಿಡಿಸಿದ್ದರು. ಬಹಳ ಬೇಡಿಕೆ ಯಲ್ಲಿದ್ದಾಗಲೆ ಕಚೇರಿ ಮಾಡುವುದರಿಂದ ನಿವೃತ್ತರಾದರು. ನಂತರ ಶಿಷ್ಯರಿಗೆ ಸಂಗೀತವನ್ನು ಹೇಳಿಕೊಡುವುದರಲ್ಲಿ ತಮ್ಮ ಜೀವನವನ್ನು ಕಳೆದರು.

ಖ್ಯಾತ ಠುಮರೀ ಗಾಯಕಿ ಸಿದ್ಧೇಶ್ವರಿ ದೇವಿ (ಕ್ರಿ.ಶ.1903–1977) ವೈಯಕ್ತಿಕ ಕಾರಣಗಳಿಂದ ತಮ್ಮ ಸಂಗೀತದ ಜೀವನವನ್ನು ಬಹಳ ಕಷ್ಟದಿಂದ ಪ್ರಾರಂಭಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು, ಚಿಕ್ಕಮ್ಮನ ಮನೆಯಲ್ಲಿ ಬೆಳೆಯುತ್ತಿದ್ದರು. ಚಿಕ್ಕಮ್ಮ ತಮ್ಮ ಮಗಳಿಗೆ ಸಿಯಾಜಿ ಮಹಾರಾಜರಿಂದ ಸಂಗೀತವನ್ನು

ಹೇಳಿಸುತ್ತಿದ್ದು, ಸಿದ್ಧೇಶ್ವರಿ ಕಲಿಯಲು ಹಂಬಲಿಸುತ್ತಿದ್ದರೂ, ಆಕೆಗೆ ಕಲಿಸಲು ಮನಸ್ಸು ಮಾಡಲಿಲ್ಲ. ಹಾಡನ್ನು ಗುನುಗುತ್ತಾ ಮನೆ ಕೆಲಸವನ್ನು ಮಾಡಿಕೊಂಡಿರುತ್ತಿದ್ದ ಈ ಹುಡುಗಿಯ ಆಸಕ್ತಿಯನ್ನು ಗಮನಿಸಿ, ಸಿಯಾಜಿಯವರು ಚಿಕ್ಕಮ್ಮನ ಮಗಳ ಬದಲಿಗೆ ಸಿದ್ಧೇಶ್ವರಿಗೆ ಸಂಗೀತವನ್ನು ಹೇಳಿಕೊಡುತ್ತೇನೆಂದರು. ಫಲಿತಾಂಶ, ಈಕೆಗೆ ಆಶ್ರಯವಿಲ್ಲದಂತಾಗಿ ಸೋದರ ಮಾವನಲ್ಲಿ ಸಹಾಯ ಬೇಡಿ, ಅವರ ಮನೆಯಲ್ಲಿ ಕೆಲಸ ಮಾಡಿಕೊಂಡು ಸಂಗೀತವನ್ನು ಕಲಿತು ಒಬ್ಬ ಅತ್ಯುತ್ತಮ ಗಾಯಕಿಯೆನಿಸಿಕೊಂಡರು. ಹಾಡುವಿಕೆಯ ಮೂಲಕ ಹಲವಾರು ಚಲನಚಿತ್ರಗಳಲ್ಲಿ ಪಾತ್ರ ವಹಿಸಿದ್ದರು.

ಕೆಲವು ಮಹಿಳೆಯರ ವೈವಾಹಿಕ ಜೀವನ ಸುಖಮಯವಾಗಿದ್ದು, ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಿ ಯಶಸ್ಸು ಕಂಡಿರುವವರಿದ್ದರೆ, ವೈವಾಹಿಕ ಜೀವನದಿಂದ ಕೆಲವು ಮಹಿಳೆಯರು ಸಂಗೀತವನ್ನು ಬಿಡಬೇಕಾದ ಪ್ರಸಂಗಗಳೂ ನಡೆದಿವೆ. ಬೇಗಮ್ ಅಕ್ತರ್ (ಕ್ರಿ.ಶ. 1914–1974) ಚಿಕ್ಕ ವಯಸ್ಸಿನಲ್ಲಿ ತನ್ನ ತಾಯಿ ಮತ್ತು ಗುರುಗಳ ಇಚ್ಛೆಗೆ ವಿರುದ್ಧವಾಗಿ ವ್ಯಾಪಾರ ದೃಷ್ಟಿಯಿದ್ದ ಧ್ವನಿಮುದ್ರಣ ಒಂದಕ್ಕೆ ಹಾಡಿದ್ದ ದಿಟ್ಟಹೆಣ್ಣು. ಸಿನಿಮಾಗಳಲ್ಲಿ ಪಾತ್ರವಹಿಸಿದರೆ ಗುರುಗಳು ಸಂಗೀತವನ್ನೆ ಹೇಳಿಕೊಡುವುದಿಲ್ಲವೆಂದಿದ್ದರೂ, ಪಾತ್ರವಹಿಸಿದ್ದಂಥವರು. ರಾಂಪುರ್ ರಾಜ್ಯದ ಆಸ್ಥಾನ ವಿದುಷಿಯಾಗಿದ್ದರು. ಇಂಥಾ ಒಬ್ಬ ಧೈರ್ಯಶಾಲಿ ಹೆಣ್ಣು ಇಷ್ತಿಯಾಕ್ ಮಹಮ್ಮದ್ ಅಬ್ಬಾಸಿಯವರನ್ನು ವಿವಾಹವಾದ ಕೆಲವು ಕಾಲದ ನಂತರ, ಪತಿಯ ಆಣತಿಯ ಮೇರೆಗೆ ಸಂಗೀತವನ್ನೇ ಬಿಡಬೇಕಾಯಿತು. ಇದರಿಂದ ಆಕೆಯ ಆರೋಗ್ಯ ಅಸ್ವಸ್ಥವಾಗಿ, ವೈದ್ಯರ ಸಲಹೆಯ ಮೇರೆಗೆ ಮಹಮ್ಮದ್‌ರವರು, ಸಂಗೀತ ಪ್ರಪಂಚಕ್ಕೆ ಪತ್ನಿಯ ಪುನಃಪ್ರವೇಶಕ್ಕೆ ಒಪ್ಪಿಗೆ ನೀಡುವಂತಾಯಿತು.

ಪ್ರಖ್ಯಾತ ಸಂಗೀತಗಾರರಾದ ಗಂಗೂಬಾಯಿ ಹಾನಗಲ್ ಕರ್ನಾಟಕದ ಧ್ರುವತಾರೆಯಾಗಿ ಮಿಂಚಿರುತ್ತಾರೆ. ತಾಯಿ ಅಂಬಾಬಾಯಿ ಕರ್ನಾಟಕ ಸಂಗೀತವನ್ನು ಹಾಡುತ್ತಿದ್ದು, ಮಗಳಿಗೂ ಪ್ರಾರಂಭದಲ್ಲಿ ಅದನ್ನೇ ಹೇಳಿಕೊಟ್ಟರೂ, ಗಂಗೂಬಾಯಿ ಹಿಂದೂಸ್ತಾನಿ ಸಂಗೀತದ ಕಡೆಗೆ ವಾಲಿದ್ದರು. ಹಲವು ಕಾಲ ಹುಲಗೂರು ಕೃಷ್ಣಾಚಾರ್ಯ ಮತ್ತು ದತ್ತೋಪಂತ ದೇಸಾಯಿಯವರಲ್ಲಿ ಕಲಿತು ನಂತರ ಸುಪ್ರಸಿದ್ಧ ವಿದ್ವಾಂಸರಾಗಿದ್ದ ಸವಾಯಿ ಗಂಧರ್ವರಲ್ಲಿ ಶಿಷ್ಯರಾಗಿ ಸೇರಿದರು. ಪದ್ಧತಿಯಂತೆ ಗುರುಗಳಿಗೆ 20 ತೊಲ ಬಂಗಾರವನ್ನು ಗುರುದಕ್ಷಿಣೆಯಾಗಿ ನೀಡಿದ್ದರು. ಪ್ರಾರಂಭದ ದಿನಗಳಲ್ಲಿ ಗಂಟಲಿನ ತೊಂದರೆಯಾಗಿ, ಇವರ ಧ್ವನಿ ಗಡುಸಾಗಿತ್ತು. ಆದರೆ ಅವರ ವಿಶಿಷ್ಟ ಕಂಠ, ವಿದ್ವತ್‌ಪೂರ್ಣ ಹಾಡುವಿಕೆ ಇಂದಿಗೂ ಕಲಾ ರಸಿಕರನ್ನು ಮೋಡಿ ಮಾಡಿಸುತ್ತದೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕನಕ ಪುರಂದರ ಪ್ರಶಸ್ತಿಯನ್ನು ಪಡೆದ ಮೊದಲ ಮಹಿಳಾ ಸಂಗೀತಗಾರರು ಡಾ. ಗಂಗೂಬಾಯಿ ಹಾನಗಲ್‌ರವರು. ಸರಳಾ ಭಿಡೆ, ಮೋಗುಬಾಯಿ ಕುರುಡಿಕರ್, ಗಿರಿಜಾದೇವಿ, ಶೋಭಾ ಗುರ್ಟು, ಪ್ರಭಾ ಅತ್ರೆ, ಪರವೀನ್ ಸುಲ್ತಾನ, ಲಕ್ಷ್ಮೀಭಾವೆ, ಕಿಶೋರಿ ಅಮೋಣ್‌ಕರ್, ಲಲಿತಾ ಉಭಯಕರ್, ಲಲಿತ್.ಜೆ.ರಾವ್, ಶ್ಯಾಮಲಾ. ಜಿ. ಭಾವೆ, ವೀಣಾ ಸಹಸ್ರಬುದ್ಧೆ, ಡಾ. ಶಕುಂತಲಾ ನರಸಿಂಹನ್ ಮುಂತಾದ ಇನ್ನೂ ಅನೇಕ ಮಹಿಳಾ ಹಿಂದೂಸ್ತಾನಿ ಸಂಗೀತಗಾರರು ಕಚೇರಿ ನೀಡಿ, ಶಿಷ್ಯರನ್ನು ತಯಾರು ಮಾಡುವ ಮೂಲಕ ತಮ್ಮ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಶ್ಯಾಮಲಾ.ಜಿ. ಭಾವೆ ಮತ್ತು ಶಕುಂತಲಾ ನರಸಿಂಹನ್ ಕರ್ನಾಟಕ ಮತ್ತು ಹಿಂದೂಸ್ತಾನಿ



ವಿದುಷಿ ಗಂಗೂಬಾಯಿ ಹಾನಗಲ್

ಸಂಗೀತ ಎರಡರಲ್ಲೂ ಶಿಕ್ಷಣ ಪಡೆದು, ಉಭಯಗಾನ ವಿದುಷಿಯರೆನಿಸಿದ್ದಾರೆ.

ಮತ್ತೊಂದು ವಿಷಯವನ್ನು ಗಮನಿಸಿದರೆ, ಎಷ್ಟೋ ಸಲ ಮಹಿಳೆಯರೇ ಸಂಗೀತಗಾರರಿಗೆ ಪ್ರೋತ್ಸಾಹ ನೀಡಿಲ್ಲದಿರುವುದನ್ನು ಕಾಣುತ್ತೇವೆ. 1950ರ ದಶಕದಲ್ಲೂ ಕೆಲವು ಮನೆತನಗಳು ಸಂಗೀತವನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ಖ್ಯಾತ ವೀಣಾವಾದಕರಾದ ರಾಜಲಕ್ಷ್ಮಿ ತಿರುನಾರಾಯಣನ್ ತಂದೆಯ ಮನೆಯಲ್ಲಿ ಸಂಗೀತವನ್ನು ಕಲಿತಿದ್ದರೂ, ಒಬ್ಬ ಸುಸಂಸ್ಕೃತ, ಮುಂದುವರೆದ ಮನೆತನಕ್ಕೆ ಸೊಸೆಯಾಗಿ ಕಾಲಿಟ್ಟ ಮೇಲೆ ಅತ್ತೆಯ ಕಟ್ಟುನಿಟ್ಟಿನ ಆಣತಿ –ರೇಡಿಯೋನಲ್ಲಿ ವೀಣೆ ನುಡಿಸಬಾರದು, ಯಾರ ಮನೆಗೆ ಹೋದರೂ ಹಾಡಬಾರದು ಅಥವ ವೀಣೆ ನುಡಿಸಬಾರದು, ಕಚೇರಿಯಂತೂ ನೀಡಲೇಬಾರದು... ಹೀಗೆ ಅನೇಕ ಕಟ್ಟಳೆಗಳನ್ನು ಹಾಕಲಾಗಿತ್ತು. ಸದ್ಯ ಮನೆಯಲ್ಲಿ ವೀಣೆ ನುಡಿಸಿಕೊಳ್ಳಲು ಅನುಮತಿಯಿತ್ತು. ಇವರಿಗೆ ಸಂಗೀತವನ್ನು ಮುಂದುವರೆಸಲು ಎಷ್ಟು ಹಂಬಲವಿತ್ತೆಂದರೆ, ಹಲವಾರು ವರ್ಷಗಳ ನಂತರ ಪತಿಯ ಒಪ್ಪಿಗೆ ಪಡೆದು, ವೀಣಾವಾದನದಲ್ಲಿ ಪ್ರವೀಣರಾಗಿ, ಇಂದು ಪ್ರಖ್ಯಾತ ವೀಣಾ ವಿದ್ವಾಂಸರಾದರಲ್ಲದೆ, ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಜೊತೆಗೆ ಆಕಾಶವಾಣಿ ಎ–ಟಾಪ್ ಶ್ರೇಣಿ ಕಲಾವಿದರಾಗಿ, ಅನೇಕ ಪ್ರತಿಷ್ಠಿತ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಅನೇಕ ಸಂಘಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಮಹಿಳೆಯರು ಎದುರಿಸಿದಂಥ ಮತ್ತೊಂದು ಪ್ರಮುಖ ಸಮಸ್ಯೆ ಅವರ ಚಾರಿತ್ರ್ಯದ ಬಗ್ಗೆ ಅಪಪ್ರಚಾರ ಮಾಡುವಂಥದ್ದು. ಒಬ್ಬ ಗುರುಗಳು ಪ್ರತಿಭಾವಂತ ಮಹಿಳಾ ಶಿಷ್ಯರಿಗೆ ಸ್ವಲ್ಪ ಹೆಚ್ಚು ಪಾಠಮಾಡಿದರೆ, ಗುರು ಶಿಷ್ಯರ ನಡುವೆ ಅಕ್ರಮ ಸಂಬಂಧಗಳನ್ನು ಕಲ್ಪಿಸುವುದಕ್ಕೂ ಹಿಂಜರಿಯುತ್ತಿರಲಿಲ್ಲ ನಮ್ಮ ಸಮಾಜ. ಸಂಗೀತ ವಿದುಷಿ ಮತ್ತು ಸಂಗೀತ ತಜ್ಞೆ ಡಾ. ಹೆಚ್.ಎಸ್. ಅನಸೂಯಾ ಕುಲಕರ್ಣಿಯವರ ಅನುಭವದಲ್ಲಿ ಮದುವೆಯಾಗ ದಿದ್ದರಂತೂ ಆ ಹೆಣ್ಣುಮಕ್ಕಳು ಕಚೇರಿ ನೀಡುವಂತಿರಲಿಲ್ಲ. ಇಷ್ಟರ ಮೇಲೂ ಆ ಹೆಣ್ಣು ವೇದಿಕೆ ಮೇಲೋ ಅಥವಾ ಸಿನಿಮಾದಲ್ಲೋ ಶಾಸ್ತ್ರೀಯ ಸಂಗೀತವನ್ನೇ ಹಾಡಿದರೂ ವಿವಾಹವಾಗುವುದು ಕಷ್ಟವಾಗುತ್ತಿತ್ತು. ಮದುವೆಗೆ ಹೆಣ್ಣು ನೋಡಲು ಬಂದವರೆಲ್ಲಾ 'ನಮಗೆ ಮಜ್ಜಿಗೆಹುಳಿ ಅಂಬೋಡೆ ಮಾಡುವಂಥ ಹೆಣ್ಣು ಬೇಕೇ ವಿನಃ ಸಂಗೀತ ಕಚೇರಿ ಮಾಡುವಂಥವಳಲ್ಲ.' ಅನ್ನುತ್ತಿದ್ದರೂ ಹೋಗಲಿ ಕಲಿತಿರುವ ವಿದ್ಯೆಯನ್ನು ನಾಲ್ಕಾರು ಮಂದಿಗೆ ಹೇಳಿಕೊಡೋಣವೆಂದರೆ, ಒಂದು ಹೆಣ್ಣಿನ ಕೈಲಿ ದುಡಿಸಿ ಅವಳ ಸಂಪಾದನೆಯಿಂದ ಜೀವನ ಸಾಗಿಸುತ್ತಾರೆಂಬ ದೂಷಣೆ. ಆದರೆ ಅನಸೂಯರವರ ಜೀವನದಲ್ಲಿ ವಿವಾಹದ ನಂತರ ಪತಿ ನೀಡಿದಂಥ

ಪ್ರೋತ್ಸಾಹ ಹಿರಿದಾಗಿತ್ತು. ಕೆಲಸದ ನಿಮಿತ್ತ ಪತಿ ಹೊರ ದೇಶಗಳಿಗೆ ಪ್ರಯಾಣ ಮಾಡಿದಾಗ, ಅನಸೂಯರವರು ಹೋದೆಡೆಯಲ್ಲೆಲ್ಲಾ ಅಲ್ಲಿನ ವಾದ್ಯಗಳನ್ನು ಸಂಗ್ರಹಿಸಿ, ಅಭ್ಯಾಸಮಾಡಿ, ಅವುಗಳನ್ನು ಭಾರತಕ್ಕೆ ತಂದರು. ಇಂದು ಅವರ ಮನೆಯಲ್ಲಿ ಪ್ರಪಂಚದ ಹಲವಾರು ವಾದ್ಯಗಳ ಸಂಗ್ರಹವಿದೆ. ವಾದ್ಯಗಳ ಅಧ್ಯಯನ ನಡೆಸಿ, ಡಾಕ್ಟೊರೇಟ್ ಪದವಿಯನ್ನು ಪಡೆದು, ಅಂಕ್‌ಲಂಗ್ ಎಂಬ ವಿದೇಶೀ ವಾದ್ಯದಲ್ಲಿ ಕರ್ನಾಟಕ ಸಂಗೀತವನ್ನು ಉತ್ತಮವಾಗಿ ನುಡಿಸುವ ಹೆಗ್ಗಳಿಕೆ ಇವರದು.

ಮಹಿಳೆಯರಲ್ಲಿ ಸಂಗೀತಗಾರರು, ರಚನಾಕಾರರು ಕಂಡು ಬಂದರೂ, 20ನೇ ಶತಮಾನದವರೆಗೂ ಮಹಿಳಾ ಲಕ್ಷಣತಜ್ಞರು ಹಾಗೂ ಗ್ರಂಥರಚನಾಕಾರರು ಕಂಡು ಬರುವುದಿಲ್ಲ. ಮಹಿಳೆಗೆ ಸಂಗೀತಶಾಸ್ತ್ರದ ಬಗ್ಗೆ ಚರ್ಚೆ ಮಾಡುವ ಅಧಿಕಾರವಿರಲಿಲ್ಲವೋ, ಅಥವಾ ಅವಳೇನು ಶಾಸ್ತ್ರದ ಬಗ್ಗೆ ತಿಳಿದು ಮಾತನಾಡಬಹುದೆಂಬ ಅಸಡ್ಡೆಯೋ ತಿಳಿಯದು. ಅಷ್ಟೇಕೆ, ಸಂಗೀತದ ಬಗ್ಗೆ ಪುಸ್ತಕಗಳನ್ನು ಬರೆಯಲಿಕ್ಕೂ ಅವಳಿಗೆ ಪ್ರೋತ್ಸಾಹ ನೀಡುತ್ತಿರಲಿಲ್ಲ. ಡಾ. ಪ್ರೇಮಲತಾ ಶರ್ಮ, ಡಾ. ಗಾಯತ್ರಿ ರಾಜಾಪುರ ಕ್ಯಾಸೆಬಾಮ್, ಡಾ. ಎಂ.ಬಿ. ವೇದವಲ್ಲಿ, ಡಾ. ಸೀತಾ, ತಿರುಮಲೈ ಸಹೋದರಿಯರಾದ ಶಾರದ ಮತ್ತು ಡಾ. ಶಚೀದೇವಿ, ಡಾ. ಎಸ್.ಎ.ಕೆ. ದುರ್ಗಾ, ಡಾ. ಕಪಿಲಾ ವಾತ್ಸಾಯನ, ಡಾ. ಕಮಲಾ ಪುರಂದರೆ, ಜಿ. ಚೆನ್ನಮ್ಮ ಮುಂತಾದವರೆಲ್ಲಾ ಸಂಗೀತದ ಬಗ್ಗೆ ಪುಸ್ತಕಗಳನ್ನು ಬರೆದರು. ಕೆಲವರು ಇವರನ್ನು ಪ್ರೋತ್ಸಾಹಿಸಿದರೆ, ಇನ್ನಿತರರು ಬೈಗುಳಗಳ ಸುರಿಮಳೆಗಳನ್ನೆಸಗಿದರು. ತಿರುಮಲೈ ಸಹೋದರಿಯರು 1962ರಲ್ಲಿ ತಮ್ಮ ಮೊದಲ ಪುಸ್ತಕ 'ಕರ್ನಾಟಕ ಸಂಗೀತ ದರ್ಪಣ'ವನ್ನು ಬರೆದಾಗ, ತಾಯಿ ಪ್ರೋತ್ಸಾಹಿಸಿದರೂ, ಹೊರಗಿನವರೊಂದಿಗೆ ಇವರ ತಂದೆಯೇ 'ದೊಡ್ಡ ದೊಡ್ಡ ಸಂಗೀತಗಾರರೆಲ್ಲಾ ಇರುವಾಗ ನೀವು ಮಹಿಳೆಯರು, ನಿಮ್ಮದೇನು ತಲೆಹರಟೆ' ಎಂದು ಗದರಿಸಿದ್ದರಂತೆ.

ಮಹಿಳೆ ಲಯವಾದ್ಯಗಳನ್ನು ನುಡಿಸುವುದಕ್ಕೆ ಪ್ರಾರಂಭಿಸಿದಾಗಲೂ ಇದೇ ಪ್ರಕ್ರಿಯೆ ಇತ್ತು. ಮಹಿಳೆಗೆ ಲಯವಾದ್ಯವನ್ನು ನುಡಿಸುವುದಕ್ಕೆ ಶಕ್ತಿ ಮತ್ತು ಚತುರತೆ ಎರಡೂ ಸಾಲದೆಂಬ ಅಭಿಪ್ರಾಯ ಸಂಗೀತ ಗಾರರಿಗಿತ್ತು. ಜಗನ್ಮಾತಾ ವಾಸುದೇವಮೂರ್ತಿ, ಕರ್ನಾಟಕದಲ್ಲಿ ಮೃದಂಗವನ್ನು ಕಲಿತ ಪ್ರಪ್ರಥಮ ಮಹಿಳೆ. ನಂತರ ಅನೇಕ ಮಹಿಳೆಯರು ಲಯವಾದ್ಯಗಳನ್ನು ಕಲಿತು ನುಡಿಸುತ್ತಿದ್ದಾರೆ. ಪ್ರಖ್ಯಾತ ಮಹಿಳಾ ಘಟ ವಾದಕರಾದ ಸುಕನ್ಯಾ ರಾಂಗೋಪಾಲ್‌ರವರ ಅನುಭವದ ನುಡಿಗಳಲ್ಲಿ ಹೇಳಬೇಕೆಂದರೆ–"ಪ್ರೇಕ್ಷಕರು ನನ್ನ ವಾದನವನ್ನು ಸ್ವೀಕರಿಸಿದರೂ ಕೆಲವು ಸಂಗೀತಗಾರರು ಅಷ್ಟು ಸಂತೋಷದಿಂದ ಸ್ವೀಕರಿಸಲಿಲ್ಲ. ಕಚೇರಿಗಳಲ್ಲಿ ಅನೇಕ ವೇಳೆ ಮನಸ್ಸಿಗೆ ಬೇಸರವಾಗುವಂತೆ ಸಂಗೀತ ಗಾರರು ನಡೆದುಕೊಂಡಿರುತ್ತಾರೆ. ಪಕ್ಕವಾದ್ಯ ವಾದ ಪಿಟೀಲಿಗೆ ಉಪ ಪಕ್ಕವಾದ್ಯವಾದ ಘಟ ನುಡಿಸಬೇಕಾಗುತ್ತದೆ. ಕೆಲವು ಪಿಟೀಲು ವಿದ್ವಾಂಸರಿಗೆ ಮಹಿಳಾ ಉಪಪಕ್ಕ ವಾದ್ಯಗಾರರು ಸಹಕಾರ ನೀಡುವುದು ಬೇಕಿಲ್ಲದೆ, ಮೃದಂಗದವರನ್ನೇ ನುಡಿಸಲು ಹೇಳುತ್ತಾರೆ. ಸಾಧಾರಣವಾಗಿ ವೀಣಾ ಕಚೇರಿಗಳಲ್ಲಿ ಪಿಟೀಲಿಲ್ಲದ ಕಾರಣ,


ವಿದುಷಿ ಶ್ಯಾಮಲಾ ಜಿ. ಭಾವೆ

ಮೃದಂಗ ಮತ್ತು ಘಟವಾದಕರು ಎದುರು ಬದರಾಗಿ ಕೂರುತ್ತಾರೆ. ಒಮ್ಮೆ ಒಂದು ವೀಣಾ ಕಚೇರಿ ಯಲ್ಲಿ ಘಟ ನುಡಿಸುವುದು ಮಹಿಳೆ ಎಂದು ಮೃದಂಗ ವಾದಕರಿಗೆ ತಿಳಿದಮೇಲೆ, ಅವರು ಸ್ವಲ್ಪ ಅಸಮಾಧಾನವಾಗಿ ನೀನು ಎದುರಿಗೆ ಕುಳಿತು ಕೊಳ್ಳುವುದು ಬೇಡ, ಪಕ್ಕದಲ್ಲಿ ಹಿಂದುಗಡೆ ಕುಳಿತುಕೊ, ಎಂದರು. ಆದರೆ ಸಭೆಯವರು ಅದಕ್ಕೆ ಒಪ್ಪಲಿಲ್ಲ. ನಾನು ಎದುರಿಗೆ ಕುಳಿತೆ. ಅವರಿಗೆ ಅಸಮಾಧಾನ ಎಷ್ಟಿತ್ತೆಂದರೆ, ತನಿಯನ್ನು ನುಡಿಸಿದರೆ ಎಲ್ಲಿ ನನಗೆ ಅವಕಾಶ ನೀಡಬೇಕಾಗುತ್ತದೋ ಎಂದು ಕಚೇರಿಯಲ್ಲಿ ತನಿಯನ್ನೇ ನುಡಿಸಲಿಲ್ಲ. ಆದರೆ ಸಭಿಕರೆಲ್ಲಾ ತನಿ ನುಡಿಸಲೇಬೇಕೆಂದು ಆಗ್ರಹ ಪಡಿಸಿದಾಗ, ವಿಧಿಯಿಲ್ಲದೇ ಅವರೂ ನುಡಿಸಿದರು, ನನಗೂ ನುಡಿಸಲು ಬಿಟ್ಟರು. ಹೀಗೆ ಕೆಲವೊಮ್ಮೆ ಯಾರೋ ಸಂಕುಚಿತ ಮನೋಭಾವವಿರುವ ಕೆಲವರಿಂದ ಕಹಿ ಘಟನೆಗಳು ನಡೆಯುತ್ತವೆ" ಎಂದು ತಮ್ಮ ಅಳಲನ್ನು ತೋಡಿಕೊಂಡರು. ಮಹಿಳಾ ಸಂಗೀತಗಾರರನ್ನು ಸೇರಿಸಿಕೊಂಡು ಘಟ–ತರಂಗ್ ಎಂಬ ವಾದ್ಯ ಗೋಷ್ಠಿಯನ್ನು ಪರಿಕಲ್ಪಿಸಿ, ನಿರ್ದೇಶಿಸಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುಕನ್ಯಾ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಪ್ರಖ್ಯಾತಖಂಜರಿ ವಾದಕರಾಗಿದ್ದ ಹೆಚ್.ಪಿ. ರಾಮಾಚಾರ್‌ರವರು 'ಮಹಿಳಾ ಲಯ ಮಾಧುರಿ' ಎಂಬ ಲಯವಾದ್ಯ ಗೋಷ್ಠಿಯನ್ನು ಪ್ರಾರಂಭಿಸಿ, ಬರೇ ಮಹಿಳೆಯರೇ ಇದರಲ್ಲಿ ಭಾಗವಹಿಸುವಂತೆ ಅವರಿಗೆ ಶಿಕ್ಷಣ ನೀಡಿ, ಅನೇಕ ಕಾರ್ಯಕ್ರಮಗಳನ್ನು ನೀಡುವಲ್ಲಿ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಿದ್ದಾರೆ. ಇಂದು ಅನೇಕ ಮಹಿಳೆಯರು ಲಯವಾದ್ಯಗಳಲ್ಲಿ ಪರಿಣಿತರಾಗಿದ್ದಾರೆ.



ವಿದುಷಿ ಬೇಗಂ ಅಖ್ತರ್

ಶಾಲಾ, ಕಾಲೇಜುಗಳಲ್ಲಿ ಸಂಗೀತ ಪ್ರಾರಂಭವಾದಂದಿನಿಂದ ಹೆಣ್ಣುಮಕ್ಕಳು ಸಂಗೀತದಲ್ಲಿ ಮುನ್ನಡೆಯುವುದಕ್ಕೆ ಅನೇಕ ಮಾರ್ಗಗಳು ತೆರೆದುಕೊಂಡುವು. ಜಿ. ಚೆನ್ನಮ್ಮನವರು ಬೆಂಗಳೂರಿನ ಬಸವನಗುಡಿ ಮತ್ತು ಬೊಂಬಾಯಿಯಲ್ಲಿ ಸಂಗೀತದ ಶಾಲೆಯನ್ನು ಪ್ರಾರಂಭಿಸಿ, ಅನೇಕ ಹೆಣ್ಣುಮಕ್ಕಳು ಅಲ್ಲಿ ಹೋಗಿ ಪಾಠ ಕಲಿಯಲು ಅವಕಾಶ ಕಲ್ಪಿಸಿಕೊಟ್ಟರು. ಬರೋಡದಲ್ಲಿರುವ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯ, ಮದರಾಸು ಮ್ಯೂಸಿಕ್ ಅಕಾಡೆಮಿ ಪ್ರಾರಂಭಿಸಿದ ಡಿಪ್ಲೊಮಾ ತರಗತಿ, ತಿರುವಾಂಕೂರಿನ ಸ್ವಾತಿ ತಿರುನಾಳ್ ಅಕಾಡೆಮಿ ಆಫ್ ಮ್ಯೂಸಿಕ್, ಬನಾರಸ್, ಮದರಾಸು, ಮೈಸೂರು, ಬೆಂಗಳೂರು, ತಿರುಪತಿ ವಿಶ್ವವಿದ್ಯಾಲಯಗಳು, ಭಾರತೀಯವಿದ್ಯಾಭವನಗಳಲ್ಲಿ ಸಂಗೀತದ ಕಲಿಕೆ ಪ್ರಾರಂಭವಾಯಿತು. ಅನೇಕ ಹೆಣ್ಣುಮಕ್ಕಳು ವಿಶ್ವವಿದ್ಯಾಲಯಗಳಲ್ಲಿ ಸಂಗೀತ ಕಲಿತರು. ಪ್ರೊ. ಸಾಂಬಮೂರ್ತಿ ಮುಂತಾದ ಹಿರಿಯ ಶಿಕ್ಷಕರು, ಹೆಣ್ಣುಮಕ್ಕಳು ಕಾಲೇಜಿಗೆ ಹೋಗಿ ಸಂಗೀತ ಕಲಿಯುವುದಕ್ಕೆ ಬಹಳ ಪ್ರೋತ್ಸಾಹಿಸುತ್ತಿದ್ದರು. ಸಂಗೀತದಲ್ಲಿ ಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆದು, ಅನೇಕ ಮಹಿಳೆಯರು ಸಂಗೀತ ಶಾಸ್ತ್ರದ ಅಧ್ಯಯನವನ್ನು ಮಾಡಿ ಎಮ್.ಫಿಲ್ ಮತ್ತು ಡಾಕ್ಟೊರೇಟ್ ಪದವಿಯನ್ನು ಪಡೆದು ಯಶಸ್ವಿ ಸಂಗೀತ ತಜ್ಞರೆನಿಸಿಕೊಂಡರು. ಶಾಂತಾ ಐಸಾಕ್, ಸೀತಾ, ಕಪಿಲಾ ವಾತ್ಸಾಯನ, ಪ್ರೇಮಲತಾ ಶರ್ಮ, ಕಮಲಾ ಪುರಂದರೆ, ಎಂ.ಬಿ. ವೇದವಲ್ಲಿ, ಎಸ್.ಎ.ಕೆ. ದುರ್ಗಾ, ಟಿ. ಶಚಿದೇವಿ, ರಂಗನಾಯಕಿ ಅಯ್ಯಂಗಾರ್

ಮುಂತಾದ ಇನ್ನೂ ಅನೇಕ ಮಹಿಳೆಯರು ಹೆಸರಾಂತ ಸಂಗೀತ ತಜ್ಞರೆನಿಸಿಕೊಂಡರು.

ಡಾ. ಪ್ರೇಮಲತ ಶರ್ಮಾ (ಕ್ರಿ.ಶ. 1927-1998) ಸಂಗೀತ ಶಾಸ್ತ್ರಜ್ಞರ ಒಂದು ಪೀಳಿಗೆಯನ್ನೇ ಬೆಳೆಸಿದರೆನ್ನಬಹುದು. ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ಸಂಗೀತಶಾಸ್ತ್ರ ಮತ್ತು ಸಂಶೋಧನ ವಿಭಾಗದ ಮುಖ್ಯಸ್ಥರಾಗಿದ್ದರು. ಸುಭದ್ರ ಚೌಧುರಿ, ಇಂದ್ರಾಣಿ ಚಕ್ರವರ್ತಿ (ಇಂದಿರಾ ಕಲಾಸಂಗೀತ ವಿಶ್ವವಿದ್ಯಾಲಯದ ಉಪಕುಲಪತಿ) ಕಮಲ ನೌಟಿಯಾಲ, ಎನ್. ರಾಮನಾಥನ್, ತೇಜ್‌ಸಿಂಗ್ ತಕ್, ರಿತ್ವಿಕ್ ಸನ್ಯಾಲ್, ಅನಿಲ್ ಬಿಹಾರಿ ಬಿಯೋಹರ್, ಸುಧಾಕರ್ ಭಟ್, ರಂಗನಾಯಕಿ ಅಯ್ಯಂಗಾರ್, ಹಾಗೂ ವಿದೇಶೀಯರಾದ ಬೆಟ್ಟಿನಾ ಬಾಮರ್, ಜೇಮ್ಸ್ ಆರ್‌ನಾಲ್ಡ್, ವೇನ್ ಹಾರ್ವಡ್ ಮತ್ತು ಇನ್ನೂ ಅನೇಕ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದರು. ಖೈರಾಘಡದ ಇಂದಿರಾ ಕಲಾಸಂಗೀತ ವಿಶ್ವವಿದ್ಯಾಲಯದ ಉಪಕುಲಪತಿಯಾಗಿಯೂ, ನವದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಉಪ ಸಭಾಪತಿಯಾಗಿಯೂ ಆಯ್ಕೆಯಾಗಿದ್ದರು. 1979ರಲ್ಲಿ ಪ್ರೇಮಲತಾ, ರಂಗನಾಯಕಿ ಅಯ್ಯಂಗಾರ್ ಅವರ ಜೊತೆಗೂಡಿ, ಸಂಗೀತ ನಾಟಕ ಅಕಾಡೆಮಿಯ ಕಾರ್ಯಕ್ರಮವಾಗಿ ಬೃಂದಾವನದಲ್ಲಿ ಧ್ರುಪದ್ ಮೇಳವನ್ನು ಆಯೋಜಿಸಿ, ನಶಿಸಿ ಹೋಗುತ್ತಿದ್ದ ಧ್ರುಪದ್ ಪ್ರಕಾರವನ್ನು ಉಳಿಸಲು ಶ್ರಮಪಟ್ಟಿದ್ದರು. ಮೇಲೆ ಸೂಚಿಸಿರುವ ಹೆಸರುಗಳೊಂದಿಗೆ ಡಾ. ಗೌರಿಕುಪ್ಪಸ್ವಾಮಿ, ಡಾ. ಪದ್ಮಾಮೂರ್ತಿ, ಡಾ. ಎನ್. ರಾಜಂ, ಶಶಿಕಲಾ ಕಾಯ್ಕಿಣಿ, ರತ್ನಶಿವಕುಮಾರ್ ಹಾಗೂ ಇನ್ನೂ ಅನೇಕರು ಕಾಲೇಜುಗಳಲ್ಲಿ ಪ್ರಾಚಾರ್ಯರಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದರು. ಬಿ.ವಿ.ಕೆ. ಶಾಸ್ತ್ರಿ, ಟಿ.ಎಸ್. ಪಾರ್ಥಸಾರಥಿ ಮುಂತಾದ ಸಂಗೀತ ತಜ್ಞರು, ಮಹಿಳೆಯರು ಸಂಶೋಧನೆ ನಡೆಸಲು ಹಾಗೂ ಭಾಷಣ ಮತ್ತು ಸೋದಾಹರಣ ಕಾರ್ಯಕ್ರಮಗಳನ್ನು ನೀಡಲು ಪ್ರೋತ್ಸಾಹಿಸುತ್ತಿದ್ದರಲ್ಲದೆ, ಮಾರ್ಗದರ್ಶನವನ್ನೂ ನೀಡುತ್ತಿದ್ದರು.

ಸುಮಾರು 30-35 ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನ ಸುಖಕರವಾಗಿದೆಯೆನ್ನಬಹುದು. ಸಂಗೀತದ ಪ್ರದರ್ಶನ ಭಾಗದಲ್ಲಿಯೇ ಆಗಲಿ, ಶಾಸ್ತ್ರದ ಭಾಗದಲ್ಲಿಯೇ ಆಗಲಿ ಮಹಿಳೆಯ ಸ್ಥಾನಮಾನ ಹೆಚ್ಚಿದೆ. ಅನೇಕ ವಿದ್ವಾಂಸರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ಸಂಗೀತ ಶಾಲೆ, ಸಂಸ್ಥೆಗಳನ್ನು ಪ್ರಾರಂಭಿಸಿ ಯಶಸ್ಸನ್ನು ಕಂಡಿದ್ದಾರೆ.


ವಿದುಷಿ ಎಂ.ಎಸ್. ಶೀಲಾ

ಕರ್ನಾಟಕ ಸಂಗೀತದ ಹಾಡುಗಾರರಲ್ಲಿ ಸೂಲಮಂಗಳಂ ಸಹೋದರಿಯರು, ರಾಧಾಜಯಲಕ್ಷ್ಮಿ, ಸಿ. ಸರೋಜ ಸಿ. ಲಲಿತ, ಸೀತಾಲಕ್ಷ್ಮಿ ವೆಂಕಟೇಶನ್, ಮಣಿ ಕೃಷ್ಣಸ್ವಾಮಿ, ಆರ್. ವೇದವಲ್ಲಿ, ಸುಗಂಧ ರಾಮನ್, ಸುಗುಣ ಪುರುಷೋತ್ತಮನ್, ಸಿ.ಕೆ. ತಾರಾ, ನೀಲಾ ರಾಂಗೋಪಾಲ್, ಜಿ.ಆರ್. ಜಿಯಾ, ರಾಜಮ್ಮ ಕೇಶವಮೂರ್ತಿ, ಸುಧಾರಘುನಾಥನ್, ಎಂ.ಎಸ್. ಶೀಲಾ, ನಾಗಮಣಿ ಶ್ರೀನಾಥ್, ಚಾರುಮತಿ ರಾಮಚಂದ್ರನ್, ಬಾಂಬೆಜಯಶ್ರೀ, ಡಾ. ಆರ್.ಎನ್. ಶ್ರೀಲತಾ, ಟಿ.ಎಸ್. ವಸಂತಮಾಧವಿ, ಟಿ.ಎಸ್. ರಮಾ, ಸೌಮ್ಯ, ನಿತ್ಯಶ್ರೀಮಹದೇವನ್, ಡಾ. ಉಮಾ ಗೋಪಾಲಸ್ವಾಮಿ, ಡಾ. ಸುಕನ್ಯಾ ಪ್ರಭಾಕರ್, ಡಾ. ನಾಗವಲ್ಲಿ ನಾಗರಾಜ್ ಮುಂತಾದ ಇನ್ನೂ ಅನೇಕ ಪ್ರಖ್ಯಾತ ಗಾಯಕಿಯರಿದ್ದಾರೆ. ಆರ್.ಎ. ರಮಾಮಣಿ, ಪದ್ಮಾ ಗುರುದತ್ ಮತ್ತು ಡಾ. ಟಿ.ಎಸ್. ಸತ್ಯವತಿ ಅವಧಾನ ಪಲ್ಲವಿ ಹಾಡುವಿಕೆಯಲ್ಲಿ ಪರಿಣತರು.



ವಿದುಷಿ ಟಿ.ಎಸ್. ಸತ್ಯವತಿ

ವೀಣಾ ವಾದಕರಲ್ಲಿ ತಿರುಮಲೆ ರಾಜಮ್ಮ, ನೀಲಮ್ಮ ಕಡಾಂಬಿ, ಎನ್. ಚೊಕ್ಕಮ್ಮ, ಎಮ್.ಕೆ. ಸರಸ್ವತಿ, ಟಿ. ಶಾರದ, ಗಾಯತ್ರಿ, ಜಯಂತಿ ಕುಮರೇಶ್, ಡಾ. ಸುಮಾ ಸುಧೀಂದ್ರ, ಶಾಂತಿರಾವ್ ಮುಂತಾದ ಇನ್ನೂ ಅನೇಕ ವಿದ್ವಾಂಸರಿದ್ದಾರೆ. ಕೊಳಲು ವಾದಕರಲ್ಲಿ ಸಿಕ್ಕಿಲ್ ಸಹೋದರಿಯರಾದ ನೀಲಾ ಮತ್ತು ಕುಂಜುಮಣಿ, ಅವರ ಪುತ್ರಿ ಮಾಲಾ, ಲೋಕಾಶಂಕರ್ ಮುಂತಾದವರು. ಪಿಟೀಲು ವಾದಕರಲ್ಲಿ ಟಿ. ರುಕ್ಮಿಣಿ, ಕನ್ಯಾಕುಮಾರಿ, ಲಾಲ್ಗುಡಿ ರಾಜಲಕ್ಷ್ಮಿ, ನಳಿನಾ ಮೋಹನ್ ಮುಂತಾದವರು. ಖಂಜರಿ ಮತ್ತು ಕೊನಗೋಲುವಿನಲ್ಲಿ ಲತಾ ರಾಮಾಚಾರ್. ನಾಗಸ್ವರ ವಾದಕರಲ್ಲಿ ಪ್ರಭಾವತಿ ಪಳನಿವೇಲ್ ಮತ್ತು ಇನ್ನು ಕೆಲವರು. ಗೋಟುವಾದ್ಯದಲ್ಲಿ ಉಷಾ ರಾಮಮೂರ್ತಿ, ಡಾ. ಗಾಯತ್ರಿ ರಾಜಾಪುರ್ ಕ್ಯಾಸೆಬಾಮ್. ಸಂಗೀತ ತಜ್ಞರು: ರತ್ನ ಶಿವಕುಮಾರ್, ಡಾ. ಟಿ.ಎನ್. ಪದ್ಮ, ಡಾ. ಮೀರಾ. ಆರ್. ಪ್ರಾಣೇಶ್ ಮುಂತಾದವರು.

ಕೆಲವು ವಿದುಷಿಯರು ಕರ್ನಾಟಕ, ಹಿಂದೂಸ್ತಾನಿ ಸಂಗೀತದ ಜುಗಲ್ಬಂದಿ, ವಿದೇಶಿ ಸಂಗೀತಗಾರರೊಂದಿಗೆ ಫ್ಯೂಶನ್ ಸಂಗೀತವನ್ನು ಪರಿಕಲ್ಪಿಸಿ, ನಿರ್ದೇಶಿಸಿದ್ದಾರೆ. ಇ.ಪಿ.ಅಲಮೇಲು, ಜಂಬೂ ಕಣ್ಣನ್, ಸುಧಾ ವಿ. ಮೂರ್ತಿ, ರೋಹಿಣಿ ಮಂಜುನಾಥ್ ಮುಂತಾದ ಅನೇಕ ಶಿಕ್ಷಕರು, ಹಲವಾರು ಶಿಷ್ಯರಿಗೆ ಸಂಗೀತವನ್ನು ಹೇಳಿಕೊಟ್ಟು ಎಲೆ ಮರೆಕಾಯಿಯಂತಿದ್ದಾರೆ.

ಸುಗಮ ಸಂಗೀತ ಕ್ಷೇತ್ರದಲ್ಲಿ ಸೋಹನಕುಮಾರಿ, ಮೋಹನಕುಮಾರಿ (ಪಿ. ಕಾಳಿಂಗರಾಯರೊಂದಿಗೆ ಹಾಡುತ್ತಿದ್ದರು) ಹೆಚ್.ಆರ್. ಲೀಲಾವತಿ, ಬಿ.ಕೆ. ಸುಮಿತ್ರಾ, ಶಾಂತಾ ಜಯತೀರ್ಥ, ಕಸ್ತೂರಿ ಶಂಕರ್, ರತ್ನಮಾಲಾ ಪ್ರಕಾಶ್, ವಾಣಿಜಯರಾಂ, ಮಾಲತಿಶರ್ಮಾ, ಬಿ.ಆರ್. ಛಾಯಾ, ಡಾ. ಜಯಶ್ರೀ ಅರವಿಂದ್, ಕೋರಲ್ ಮ್ಯೂಸಿಕ್ ಶಿಕ್ಷಣ ನೀಡುವುದರಲ್ಲಿ ಡಾ. ಕಾವೇರಿ ಶ್ರೀಧರ್... ಮುಂತಾದವರ ಕೊಡುಗೆ ಅಪಾರ. ಸಿನಿಮಾ ಸಂಗೀತದಲ್ಲಿ ಶಂಶಾದ್ ಬೇಗಮ್, ಲತಾ ಮಂಗೇಶ್‌ಕರ್, ಆಶಾ ಭೋಂಸ್ಲೆ, ಪಿ. ಸುಶೀಲ, ಎಸ್. ಜಾನಕಿ, ಶ್ರೀರಂಗಂ ಗೋಪಾಲರತ್ನಂ, ಮಂಜುಳಾ ಗುರುರಾಜ್, ಚಿತ್ರ, ಕವಿತಾ ಕೃಷ್ಣಮೂರ್ತಿ ಮುಂತಾದವರು.

ಇನ್ನೂ ನೂರಾರು ವಿದುಷಿಯರು ಮಹತ್ತರ ಸಾಧನೆಗಳನ್ನು ಮಾಡಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ. ಆದರೆ ಪುಟಗಳ ಅಭಾವದಿಂದ ಎಲ್ಲರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಲಿಕ್ಕೆ ಸಾಧ್ಯವಾಗಿಲ್ಲ. ಅವರಲ್ಲಿ ಕ್ಷಮೆ ಯಾಚಿಸುತ್ತೇನೆ.

(ಮುಗಿಯಿತು)



Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

Registered Magazine

Posted on 9th of every month at MBC, Bangalore GPO
Total No. of Pages: 28

ರವಾನೆ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು – 560 018